ಸಂಪುಟ: ೦೬/ ಸಂಚಿಕೆ: ೨೭೪/ರವಿವಾರ ದಿನಾಂಕ : ೨೯-೧೨-೨೦೨೪/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ


ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 274/ SUNDAY Date : 29-12-2024/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ಸಂಸ್ಕಾರಯುತ ವಿದ್ಯೆಯಿಂದ ಮಾತ್ರ ಜೀವನದಲ್ಲಿ ಸಕಲವೂ ಪ್ರಾಪ್ತಿ: ಡಾ. ಶಿವಾನಂದ ಭಾರತಿ ಸ್ವಾಮೀಜಿ



ಬೈಲಹೊಂಗಲ– ಪ್ರತಿಯೊಬ್ಬರು ಜೀವನದಲ್ಲಿ ಶಾಂತಿ, ನೆಮ್ಮದಿಯ ಬದುಕಿನೊಂದಿಗೆ ಸಾಧನೆ ಮಾಡಬೇಕಾದರೆ, ಸಂಸ್ಕಾರಯುತ ವಿದ್ಯೆಯಿಂದ ಮಾತ್ರ ಸಾಧ್ಯವೆಂದು ಸುಕ್ಷೇತ್ರ ಇಂಚಲ ಶಿವಯೋಗಿಶ್ವರ ಸಾಧು ಸಂಸ್ಥಾನ ಮಠದ ಪೀಠಾಧಿಪತಿ ಡಾ. ಶಿವಾನಂದ ಭಾರತಿ ಸ್ವಾಮೀಜಿ ಹೇಳಿದರು.

ಅವರು ಸಮೀಪದ ಸುಕ್ಷೇತ್ರ ಇಂಚಲ ಗ್ರಾಮದಲ್ಲಿ ಶನಿವಾರ ಜರುಗಿದ ಡಾ. ಶಿವಾನಂದ ಭಾರತಿ ಸ್ವಾಮೀಜಿಗಳವರ 85 ನೇ ವರ್ಷದ ವರ್ದಂತಿ ಮಹೋತ್ಸವ, ಶ್ರೀಗಳ 55 ನೇ ವರ್ಷದ ಪೀಠಾರೋಹಣ,55 ನೇ ವರ್ಷದ ಅಖಿಲ ಭಾರತ ವೇದಾಂತ ಪರಿಷತ್,ಶ್ರೀ ಶಿವಯೋಗಿಶ್ವರ ಶಿಕ್ಷಣ ಸಂಸ್ಥೆಯ 50 ನೇ ವರ್ಷದ ಸುವರ್ಣ ಭಾರತಿ ಸಮಾರಂಭ ಹಾಗೂ ಶ್ರೀ ಶಿವಯೋಗಿಶ್ವರ ಆಂಗ್ಲ ಮಾಧ್ಯಮ ಶಾಲಾ ಕಟ್ಟಡ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ ವಿದ್ಯೆ ಇಲ್ಲದವನ ಜೀವನ ನಿರರ್ಥಕವಾಗಿದೆ. ಜೀವನದಲ್ಲಿ ವಿದ್ಯೆಯು ತನ್ನದೇಯಾದ ಪಾವಿತ್ರ್ಯತೆಯನ್ನು ಹೊಂದಿದೆ. ಅದನ್ನು ಅರಿತು ಶ್ರದ್ಧಾಭಕ್ತಿಯಿಂದ ವಿದ್ಯೆ ಕಲಿತು ದೇವಿಯ ಸಾಕ್ಷಾತ್ಕಾರಕ್ಕೆ ಪಾತ್ರವಾದಾಗ ಮಾತ್ರ ಜೀವನದಲ್ಲಿ ಶಾಂತಿ, ನೆಮ್ಮದಿ, ಕೀರ್ತಿ, ಹಣ ಎಲ್ಲವನ್ನೂ ಪ್ರಾಪ್ತಿ ಮಾಡಿಕೊಂಡು ಸಾರ್ಥಕ ಜೀವನ ನಡೆಸಲು ಸಾಧ್ಯ. ಅದೇ ರೀತಿ ಕಲ್ಲನ್ನು ಶಿಲೆಯಾಗಿಸಿದ ಶಿಲ್ಪಿಯಂತೆ ಕಾರ್ಯ ನಿರ್ವಹಿಸಿದ ಗುರುಗಳನ್ನು ಗೌರವಿಸುವುದು ಪ್ರತಿಯೊಬ್ಬ ಶಿಷ್ಯನ ಆದ್ಯ ಕರ್ತವ್ಯ ವಾಗಿದೆ. ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು ಸಂಸ್ಥೆಯ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದು, ಅವರಿಗೂ ಸಕಲರಿಗೂ ಶುಭವಾಗಲಿ ಎಂದರು.

ಮಾಜಿ ವಿಧಾನ ಪರಿಷತ್ ಸದಸ್ಯ ಮಹಾಂತೇಶ ಕವಟಗಿಮಠ ಮಾತನಾಡಿ, ಶ್ರೀಮಠದಲ್ಲಿ ಆಧ್ಯಾತ್ಮ, ಅರೋಗ್ಯ ,ಪ್ರಸಾದ ದಂತಹ ತ್ರಿವಿಧ ದಾಸೋಹ ನಡೆಸುವುದರ ಜೊತೆಗೆ ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕಿದ ಡಾ. ಶಿವಾನಂದ ಭಾರತಿ ಶ್ರೀಗಳು ಲಕ್ಷಾಂತರ ಬಡ ಮಕ್ಕಳಿಗೆ ದಾರಿದೀಪವಾಗಿದ್ದಾರೆ ಎಂದರು.

ಸಂಸ್ಥೆಯ ಹಳೆಯ ವಿದ್ಯಾರ್ಥಿ ದಾವಣಗೆರೆ ಆಹಾರ ಇಲಾಖೆಯ ಜಂಟೀ ನಿರ್ದೇಶಕ ಸಿದ್ದರಾಮ ಮಾರಿಹಾಳ, ಶರಣಗೌಡ ಪಾಟೀಲ ಮಾತನಾಡಿ, ಪೂಜ್ಯರ ಸಾನಿಧ್ಯದ ಮಠದಲ್ಲಿ ರಾಜಕೀಯಕ್ಕೆ ಅವಕಾಶವಿಲ್ಲ, ಪ್ರಚಾರದ ಆಡಂಭರವಿಲ್ಲ, ಧಾರ್ಮಿಕತೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಮಾತ್ರ ಮಾನ್ಯತೆ ಇರವದು ಎಲ್ಲರಿಗೂ ಮಾದರಿ ಎಂದರು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಪಂಚನಗೌಡ ದ್ಯಾಮನಗೌಡರ, ಜಿಪಂ ಮಾಜಿ ಸದಸ್ಯೆ ರೋಹಿಣಿ ಪಾಟೀಲ, ಮಾತನಾಡಿದರು.

ಹಂಪಿ ಹೇಮಕೂಟದ ವಿದ್ಯಾನಂದ ಭಾರತಿ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ಹುಬ್ಬಳ್ಳಿಯ ರಾಮಾನಂದ ಸ್ವಾಮೀಜಿ, ಕೊಳ್ಳುರ ಬಸವಾನಂದ ಭಾರತಿ ಸ್ವಾಮಿಜಿ, ಮಲ್ಲಾಪುರ ಗಾಳೇಶ್ವರ ಮಠದ ಚಿದಾನಂದ ಸ್ವಾಮೀಜಿ, ಸಚ್ಚಿದಾನಂದ ಸ್ವಾಮೀಜಿ, ನಿಂಗಯ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಶಾಸಕರಾದ ಮಹಾಂತೇಶ ಕೌಜಲಗಿ,ಬಾಬಾಸಾಹೇಬ ಪಾಟೀಲ, ಮಾಜಿ ಶಾಸಕರುಗಳಾದ ಡಾ.ವಿಶ್ವನಾಥ ಪಾಟೀಲ, ಮಹಾಂತೇಶ ದೊಡ್ಡಗೌಡರ,

ಪರಪ್ಪ ಸವದಿ, ಉದ್ಯಮಿ ವಿಜಯ ಮೆಟಗುಡ್ಡ,

ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮೋಹನ ದಂಡಿನ, ಎ.ಎನ್. ಪ್ಯಾಟಿ, ಸಂಸ್ಥೆಯ ಮಾಜಿ ಚೇರಮನ್ನರಾದ ಡಿ. ಬಿ. ಮಲ್ಲೂರ, ಎಸ್. ಎಂ. ರಾವುತನವರ, ಜಿ?ಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಸದೇಪ್ಪ ವಾರಿ, ಆರ್.ಟಿ. ಬಳಿಗಾರ, ಲೆಪ್ಟನಂಟ್ ಕರ್ನಲ್ ಸಿದ್ದರಾಮ ಜಂಬಗಿ,ಡಾ. ಬಿ.ಎಸ್. ಮಹಾಂತಶೆಟ್ಟಿ, ಬಸವರಾಜ ಜನ್ಮಟ್ಟಿ, ಶಿವಾನಂದ ಬೆಳಗಾಂವಿ, ಗ್ರಾಪಂ ಅಧ್ಯಕ್ಷ ಶಂಕರ ಬಾಗೇವಾಡಿ, ಎಸ್.ಡಿ. ಗಂಗನ್ನವರ, ಸಿಪಿಐಗಳಾದ ಬಸವರಾಜ ಕರವಿನಕೊಪ್ಪ, ಶಿವಾನಂದ ಗುಡಗನಟ್ಟಿ ಹಾಗೂ ಸಾವಿರಾರು ಹಳೆಯ ವಿದ್ಯಾರ್ಥಿಗಳು, ಭಕ್ತರು ಇದ್ದರು. ಡಾ. ಭಾರತಿ ಅಪ್ಪನವರ ವಾಣಿಯ ಸದ್ಗುರು ದರ್ಶನ,ಡಾ. ಮಹಾಂತೇಶ ರುದ್ರಾಪೂರಿ ಬರೆದ ಆಯುರ್ವೇದ ವಿಷಯದ ರಸಮಂತನ ಗ್ರಂಥಗಳನ್ನು, ಸುವರ್ಣ ಮಹೋತ್ಸವದ ಅಂಚೆ ಲಕೋಟೆ ಬಿಡುಗಡೆಗೊಳಿಸಲಾಯಿತು. ಹಳೆಯ ವಿದ್ಯಾರ್ಥಿಗಳಿಂದ ನಿರ್ಮಾಣವಾಗಲಿರುವ ಆಂಗ್ಲ ಮಾದ್ಯಮ ಶಾಲೆಯ ನೂತನ ಕಟ್ಟಡದ ಉದ್ಘಾಟಣೆ ಜರುಗಿತು.

ಇದಕ್ಕೂ ಮುಂಚೆ ಶಿವಯೋಗೀಶ್ವರ ಗ್ರಾಮೀಣ ಆಯುರ್ವೇದಿಕ ಮಹಾವಿದ್ಯಾಲಯದಿಂದ ಸರಸ್ವತಿ ದೇವಿ ಪ್ರತಿಮೆಗೆ ಪೂಜೆ ಸಲ್ಲಿಸಿ, ಹಳೆಯ ವಿದ್ಯಾರ್ಥಿಗಳಿಂದ ಶ್ರೀಗಳನ್ನು ಬೆಳ್ಳಿಯ ಸಾರೋಟದಲ್ಲಿ ಮೆರವಣಿಗೆ ಮೂಲಕ ಶ್ರೀಮಠಕ್ಕೆ ಕರೆತರಲಾಯಿತು. ನೂರಾರು ರಕ್ತದಾನಿಗಳು ರಕ್ತದಾನ ಮಾಡಿದರು. ಉಚಿತ ನೇತ್ರ ತಪಾಸಣೆ, ನೇತ್ರ ಶಸ್ತ್ರಚಿಕಿತ್ಸೆ, ತಪಾಸಣೆ ಜರುಗಿತು.

## ಕಲಬುರಗಿಯನ್ನು ಬಿಜೆಪಿ ಗೂಂಡಾಗಿರಿಯ ಕೊಂಪೆಯಾಗಲು ಅವಕಾಶ ನೀಡುವುದಿಲ್ಲ : ಪ್ರಿಯಾಂಕ್ ಖರ್ಗೆ





ಬೆಂಗಳೂರು : 'ಕಲಬುರಗಿ ಎಂದಿಗೂ ಕಲ್ಯಾಣದ ನಾಡಾಗಿರುತ್ತದೆಯೇ ಹೊರತು, ಬಿಜೆಪಿಯ ಗೂಂಡಾಗಿರಿಯ ಕೊಂಪೆಯಾಗಲು ಸಾಧ್ಯವಿಲ್ಲ. ಕಲಬುರಗಿಯ ಜನತೆ ಅದಕ್ಕೆ ಅವಕಾಶವನ್ನೂ ನೀಡುವುದಿಲ್ಲ' ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಇಂದಿಲ್ಲಿ, ಬಿಜೆಪಿಗೆ ಎಚ್ಚರಿಕೆ ನೀಡಿದ್ದಾರೆ.

ಶನಿವಾರ ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ಪ್ರಿಯಾಂಕ್ ಖರ್ಗೆ, 'ಅಕ್ಕಿ ಕಳ್ಳತನ, ಗೂಂಡಾಗಿರಿಯಲ್ಲಿ ತೊಡಗಿದವನನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಮೆರೆಸುವ ಮೂಲಕ ಕಲಬುರಗಿಯನ್ನು ಮಾಫಿಯಾ ಅಡ್ಡೆಯನ್ನಾಗಿಸುವ ಬಿಜೆಪಿ ಪ್ರಯತ್ನವು ಯಶಸ್ವಿಯಾಗದಂತೆ ನಾನು ತಡೆಯೊಡ್ಡಿರುವುದು ಬಿಜೆಪಿಗೆ ಮತ್ತು ಬಿಜೆಪಿಯ ಡ್ರಾಮಾ ಸೇನೆಗೆ ತಲೆಬಿಸಿಯಾಗಿ ಪರಿಣಮಿಸಿದೆ' ಎಂದು ಟೀಕಿಸಿದ್ದಾರೆ.

ಬಿಜೆಪಿ, ಚಿತ್ತಾಪುರದ ನಿಮ್ಮ ಘನ ಅಭ್ಯರ್ಥಿಯು ರೌಡಿಸಂ, ಗೂಂಡಾಗಿರಿಗೆ ಹೆಸರುವಾಸಿಯಾದವನು ಅಲ್ಲವೇ?. ಅಕ್ಕಿ ಕಳ್ಳತನವನ್ನೇ ಉದ್ಯೋಗ ಮಾಡಿಕೊಂಡಿರುವ ನಿಮ್ಮ ಅಭ್ಯರ್ಥಿಯ ಮೇಲೆ ನಿಮ್ಮದೇ ಆಡಳಿತದಲ್ಲಿ ಮೂವತ್ತಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವಲ್ಲವೇ?. ನಿಮ್ಮ ಮಾಜಿ ಮುಖ್ಯಮಂತ್ರಿ, ನಿಮ್ಮ ಮಹಾನ್ ನಾಯಕರುಗಳು ಇದೇ ಅಕ್ಕಿ ಕಳ್ಳನ ಪರ ಚುನಾವಣಾ ಪ್ರಚಾರ ಮಾಡಿದ್ದರಲ್ಲವೇ?' ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

'ಬಡವರ ಅಕ್ಕಿಯನ್ನಷ್ಟೇ ಅಲ್ಲ, ಅಂಗನವಾಡಿ ಮಕ್ಕಳ ಪಾಲಿನ ಪೌಷ್ಟಿಕ ಆಹಾರವನ್ನೂ ದೋಚಿರುವ ನಿಮ್ಮ ಘನ ಅಭ್ಯರ್ಥಿ ಇತ್ತೀಚೆಗೆ ಎರಡು ತಿಂಗಳು ಜೈಲಿಗೆ ಹೋಗಿ ಬಂದಿದ್ದಾನಲ್ಲವೇ?. ರೈತರಿಗೆ ವಂಚಿಸಿದ ಪ್ರಕರಣದಲ್ಲಿ ನಿಮ್ಮ ಮಾಜಿ ಶಾಸಕರ ಮೇಲೆ ಸಿಬಿಐ ಪ್ರಕರಣ ದಾಖಲಿಸಿದ್ದನ್ನು ಮರೆತಿದ್ದೀರಾ?. ಕಲಬುರಗಿಯಲ್ಲಿ ಐಪಿಎಲ್ ಬೆಟ್ಟಿಂಗ್ ದಂಧೆಯ ರೂವಾರಿಗಳು ಯಾರು ಎಂಬ ಪ್ರಶ್ನೆಗೆ ನಿಮ್ಮದೇ ಪಕ್ಷದ ಶಾಸಕನ ಬಳಿ ಉತ್ತರ ಕೇಳಿ ನೋಡಿ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಪೊಲೀಸ್ ಪೇದೆಯ ಮೇಲೆ ಲಾರಿ ಹರಿಸಿ ಹತ್ಯೆ ಮಾಡಿದ ಅಕ್ರಮ ಮರಳು ದಂಧೆಕೋರ ಬಿಜೆಪಿ ಕಾರ್ಯಕರ್ತ ಎಂಬ ಸತ್ಯವನ್ನು ಬಿಜೆಪಿ ಮರೆತಿದೆಯೇ ಅಥವಾ ಮರೆಸಲು ಪ್ರಯತ್ನಿಸುತ್ತಿದೆಯೇ?. ನಕಲಿ ಸ್ವಾಮಿಯೊಬ್ಬನನ್ನು ಮುಂದಿಟ್ಟುಕೊಂಡು ಕಲಬುರಗಿಯಲ್ಲಿ ರಾಜಕೀಯ ಅಸ್ತಿತ್ವ ಕಂಡುಕೊಳ್ಳುವ ದುರಾವಸ್ಥೆಗೆ ತಲುಪಿರುವ ಬಿಜೆಪಿ ಅರಾಜಕತೆ ಸೃಷ್ಟಿಸಿ ತಮ್ಮ ಬೇಳೆ ಬೇಯಿಸುವ ಪ್ರಯತ್ನದಲ್ಲಿದೆ' ಎಂದು ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.




## ಇಂದು ಅಯ್ಯಪ್ಪಸ್ವಾಮಿ ಮಹಾಪೂಜೆ ಅನ್ನಸಂತರ್ಪಣೆ ಕಾರ್ಯಕ್ರಮ



ಬೆಳಗಾವಿ 28 : ಸ್ಥಳೀಯ ರುಕ್ಮಿಣಿ ನಗರ ಕಣಬರ್ಗಿ ರಸ್ತೆಯ ಶ್ರೀ ಅಯ್ಯಪ್ಪಸ್ವಾಮಿ ಮಹಾಪೂಜೆ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮ ದಿ.29 ರಂದು ರವಿವಾರ ಸಡಗರದಿಂದ ನಡೆಯಲಿದೆ.

ಈ ನಿಮಿತ್ತ ದಿ.29 ರಂದು ಬೆಳಿಗ್ಗೆ 5 ರಿಂದ ಅಭಿಷೇಕ 9ರಿಂದ ಸಹಸ್ರ ನಾಮಾರ್ಚನೆ, 10–30 ರಿಂದ ಭಜನೆ ಕಾರ್ಯಕ್ರಮ ನಡೆಯಲಿದೆ.

ಮಧ್ಯಾಹ್ನ 12–30 ರಿಂದ ಮಂಗಳಾರತಿ 1–30 ರಂದ ಅನ್ನಪ್ರಸಾದ ನೆಡಯಲಿದೆ ಸಂಜೆ 7ರಿಂದ ಲಕ್ಷ ದಿಪೋತ್ಸವ ನಡೆಯಲಿದೆ. ಈ ಕಾರ್ಯಕ್ರಮಗಳಿಗೆಸರ್ವ ಭಕ್ತರು ಆಗಮಿಸಿ ಸಹಕರಿಸಬೇಕೆಂದು ಶ್ರೀ ನವದುರ್ಗಾ ಅಯ್ಯಪ್ಪ ಮಂದಿರ ಸೇವಾ ಸಮಿತಿ ಅಧ್ಯಕ್ಷ ಆನಂದ ಶೆಟ್ಟಿ, ಕಾರ್ಯದರ್ಶಿ ಮಹಾವೀರ ಜೈನ, ಪ್ರಧಾನ ಅರ್ಚಕ ಸುರೇಂದ್ರ ಗುರುಸ್ವಾಮಿ ಇವರು ಜಂಟಿಯಾಗಿ ಕೋರಿದ್ದಾರೆ.

## ದೇಹ- ಮನಸ್ಸು ಶುದ್ಧಗೊಳಿಸಲು ದೇವರ ನಾಮಸ್ಮರಣೆ ಸಹಕಾರಿಯಾಗಲಿದೆ - ಮಡಿವಾಳೇಶ್ವರ ಸ್ವಾಮೀಜಿ



ಬೈಲಹೊಂಗಲ: ದೇಹ, ಮನಸ್ಸು ಶುದ್ದಗೊಳಿಸಲು ದೇವರ ನಾಮಸ್ಮರಣೆಯ ಪಾದಯಾತ್ರೆ ಸಹಕಾರಿಯಾಗಲಿದೆ ಎಂದು ಪಟ್ಟಣದ ಶ್ರೀ ಗುರು ಮಡಿವಾಳೇಶ್ವರಮಠದ ಪೀಠಾಧಿಪತಿ ಮಡಿವಾಳೇಶ್ವರ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಶ್ರೀ ಗುರು ಮಡಿವಾಳೇಶ್ವರಮಠದ 43ನೇ ವರ್ಷದ ಜಾತ್ರಾ ಮಹೋತ್ಸವ, ನೂತನ ಶಿಲಾಮಠದ ಲೋಕಾರ್ಪಣೆ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜ.5 ವರೆಗೆ ಪ್ರಾರಂಭಿಸಿದ ಶ್ರೀ ಮಡಿವಾಳೇಶ್ವರರ ಜ್ಯೋತಿಯಾತ್ರೆಯ ನೇತೃತ್ವ ವಹಿಸಿ, ಎಂ.ಜಿ. ಹೌಸಿಂಗ ಕಾಲೋನಿಯ ಉದ್ಭವ ಬಸವೇಶ್ವರ ದೇವಸ್ಥಾನದಲ್ಲಿ ಮಾತನಾಡಿ, ಶ್ರೀ ಗುರು ಮಡಿವಾಳೇಶ್ವರರ ಆದಿಯಾಗಿ ಸಕಲ ಗುರುಗಳು ಪಾದಯಾತ್ರೆ ಮೂಲಕ ನಾಡನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವ ಪರಂಪರೆ ರೂಢಿಸಿದ್ದಾರೆ. 'ಗುರುಗಳ ಮಾರ್ಗದರ್ಶನ ಪಡೆದು ಧರ್ಮದ ನೆರಳಿನಲ್ಲಿ ಬದುಕು ಕಟ್ಟಿಕೊಳ್ಳಬೇಕು. ನಮ್ಮ ಆಚಾರ, ವಿಚಾರ, ಪರಂಪರೆ ಉಳಿಸಿ, ಬೆಳೆಸಿಕೊಂಡು ಮುಂದೆ ಸಾಗಬೇಕು.ಅಂದಾಗ ಮಾತ್ರ ಬದುಕಿಗೆ ಗೌರವ ಬರುತ್ತದೆ' ಎಂದರು.

ಖ್ಯಾತ ಪ್ರವಚನಕಾರರಾದ ಬಳುಟಗಿ ಶಿವಕುಮಾರ ಸ್ವಾಮೀಜಿ ಮಾತನಾಡಿ, ನಮ್ಮ ಸಂಸ್ಕಾರ, ಧಾರ್ಮಿಕತೆಯಲ್ಲಿ ಅಪಾರ ಶಕ್ತಿ ಅಡಗಿದೆ. ತಾಯಂದಿರು ಮಕ್ಕಳಿಗೆ ನಮ್ಮ ಪರಂಪರೆ ತಿಳಿಸುವ ಮೂಲಕ ಅವರ ಮುಂದಿನ ಜೀವನಕ್ಕೆ ದಾರಿದೀಪ ಆಗಬೇಕೆಂದರು.ಪ್ರತಿ ದಿನ ಬೆಳಿಗ್ಗೆ ಪಟ್ಟಣದ್ಯಾಂತ ಜ್ಯೋತಿ ಯಾತ್ರೆ ಪ್ರಾರಂಭವಾಗಿದ್ದು ಭಕ್ತರು ಭಾಗವಹಿಸಿ, ಆದ್ಯಾತ್ಮಿಕತೆ ಅಳವಡಿಸಿಕೊಳ್ಳಬೇಕೆಂದರು.

ಪತ್ರಕರ್ತ ಬಸವರಾಜ ಕಲಾದಗಿ, ನಿವೃತ್ತ ಯೋಧ ಗಂಗಪ್ಪ ಗುಗ್ಗರಿ ಮಾತನಾಡಿ, ಶ್ರೀ ಮಠದ ಮೂಲಕ ಜ್ಯೋತಿ ಯಾತ್ರೆ ಪ್ರಾರಂಭಿಸಿ, ಧಾರ್ಮಿಕತೆ ಬಿತ್ತುತ್ತಿರುವ ಪೂಜ್ಯರ ಕಾರ್ಯ ಶ್ಲಾಘಣೀಯವಾಗಿದ್ದು, ಭಕ್ತರು ತನು, ಮನ, ಧನದಿಂದ ಶ್ರೀಮಠದ ಸೇವಾ ಕಾರ್ಯಕ್ಕೆ ಕೈಜೋಡಿಸಬೇಕೆಂದರು.

ವೇ.ಮೂ. ಗದಗಯ್ಯ ರುದ್ರಾಕ್ಷಿಮಠ, ವಿಶ್ವಹಿಂದೂ ಪರಿಷದ್ ಜಿಲ್ಲಾ ಘಟಕದ ಅಧ್ಯಕ್ಷ ಪ್ರಮೋದಕುಮಾರ ವಕ್ಕುಂದಮಠ, ಸೋಮಲಿಂಗಪ್ಪ ಹರ್ಲಾಪೂರ, ಬಸವರಾಜ ನಾಗನೂರ, ಶ್ರೀಕಾಂತ ಪತ್ತಾರ, ಶಿವಪುತ್ರಪ್ಪ ತಲ್ಲೂರ, ಬಸವರಾಜ ಹರ್ಲಾಪೂರ, ಗೂಳಪ್ಪ ಗೂಳನ್ನವರ, ವಿವೇಕಾನಂದ ಪೂಜಾರ, ರಾಜು ಬಡಿಗೇರ, ಅಶೋಕ ಸವದತ್ತಿ, ಶಿವಪ್ಪ ದೊಡವಾಡ, ಅಡಿವೆಪ್ಪ ಕುರಿ, ಈರಪ್ಪ ಹಣಸಿ, ಮಹಾಂತೇಶ ಹಣಸಿ, ಮಲ್ಲಪ್ಪ ಹೊಂಗಲ, ಶಿವಾನಂದ ಹತ್ತರಕಿ ಹಾಗೂ ಇತರರು ಇದ್ದರು. ಗಿರೀಶ ಹರಕುಣಿ ಸ್ವಾಗತಿಸಿ, ನಿರೂಪಿಸಿದರು.

27ಬಿಎಲ್‌ಎಚ್10

ಬೈಲಹೊಂಗಲದ ಶ್ರೀ ಗುರು ಮಡಿವಾಳೇಶ್ವರಮಠದ 43ನೇ ವರ್ಷದ ಜಾತ್ರಾ ಮಹೋತ್ಸವ, ನೂತನ ಶಿಲಾಮಠದ ಲೋಕಾರ್ಪಣೆ ಅಂಗವಾಗಿ ಶ್ರೀ ಮಡಿವಾಳೇಶ್ವರರ ಜ್ಯೋತಿಯಾತ್ರೆ ಪ್ರಾರಂಭವಾಗಿದೆ. ಮಡಿವಾಳೇಶ್ವರ ಸ್ವಾಮೀಜಿ, ಪ್ರಮೋದಕುಮಾರ ವಕ್ಕುಂದಮಠ, ಬಸವರಾಜ ಕಲಾದಗಿ, ಗಂಗಪ್ಪ ಗುಗ್ಗರಿ ಇತರರು ಇದ್ದರು.

## ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಪಂಚಭೂತಗಳಲ್ಲಿ ಲೀನ



ನವದೆಹಲಿ: ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಪಂಚಭೂತಗಳಲ್ಲಿ ಲೀನರಾಗಿದ್ದಾರೆ. ಭಾರತದ ಆರ್ಥಿಕ ಸುಧಾರಣೆಗಳ ಶಿಲ್ಪಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಶನಿವಾರದಂದು ದೆಹಲಿಯ ನಿಗಮಬೋಧ ಘಾಟ್‌ನಲ್ಲಿ ನಡೆದ ಅಂತಿಮ ವಿಧಿವಿಧಾನದಲ್ಲಿ ಪೂರ್ಣ ಸರ್ಕಾರಿ ಗೌರವ, ಗನ್ ಸಲ್ಯೂಟ್ ನೀಡಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಮನಮೋಹನ್ ಸಿಂಗ್ ಅವರ ಪುತ್ರಿ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಸಿಖ್ ಸಂಪ್ರದಾಯದಂತೆ ಅಂತ್ಯಕ್ರಿಯೆ ನೆರವೇರಿದೆ.

ಮನಮೋಹನ್ ಸಿಂಗ್ ಅವರ ಅಂತ್ಯಕ್ರಿಯೆ ಇಂದು ದೆಹಲಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆದಿದೆ. ಇದಕ್ಕೂ ಮುನ್ನ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವಾರು ಗಣ್ಯರು ರಕ್ಷಣಾ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದರು. ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಜನರಲ್ ಅನಿಲ್ ಚೌಹಾಣ್ ಮತ್ತು ಮೂರು ಸೇನಾ ಮುಖ್ಯಸ್ಥರು ಕೂಡ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿರುವ ಕಾಂಗ್ರೆಸ್ ಪ್ರಧಾನ ಕಛೇರಿಯಿಂದ ಡಾ. ಮನಮೋಹನ್ ಸಿಂಗ್ ಅವರ ಅಂತಿಮ ಯಾತ್ರೆಯನ್ನು ಆರಂಭಿಸಲಾಯಿತು. ಅಲ್ಲಿ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮುಂತಾದ ಕಾಂಗ್ರೆಸ್ ಪಕ್ಷದ ನಾಯಕರು ಮಾಜಿ ಪ್ರಧಾನಿಗೆ ಗೌರವ ಸಲ್ಲಿಸಿದರು.

ಬಳಿಕ ಮನಮೋಹನ್ ಸಿಂಗ್ ಅವರ ಪಾರ್ಥಿವ ಶರೀರವನ್ನು ಹೊತ್ತ ಮೆರವಣಿಗೆಯು ಬಳಿಕ ಹೂವಿನಿಂದ ಅಲಂಕೃತವಾದ ವಾಹನದಲ್ಲಿ ಚಿತಾಗಾರವನ್ನು ತಲುಪಿತು. ಈ ವೇಳೆ ಮನಮೋಹನ್ ಸಿಂಗ್ ಅಮರ್ ರಹೇ ಎಂಬ ಘೋಷಣೆಗಳನ್ನು ಅವರ ಅಭಿಮಾನಿಗಳು ಕೂಗುತ್ತಾ ರಸ್ತೆಯಲ್ಲಿ ಮೆರವಣಿಗೆ ನಡೆಸಿದರು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಂತಿಮ ವಿಧಿವಿಧಾನಗಳು ಅವರಿಗೆ ನೀಡಲಾದ ಸಂಪೂರ್ಣ ರಾಜ್ಯ ಗೌರವದ ಭಾಗವಾಗಿ 21 ಗನ್ ಸಲ್ಯೂಟ್ ಮಾಡಲಾಯಿತು. 21 ಗನ್ ಸೆಲ್ಯೂಟ್‌ನಲ್ಲಿ ಯಾವುದೇ ಶೆಲ್‌ಗಳನ್ನು ಹಾರಿಸಲಾಗುವುದಿಲ್ಲ. ನಿರ್ದಿಷ್ಟವಾಗಿ ವಿನ್ಯಾಸಗೊಳಿಸಲಾದ ಕಾರ್ಟ್ರಿಡ್ಜ್ ಅನ್ನು ಸಾಮಾನ್ಯವಾಗಿ ಖಾಲಿ ಸುತ್ತು ಎಂದು ಕರೆಯಲಾಗುತ್ತದೆ. ಇದನ್ನು ಗುಂಡು ಹಾರಿಸುವ ಶಬ್ದವನ್ನು ರಚಿಸಲು ಬಳಸಲಾಗುತ್ತದೆ. 92 ವರ್ಷದ ಮನಮೋಹನ್ ಸಿಂಗ್ ಅವರು ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಗುರುವಾರ ರಾತ್ರಿ ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ನಿಧನರಾದರು. ಭಾರತದ ಆರ್ಥಿಕ ಸುಧಾರಣೆಗಳ ಶಿಲ್ಪಿ ಎಂದು ಪರಿಗಣಿಸಲ್ಪಟ್ಟ ಮನಮೋಹನ್ ಸಿಂಗ್ ಅವರು 2004ರಿಂದ 2014ರ ಅವಧಿಯಲ್ಲಿ 10 ವರ್ಷಗಳ ಕಾಲ ಭಾರತದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದರು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಗೌರವಾರ್ಥವಾಗಿ ದೇಶಾದ್ಯಂತ 7 ದಿನಗಳ ರಾಷ್ಟ್ರೀಯ ಶೋಕಾಚರಣೆಯನ್ನು ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ರಾಷ್ಟ್ರದಾದ್ಯಂತ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ಪ್ರಕಟಿಸಿದೆ. "ಭಾರತದ ಅತ್ಯಂತ ಪ್ರತಿಷ್ಠಿತ ನಾಯಕರಲ್ಲಿ ಒಬ್ಬರಾದ ಡಾ. ಮನಮೋಹನ್ ಸಿಂಗ್ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತೇನೆ. ವಿನಮ್ರ ವ್ಯಕ್ತಿತ್ವದ ಅವರು ಖ್ಯಾತ ಅರ್ಥಶಾಸ್ತ್ರಜ್ಞರಾಗಿದ್ದವರು. ಅವರು ಹಣಕಾಸು ಸೇರಿದಂತೆ ವಿವಿಧ ಸರ್ಕಾರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. . ಡಾ. ಮನಮೋಹನ್ ಸಿಂಗ್ ಅವರು ಒಬ್ಬ ಪ್ರತಿಷ್ಠಿತ ಸಂಸದೀಯ ಪಟುವಾಗಿದ್ದು, ಅವರ ಜೀವನವು ಅವರ ಪ್ರಾಮಾಣಿಕತೆ ಮತ್ತು ಸರಳತೆಯ ಪ್ರತಿಬಿಂಬವಾಗಿತ್ತು. ಮನಮೋಹನ್ ಸಿಂಗ್ ಅವರ ಜೀವನವು ಯಾವಾಗಲೂ ಹೋರಾಟದಿಂದ ಮೇಲೆ ಏರುವ ಮೂಲಕ ಒಬ್ಬ ವ್ಯಕ್ತಿಯು ಹೇಗೆ ಯಶಸ್ಸನ್ನು ಸಾಧಿಸಬಹುದು ಎಂಬುದಕ್ಕೆ ಪಾಠವಾಗಿದೆ" ಎಂದು ಪ್ರಧಾನಿ ಮೋದಿ ಸಂತಾಪ ಸೂಚಿಸಿದ್ದಾರೆ.

# ಇಂದು ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ ಎ–ಬಿ ವೃಂದದ ಹುದ್ದೆಗಳ ಪರೀಕ್ಷೆ: ನಿಷೇದಾಜ್ಞೆ ಜಾರಿ

ಕೊಪ್ಪಳ : ಕರ್ನಾಟಕ ಲೋಕಸೇವಾ ಆಯೋಗದಿಂದ ಇಂದು ಬೆಳ್ಳಿಗೆ 10 ರಿಂದ 12 ಗಂಟೆಯವರೆಗೆ ಹಾಗೂ ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ಕೊಪ್ಪಳ ತಾಲ್ಲೂಕಿನಲ್ಲಿ ನಡೆಯಲಿರುವ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆಗಳ ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ಸುತ್ತಲಿನ 200ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ವಿವರ: ಕೊಪ್ಪಳದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢ ಶಾಲೆ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ (ಮಹಿಳಾ) ಕಾಲೇಜು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಶ್ರೀ ಗವಿಸಿದ್ದೇಶ್ವರ ಪದವಿ ಕಾಲೇಜು, ಶ್ರೀ ಗವಿಸಿದ್ದೇಶ್ವರ ಪದವಿ ಪೂರ್ವ ಕಾಲೇಜು, ಕಾಳಿದಾಸ ಪ್ರೌಢ ಶಾಲೆ, ಶ್ರೀ ಗವಿಸಿದ್ದೇಶ್ವರ ಕಂಪೋಸಿಟ್ ಪ್ರೌಢ ಶಾಲೆ, ಲಯನ್ಸ್ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ, ಗದಗ ರಸ್ತೆಯ ನ್ಯೂ ಎಕ್ಸಲೆಂಟ್ ಪಬ್ಲಿಕ್ ಸ್ಕೂಲ್, ಭಾಗ್ಯನಗರದ ನ್ಯಾಷನಲ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಸರಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲೆ ವಿಭಾಗ), ನವಚೇತನ ಪಿಯು ಕಾಲೇಜು, ಟಣ–ಕನಕಲ್‌ನ ಆದರ್ಶ ವಿದ್ಯಾಲಯ, ದದೇಗಲ್‌ನ ಸರಕಾರಿ ಪಾಲಿಟೆಕ್ನಿಕ್ ಕಾಲೇಜು ಕೇಂದ್ರಗಳಲ್ಲಿ ಡಿಸೆಂಬರ್ 29ರಂದು ಬೆಳಿಗ್ಗೆ 10ರಿಂದ ಸಾಯಂಕಾಲ 4 ಗಂಟೆಯವರೆಗೆ ಪರೀಕ್ಷೆ ನಡೆಯಲಿದೆ.

ಪರೀಕ್ಷಾ ಕೇಂದ್ರದಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ತಡೆಗಟ್ಟಲು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ರ ಅನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ವಿವಿಧ ಷರತ್ತಿಗೆ ಒಳಪಟ್ಟು ನಿಷೇಧಾಜ್ಞೆ ಜಾ–ರಿಗೊಳಿಸಲಾಗಿದೆ. ನಿಷೇಧಿತ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ., ಮೊಬೈಲ್ ಪೇಜರ್, ಝುರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಲಾಗಿದೆ. ಪರೀಕ್ಷೆಯಲ್ಲಿ ಪ್ರವೇಶ ಪತ್ರ ಹೊಂದಿದ ಅಭ್ಯರ್ಥಿಗಳು ಹಾಗೂ ನಿಯೋಜಿತ ಶಿಕ್ಷಕರನ್ನು, ಜಾಗೃತ ದಳದವರನ್ನು ಹೊರತುಪಡಿಸಿ ಇನ್ನೂಳಿದವರಿಗೆ ಪರವಾನಿಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಲಾಗಿದೆ. ನಕಲು ಮಾಡುವ ಸಾಮಗ್ರಿಗಳನ್ನು ಹಾಗೂ ಹೊರಗಿನಿಂದ ಕಾಪಿ ಬರೆದು ಪರೀಕ್ಷಾ ಕೇಂದ್ರಗಳಲ್ಲಿ ಪೂರೈಸುವುದನ್ನು ನಿರ್ಬಂಧಿಸಲಾಗಿದೆ. 200 ಮೀಟರ್ ಪರೀಕ್ಷಾ ಕೇಂದ್ರಗಳ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವದನ್ನು ನಿಷೇಧಿಸಿದೆ.

ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವದಿಲ್ಲ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

# ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಆರ್ಟ್ ಗ್ಯಾಲರಿಯಲ್ಲಿ ಜರುಗಿದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಧಾರವಾಡ : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಚಿತ್ರಕಲಾ ಶಿಲ್ಪಿ ಶ್ರೀ ಡಿ.ವ್ಹಿ.ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನಿಂದ ಶ್ರೀ ಡಿ.ವ್ಹಿ. ಹಾಲಭಾವಿ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮದ ಅಂಗವಾಗಿ ಇಂದು (ಡಿ.26) ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಆರ್ಟ್‌ಗ್ಯಾಲ–ರಿಯಲ್ಲಿ ಚಿತ್ರಕಲಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ದಾವಣಗೇರಿ ವಿಶ್ವವಿದ್ಯಾಲಯ ದೃಶ್ಯ ಕಲಾ ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಜೈರಾಜ ಎಂ. ಚಿಕ್ಕಪಾಟೀಲ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಸಮಾಜದ ತುಡಿತದೊಂದಿಗೆ ತಮ್ಮ ಸೃಜನಾತ್ಮಕ ಕಲೆಯನ್ನು ಬೆರೆಸುವ ಮೂಲಕ ಕಲಾವಿದರು ಶ್ರೇಷ್ಠ ಕಲಾಕೃತಿಗಳನ್ನು ರಚಿಸಬೇಕು. ಕಲೆಯ ಬಗ್ಗೆ ಆಸಕ್ತಿ, ನಿರಂತರ ಪರಿಶ್ರಮ, ಸಂವೇದನೆ ಇರುವವರು ಮಾತ್ರ ಕಲಾವಿದರಾಗಲು ಸಾಧ್ಯ. ವೀಕ್ಷಕರನ್ನು ಆಲೋಚನೆಗೆ ತೊಡಗಿಸುವ ಶಕ್ತಿ ಚಿತ್ರಕಲೆಗೆ ಇದೆ. ಹಿರಿಯ–ಕಿರಿಯ ಕಲಾವಿದರಲ್ಲಿರುವ ಕಲೆಯನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಕಾರ್ಯದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಡಿ.ವ್ಹಿ.ಹಾಲಭಾವಿ ಟ್ರಸ್ಟಿನ ಕಾರ್ಯ ಶ್ಲಾಘನೀಯ ಎಂದರು.

ಟ್ರಸ್ಟ್ ಸದಸ್ಯ ಸುರೇಶ ಹಾಲಭಾವಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶ್ರೀ ಡಿ.ವ್ಹಿ. ಹಾಲಭಾವಿಯವರ ಬದುಕಿನ ಬಗ್ಗೆ ಮಾತನಾಡಿದರು. ಕಾರ್ಯಕಮದಲ್ಲಿ ಚಿತ್ರಕಲಾವಿದ ಕುಮಾರ ಕಾಟೇನಹಳ್ಳಿ, ವಿಜಯಾನಂದ ಕಾಲವಾಡ, ಟ್ರಸ್ಟ್ ಸದಸ್ಯರಾದ ಡಾ. ಪಾರ್ವತಿ ಹಾಲಭಾವಿ, ಬಿ ಮಾರುತಿ, ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಬಿ ಎಚ್.ಕು–ರಿಯವರ, ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ದ ಪ್ರಾಚಾರ್ಯ ಡಾ. ಬಿ.ಎಂ.ಪಾಟೀಲ ಹಾಗೂ ಸದಸ್ಯ ಕಾರ್ಯದರ್ಶಿ ಕುಮಾರ ಬೆಕ್ಕೇ–ರಿಯವರು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಪೋಷಕರು ಹಾಗೂ ಕಲಾಸ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಂದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಆರ್ಟ ಗ್ಯಾಲ–ರಿಯಲ್ಲಿ ಚಿತ್ರಕಲಾ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಚಿತ್ರ ಕಲಾಸ್ತಕರು, ಸಾರ್ವಜನಿಕರು ಪಾಲ್ಗೊಂಡಿದ್ದರು.

## ಚೂರು–ಪಾರು

### ಅಂಚೆ ಇಲಾಖೆ - ಉತ್ಪನ್ನಗಳ ಮಾರಾಟಕ್ಕಾಗಿ ಆಸಕ್ತರಿಂದ ಅರ್ಜಿ ಆಹ್ವಾನ

ಧಾರವಾಡ : ಧಾರವಾಡ ವಿಭಾಗದ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ಆಯ್ಕೆಗಾಗಿ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ ಸ್ವವಿವರ, ಶೈಕ್ಷಣಿಕ ಪ್ರಮಾಣ ಪತ್ರದ ನಕಲಗಳೊಂದಿಗೆ ಜನೆವರಿ 10, 2024 ರಂದು ಬೆಳಿಗ್ಗೆ 11 ಗಂಟೆಗೆ ಧಾರವಾಡ ಕೆ.ಸಿ.ಪಾರ್ಕ ಹತ್ತಿರ ಇರುವ ಹಿರಿಯ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ನೇರ ಸಂದರ್ಶನಕ್ಕೆ ಹಾಜರಾಗಬಹುದು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಧಾರವಾಡ ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳಿಗೆ ವಿಕಲಚೇತನರಿಂದ ಅರ್ಜಿ ಆಹ್ವಾನ

ಧಾರವಾಡ : ರಾಷ್ಟ್ರೀಯ ಅಂಗವಿಕಲರ ಗ್ರಾಮೀಣ ಪುನರ್ವಸತಿ ಯೋಜನೆ ಅಡಿಯಲ್ಲಿ ಧಾರವಾಡ ತಾಲೂಕಿನ ನರೇಂದ್ರ ಹಾಗೂ ಚಿಕ್ಕಮಲ್ಲಿಗವಾಡ ಗ್ರಾಮ ಪಂಚಾಯತಗಳಲ್ಲಿ ಖಾಲಿ ಇರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳಿಗೆ ಅರ್ಹ ವಿಕಲಚೇತನರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ವಿಕಲಚೇತನರು ಜನವರಿ 17, 2025 ರೊಳಗಾಗಿ ಅರ್ಜಿ ನಮೂನೆಯಲ್ಲಿ ವೈಯಕ್ತಿಕ ವಿವರಗಳನ್ನು ಬರೆದು ಧಾರವಾಡ ತಾಲೂಕಾ ಪಂಚಾಯತಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತ (ಎಂಆರ್‌ಡಬ್ಲ್ಯೂ)ರಿಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 0836–2744474 ಗೆ ಅಥವಾ ಧಾರವಾಡ ತಾಲೂಕಾ ಪಂಚಾಯತಿನಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತ (ಎಂ.ಆರ್. ಡಬ್ಲ್ಯೂ) ರವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರಾಷ್ಟ್ರ ಮಟ್ಟದ ಸೇವಾರತ್ನ ಪ್ರಶಸ್ತಿಗೆ ಎಂ ಕೆ ಗುಡಿಮನಿ ಆಯ್ಕೆ



ಮುದ್ದೇಬಿಹಾಳ : ಹೈದ್ರಾಬಾದ ಅಕ್ಷಯ್ ಪ್ರಾರ್ಥನ ಫೌಂಡೇಶನ್ ವತಿಯಿಂದ ನೀಡಲಾಗುವ ರಾಷ್ಟ್ರಮಟ್ಟದ ಸೇವಾರತ್ನ ಪ್ರಶಸ್ತಿಗೆ ಮುದ್ದೇಬಿಹಾಳ ತಾಲ್ಲೂಕಿನ ಢವಳಗಿ ಗ್ರಾಪಂ ದ್ವೀತಿಯ ದರ್ಜೆ ಲೆಕ್ಕ ಸಹಾಯಕ ಎಂ ಕೆ ಗುಡಿಮನಿ ಆಯ್ಕೆಯಾಗಿದ್ದಾರೆ ಎಂದು ಕರ್ನಾಟಕ ಪ.ಪಂ ವಾಲ್ಮೀಕಿ ನೌಕರರ ಒಕ್ಕೂಟದ ರಾಜ್ಯಾಧ್ಯಕ್ಷ ಪಿ. ಮೋಹನ್ ಕಿಶೋರ್,ಹಾಗೂ ರಮಾದೇವಿ ಅವರು ತಿಳಿಸಿದ್ದಾರೆ.

ಡಿ. 29 ರಂದು ರವಿವಾರ ಬೆಳಗ್ಗೆ10–30 ಗಂಟೆಗೆ ಬೆಂಗಳೂರಿನ ಮೆಜೆಸ್ಟಿಕ್ ಹತ್ತಿರದ ಗಾಂಧಿಭವನದ ಬಾಪು ಸಂಭಾಗಣದಲ್ಲಿ 2024 ನೇ ಸಾಲಿನ ರಾಷ್ಟ್ರದ ಮಟ್ಟದ ಭಾರತ ಸೇವಾರತ್ನ ಕಾರ್ಯಕ್ರಮದಲ್ಲಿ ಎಂ ಕೆ ಗುಡಿಮನಿ ಅವರ ಕ್ರೀಡಾಕ್ಷೇತ್ರದ ಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

# ಪ್ರಭುದೇವರ ದೇವಸ್ಥಾನದಲ್ಲಿ ಮಂಡಲ ಪೂಜೆ ಹಾಗೂ ಮಂಗಲೋತ್ಸವ ಗುರು ವಿರಕ್ತ ಪರಂಪರೆಯ ದೃಷ್ಠಿಕೋನ ಒಂದೇ-ಶ್ರೀಶೈಲ ಜಗದ್ಗುರು



ತೇರದಾಳ–ವೀರಶೈಲ ಲಿಂಗಾಯುತ ಧರ್ಮದಲ್ಲಿ ಗುರು ಪರಂಪರೆ ಹಾಗೂ ವಿರಕ್ತ ಪರಂಪರೆಯ ದೃಷ್ಠಿಕೋನ ಒಂದೇ ಆಗಿದೆ. ಆದರೆ ಕೆಲವರು ಎರಡನ್ನು ಒಡೆದು ಆಳುವ ನೀತಿ ಅನುಸರಿಸುತ್ತಿರುವುದು ನೋವಿನ ಸಂಗತಿಯಾಗಿದೆ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಹೇಳಿದರು.

ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆಗೊಂಡ 48 ದಿನಗಳ ನಂತರ ಶನಿವಾರ ನಡೆದ ಮಂಡಲ ಪೂಜೆ ಹಾಗೂ ಮಂಗಲೋತ್ಸವ ಕಾರ್ಯಕ್ರಮದ ಧರ್ಮ ಸಭೆ ಸಾನ್ನಿಧ್ಯ ವಹಿಸಿ ಮಾತನಾಡಿದರು.

12ನೇ ಶತಮಾನದಲ್ಲಿ ಎರಡು ಪರಂಪರೆಗಳ ಅನುಭಾವ ಸಂಬಂಧ ಇರುವ ಬಗ್ಗೆ ಸಾಕಷ್ಟು ದಾಖಲೆಗಳಿವೆ. ಶ್ರೀಶೈಲದ ಮಲ್ಲಿಕಾರ್ಜುನ ಪಂಡಿತಾರಾಧ್ಯರನ್ನು ಅಂದು ಬಸವಣ್ಣ ಶ್ರೀಶೈಲಕ್ಕೆ ಆಗಮಿಸಿದ ಸಂದರ್ಭದಲ್ಲಿ ಕಲ್ಯಾಣಕ್ಕೆ ಆಗಮಿಸುವಂತೆ ಆಹ್ವಾನ ನೀಡಿದ್ದನ್ನು ತಿಳಿಸಿದ ಜಗದ್ಗುರುಗಳು, ಇತಿಹಾಸ ಗೊತ್ತಿಲ್ಲದವರು ಎರಡು ಪರಂಪರೆಗಳನ್ನು ಬೇರ್ಪಡಿಸುವ ಕೆಲಸ ಮಾಡುತ್ತಿದ್ದಾರೆ. ಹೀಗಾದರೆ ರಾಜ್ಯದಲ್ಲಿ ಬಹುಸಂಖ್ಯಾತರಾಗಿರುವ ವೀರಶೈವ ಲಿಂಗಾಯುತರು ಅಲ್ಪಸಂಖ್ಯಾತರಾಗುವಲ್ಲಿ ಯಾವುದೇ ಸಂದೇಹ ಇಲ್ಲ ಎಂದು ಕಳವಳ ವ್ಯಕ್ತಪಡಿಸಿದ ಜಗದ್ಗುರುಗಳು, 12ನೇ ಶತಮಾನದಲ್ಲಿ ಬಸವಣ್ಣ ಸಾಮಾಜಿ–ಕ ಕ್ರಾಂತಿ ಮಾಡಿದರೆ ಅಲ್ಲಮಪ್ರಭು ಆಧ್ಯಾತ್ಮದ ಕ್ರಾಂತಿ ಮಾಡಿದವರು. ಮನುಷ್ಯ ಅಹಂಕಾರವನ್ನು ಕಳೆದುಕೊಂಡಾಗ ಮಾತ್ರ ಅನುಭವ ಆಗುತ್ತದೆ. ಆದ–್ಯಾತ್ಮದ ತತ್ವವನ್ನು ಬೆಡಗಿನ ವಚನ ಮೂಲಕ ಅಲ್ಲಮಪ್ರಭುಗಳು ತೋರಿಸುವ ಮೂಲಕ ಆಧ್ಯಾತ್ಮದ ಶಕ್ತಿ ಹೆಚ್ಚಿಸಿದ್ದಾರೆಂದು ಹೇಳಿದರು.

ಜಮಖಂಡಿ ಮುತ್ತಿನಕಂತಿ ಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ ಮಾತನಾಡಿ ಸನಾತನ ಧರ್ಮ ಎಂದರೆ ಸತ್ಯ. ಸತ್ಯವೇ ಧರ್ಮವಾಗಿದೆ. ಆದ್ದರಿಂದ ಭಕ್ತರು ಮೊದಲು ಇದನ್ನು ಅರಿಯಬೇಕು. ದೇವಸ್ಥಾನ ಲೋಕಾರ್ಪಣೆ ಮಾಡಿದರೆ ಅದು ಪೂರ್ಣಗೊಳ್ಳುವುದಿಲ್ಲ. 48 ದಿನಗಳ ಬಳಿಕ ಮಂಡಲ ಪೂಜೆ ಮಾಡಿದಾಗ ಮಾತ್ರ ದೇವಸ್ಥಾನ ಪರಿಪೂರ್ಣಗೊಳ್ಳುತ್ತದೆ. ಇದು ನಿಜವಾದ ಶಾಸ್ತ್ರವಾಗಿದೆ ಎಂದು ತಿಳಿಸಿದರು. ಶಾಸಕರಾದ ಸಿದ್ದು ಸವದಿ, ಜಗದೀಶ ಗುಡಗುಂಟಿ, ತೇರದಾಳ ಹಿರೇಮಠದ ಗಂಗಾಧರ ದೇವರು ಅವರಿಗೆ ಪಟ್ಟಾಭಿಷೇಕ ಮಾಡುವ ಕೆಲಸಕ್ಕೆ ಮುಂದಾಗೋಣ ಎಂದು ಹೇಳಿದರು. ಜಮಖಂಡಿಯ ಗೌರಿಶಂಕರ ಶಿವಾಚಾರ್ಯ, ಬನಹಟ್ಟಿಯ ಶರಣಬಸವ ಶಿವಾಚಾರ್ಯ, ಮೈಹಿಶಾಳದ ಡಾ. ಶಿವಯೋಗಿ ಶಿವಾಚಾರ್ಯ, ಕೊಣ್ಣೂರು ಹೊರಗಿನಮಠದ ಡಾ. ವಿಶ್ವಪ್ರಭು ಶಿವಾಚಾರ್ಯ, ರುದ್ರಮುನಿ ಶಿವಾಚಾರ್ಯ, ಅಡವಿ ಸಿದ್ದೇಶ್ವರ ಶ್ರೀ, ಸಂಗಮೇಶ್ವರ ಶಿವಾಚಾರ್ಯ, ಅರ್ಚಕ ಸೇವಾ ಸಮಿತಿ ಅಧ್ಯಕ್ಷ ಗುಹೇಶ್ವರ ಪುರಾಣಿಕಮಠ, ಪ್ರವೀಣ ನಾಡಗೌಡ, ಬಸವರಾಜ ಬಾಳಿಕಾಯಿ, ನಾಗಪ್ಪ ಸನದಿ, ದೇವಲ ದೇಸಾಯಿ, ಅರ್ಚಕ ಪರಯ್ಯ ಮೇಲಿನಮನಿ ಮತ್ತಿತರಿದ್ದರು. ಎಂ.ಬಿ.ಮಾಳೇದ ಈಶ್ವರ ಯಲ್ಲಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

# ಸಾಹಿತ್ಯ ಎಷ್ಟೇ ಪ್ರಾಚೀನವಾದರೂ ಸಮಕಾಲೀನ 'ಚಿಗಳಿ' ಹಾಗು 'ತಿರುಗಾಟ' ಗ್ರಂಥ ಲೋಕಾರ್ಪಣೆ

ರಬಕವಿ–ಬನಹಟ್ಟಿ : ವರ್ತಮಾನದ ಅನುಭವವನ್ನು ಸೃಷ್ಟಿಸುವ ಸಾಹಿತ್ಯ ಎಷ್ಟೇ ಪ್ರಾಚೀನವಾದರೂ ಅದು ಸಮಕಾಲೀನವಾಗುತ್ತದೆ ಎಂದು ಹಿರಿಯ ಸಾಹಿತಿ ಎಂ.ಎನ್. ರಾಮನಾಥ ಹೇಳಿದರು.

ನಗರದ ಬಸವೇಶ್ವರ(ಬಿದರಿ) ಸಮುದಾಯ ಭವನದಲ್ಲಿ ಬಸವ ಸಂಪದ ಬಳಗದಿಂದ ಜರುಗಿದ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿಯವರ 'ಚಿಗಳಿ' ಹಾಗು 'ತಿರುಗಾಟ' ಗ್ರಂಥ ಲೋಕಾರ್ಪಣೆ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು. ಹುಲಗಬಾಳಿಯವರು ಜ್ಞಾನ ಭಂಡಾರ ಹಾಗು ಆರೋಗ್ಯಕರ ಸಂವೇದನೆಗಳೊಂದಿಗೆ ಸಾಹಿತ್ಯದ ಕೃಷಿ ಮಾಡುತ್ತ ಸಮನ್ವಯ ಅನನ್ಯತೆಯನ್ನು ಬರಹ ಬದುಕಾಗಿಸಿಕೊಂಡವರು. ಇತ್ತೀಚಿನ ದಿನಗಳಲ್ಲಿ ಸಾಹಿತ್ಯದ ಗತಿ ಹಲವು ಆಯಾಮಗಳನ್ನು ಪಡೆದುಕೊಂಡಿದ್ದು, ಮೊಬೈಲ್ ವಾಟ್ಸಪ್ ಮಿಂಚಿನಂತೆ ಸಂಚ–




ರಿಸುತ್ತಿವೆ. ತಂತ್ರಜ್ಞಾನವನ್ನು ಸಾಹಿತ್ಯ ಬೆಳವಣಿಗೆಗೆ ಸಕಾರಾತ್ಮಕವಾಗಿ ಬಳಕೆ ಮಾಡಿಕೊಳ್ಳುವ ಅಗತ್ಯವಿದೆಯೆಂದರು.

ವೀರಶೈವ ಮಹಾಸಭಾದ ರಾಜ್ಯಾಧ್ಯಕ್ಷ, ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಶಂಕರ ಬಿದರಿ ಮಾತನಾಡಿ, ಕಾಲ ಕಾಲಕ್ಕೆ ಸಾಹಿತ್ಯದ ಪ್ರಕಾರಗಳು ಬದಲಾಗಿರಬಹುದು. ಆಯಾ ಕಾಲದ ಸಂವೇದನೆಗಳನ್ನು ಸೃಜನಶೀಲಗೊಳಿಸುವದು ಸಾಹಿತಿಯ ಜವಾಬ್ದಾರಿ. ಹುಲಗಬಾಳಿಯವರು 74ನೇ ಇಳಿ ವಯಸ್ಸಿನಲ್ಲಿಯೂ ಸಾಹಿತ್ಯದೊಂದಿಗೆ ಬದುಕು ಸವೆಸುತ್ತ ಗ್ರಂಥಗಳನ್ನು ಹೊರ ತರುವಲ್ಲಿ ಯುವಕರಿಗೆ ಸ್ಪೂರ್ತಿಯಾಗಿದೆ ಎಂದರು.

ಸಾಹಿತಿಗಳಾದ ಡಾ. ಲಲಿತಾ ಹೊಸಪ್ಯಾಟಿ ಹಾಗು ಶೀಲಾ ಅರಕಲಗೂಡರು 'ಚಿಗಳಿ' ಹಾಗು 'ತಿರುಗಾಟ' ಗ್ರಂಥ ಲೋಕರ್ಪಾಣೆ ಮಾಡಿದರು.

ನ್ಯಾಯಾಧೀಶ ಜಿ.ಆರ್. ಶೆಟ್ಟರ, ಡಾ. ಎ.ಕೆ. ನಾಡಗೌಡ ಪಾಟೀಲ, ಸಿದ್ಧರಾಜ ಪೂಜಾರಿ, ಐ.ಆರ್. ಮಠಪತಿ, ಜಯವಂತ ಕಾಡದೇವರ, ಪಿ.ಎಂ. ಧೂಪದಾಳ, ಡಾ. ಉಮಾಶೇಖರ ಹಿರೇಮಠ ವೇದಿಕೆ ಮೇಲಿದ್ದರು.

### ಮಾಜಿ ಪ್ರಧಾನಿ, ಡಾ. ಮನಮೋಹನ ಸಿಂಗ್ ನಿಧನಕ್ಕೆ ಬಾಲಚಂದ್ರ ಜಾರಕಿಹೊಳಿ ಕಂಬನಿ



ಗೋಕಾಕ: ಆರ್ಥಿಕತೆಯ ಪಿತಾಮಹ, ಜಾಗತಿಕ ಭಾರತದ ಶಿಲ್ಪಿ, ಮಾಜಿ ಪ್ರಧಾನಿ, ಪದ್ಮವಿಭೂಷಣ ಡಾ. ಮನಮೋಹನ ಸಿಂಗ್ ಅವರ ನಿಧನಕ್ಕೆ ಅರಭಾವಿ ಶಾಸಕ ಮತ್ತು ಕಹಾಮ ನಿರ್ದೇಶಕ ಬಾಲಚಂದ್ರ ಜಾರಕಿಹೊಳಿ ಅವರು ಕಂಬನಿ ಮಿಡಿದಿದ್ದಾರೆ.

ಡಾ. ಸಿಂಗ್ ಅವರು ದೇಶದ ನಿರ್ಮಾಣಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಸೌಮ್ಯ ಸ್ವಭಾವದ, ವಿನಮ್ರತೆಯ ಬುದ್ಧಿ ಜೀವಿಗಳಾಗಿದ್ದ ಅವರು ಭಾರತದ ಉದಾರೀಕರಣದ ಪೀತಾಮಹ ಎನಿಸಿಕೊಂಡಿದ್ದರು. ಸತತ ಹತ್ತು ವರ್ಷಗಳ ಅವಧಿಗೆ ಈ ದೇಶದ ಚುಕ್ಕಾಣಿ ಹಿಡಿದಿದ್ದ ಅವರು, ಹಲವು ಕ್ರಾಂತಿಕಾರಿ ಯೋಜನೆಗಳನ್ನು ರೂಪಿಸಿದ್ದರು. ಅರ್ಥ ವ್ಯವಸ್ಥೆ, ಬೇಡ ಕುಟುಂಬಗಳ ಆರ್ಥಿಕ ಸುಧಾರಣೆ, ಶಿಕ್ಷಣ, ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿ ಮುಂತಾದ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದರು. ಆರ್ಥಿಕತೆಗೆ ಮಾಂತ್ರಿಕ ಸ್ಪರ್ಶ ನೀಡಿದ್ದರು. ಐತಿಹಾಸಿಕ ಮುಂಗಡ ಪತ್ರ ಮಂಡಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದರು. ಮಾತಿಗಿಂತ ಕ್ರೀಯಾಶೀಲ ವ್ಯಕ್ತಿಯಾಗಿದ್ದ ಅವರು, ದೂರದೃಷ್ಟಿಯ ರಾಜಕಾರಣಿಯಾಗಿದ್ದರು. ಡಾ. ಸಿಂಗ್ ಅವರ ಆತ್ಮಕ್ಕೆ ಚಿರ ಶಾಂತಿ ಕೋರಿ, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ಪ್ರಾಥ–'ನೆ ಮಾಡುವುದಾಗಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ತಮ್ಮ ಸಂತಾಪ ಸೂಚಕದಲ್ಲಿ ಹೇಳಿದ್ದಾರೆ.

### ಮೇಕಲಮರಡಿ ಗ್ರಾಮದ ಹಿರಿಯ ಸದಸ್ಯರಿಗೆ ವಾತ್ಸಲ್ಯ ಕಿಟ್ ವಿತರಣೆ



ನೇಸರಗಿ– ಬೈಲಹೊಂಗಲ ವಲಯದ ಸಮೀಪದ ಮೇಕಲಮರಡಿ ಗ್ರಾಮದ ಕಾರ್ಯಕ್ಷೇತ್ರದಲ್ಲಿ ಶ್ರೀ ಧರ್ಮಸ್ಥಳ ಗ್ರಾಮೀಣಭಿವೃದ್ಧಿ ಯೋಜನೆಯ ಮಾಶಾಸನ ಸದಸ್ಯರಾದ ದೊಡ್ಡವ್ವ ಗೋರನ್ನವರ, ಜಾನಮ್ಮ ಕಡಚಿ ಇವರಿಗೆ ಡಾ. ಡಿ ವೀರೇಂದ್ರ ಹೆಗ್ಗಡೆಯವರು ಹಾಗೂ ಮಾತೃಶ್ರೀ ಹೇಮಾವತಿ ಅಮ್ಮನವರು ಕಳಿಸಿ ಕೊಟ್ಟಿರುವ ವಾತ್ಸಲ್ಯ ಕಿಟ್ ನ್ನು ವಿತರಣೆಯನ್ನು ಮಾಜಿ ಜಿಲ್ಲಾ ಪಂಚಾಯತ ಸದಸ್ಯರಾದ ನಿಂಗಪ್ಪ ಅರಿಕೇರಿ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಖಾಸಿಂ ಜಮಾದಾರ ಹಾಗೂ ಗ್ರಾಮದ ಹಿರಿಯರು ಸಮ್ಮುಖದಲ್ಲಿ ಜ್ಞಾನ ವಿಕಾಸ ಸಮನ್ವಧಿಕಾರಿ ಶ್ರೀಮತಿ ಶೈಲಾ ಸೇವಾ ಪ್ರತಿನಿಧಿ ಶೀಲಾ ಸಮ್ಮುಖದಲ್ಲಿ ವಿತರಣೆ ಮಾಡಲಾಯಿತು.ಈ ಸಂದರ್ಭದಲ್ಲಿ ಸೇವಾ ಪ್ರತಿನಿದಿಗಳು, ಗ್ರಾಮದ ಸಂಘದ ಸದಸ್ಯರು ಉಪಸ್ಥಿತರಿದ್ದರು.

# ಕಲ್ಲಂಗಡಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳ ಕುರಿತು ರೈತರಿಗೆ ಸಲಹೆಗಳು

ಕೊಪ್ಪಳ : ಕಲ್ಲಂಗಡಿ ಬೆಳೆಯ ಸುಧಾ–ರಿತ ಬೇಸಾಯ ಕ್ರಮಗಳ ಕುರಿತು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಜಿಲ್ಲೆಯ ರೈತರಿಗೆ ಅಗತ್ಯ ಸಲಹೆಗಳನ್ನು ನೀಡಲಾಗಿದೆ.

ಕೊಪ್ಪಳ ಜಿಲ್ಲೆಗೆ ಕಲ್ಲಂಗಡಿ ಒಂದು ಮುಖ್ಯವಾದ ಕುಂಬಳ ಜಾತಿಯ ಅತ್ಯಂತ ಲಾಭದಾಯದ ಅಲ್ಪಾವಧಿ ಬೆಳೆಯಾಗಿದೆ. ಇತ್ತೀಚೆಗೆ ಕಲ್ಲಂಗಡಿಯನ್ನು ವರ್ಷಪೂರ್ತಿ ಬೆಳೆಯಲಾಗುತ್ತಿದ್ದು, ಹಲವಾರು ಕಂಪನಿಗಳು ಬೀಜೋತ್ಪಾದನೆಯಲ್ಲಿ ತೊಡಗಿಸಿಕೊಂಡಿವೆ.

ಕಲ್ಲಂಗಡಿ ಒಂದು ಚಳಿಗಾಲದ ಬೆಳೆಯಾಗಿದ್ದು, ಅಕ್ಟೋಬರ್ ನಿಂದ ಜನವರಿವರೆಗೂ ಉತ್ತಮ ಇಳುವರಿ ಪಡೆಯಬಹುದಾಗಿದೆ. ಶ್ರೀ ಗವಿಸಿದ್ದೇಶ್ವರ ಜಾತ್ರೆಗೆ ಹಣ್ಣುಗಳು ಬರುವಂತೆ ಯೋಜನೆ ಹಾಕಿಕೊಂಡಲ್ಲಿ ರೈತರಿಗೆ ಹೆಚ್ಚಿನ ಲಾಭದೊರೆಯುತ್ತದೆ. ಕಲ್ಲಂಗಡಿಯನ್ನು ಸಾಮಾನ್ಯವಾಗಿ ಮಸಾರಿ ಮತ್ತು ಮರಳು ಮಿಶ್ರಿತ ಕಪ್ಪು ಮಣ್ಣು ಮತ್ತು ನೀರು ಬಸಿದು ಹೋಗುವ ಮಣ್ಣು ಮತ್ತು ಕೆರೆ ಹಾಗೂ ನದಿ ತೀರ ಪ್ರದೇಶಗಳಲ್ಲಿ ಉತ್ತಮವಾಗಿ ಬೆಳೆಯಬಹುದಾಗಿದೆ. ಮಣ್ಣಿನ ರಸ ಸಾರ 6 ರಿಂದ 7, ಉಷ್ಣಾಂಶ 15 ಡಿ.ಸೆ. ಯಿಂದ 40 ಡಿ.ಸೆ., ಆರ್ದ್ರತೆ ಶೇ. 60 ರಿಂದ 70 ಮತ್ತು ಮಳೆಯ ಪ್ರಮಾಣ 200 ಮಿ.ಮಿ. ಯಿಂದ 650 ಮಿ.ಮಿ., ಹೆಚ್ಚು ಉಷ್ಣ ಹಾಗೂ ಬಿಸಿಲು ಇರುವ ವಾತಾವರಣ ಸೂಕ್ತ.

ಕಲ್ಲಂಗಡಿಯಲ್ಲಿ ಮುಖ್ಯವಾದ ತಳಿಗಳಲ್ಲಿ ಎರಡು ವಿಧಗಳಿವೆ. ನಾಮಧಾರಿತರಹದ ತಳಿಗಳು, ಕಪ್ಪು ಬಣ್ಣದ ಕೆಂಪು ಮತ್ತು ಕಡು ಕೆಂಪು ತಿರುಳು ಹೊಂದಿರುವ ತಳಿಗಳು. ಅಲ್ಲದೇ ಭಾರತೀಯ ತೋಟಗಾ–ರಿಕಾ ಸಂಶೋಧನಾ ಸಂಸ್ಥೆಯಿಂದ ಅರ್ಕಾ ಮಾಣಿಕ್ ಮತ್ತು ಅರ್ಕಾ ಮುತ್ತು ಎನ್ನುವ ತಳಿಗಳು ಪ್ರಮುಖವಾಗಿವೆ. ಇದಲ್ಲದೇ ಅನೇಕ ಖಾಸಗಿ ಕಂಪನಿಗಳ ಸಂಕರಣ ತಳಿಗಳು ಮಾರುಕಟ್ಟೆಯಲ್ಲಿ ಲಭ್ಯವಿರುತ್ತವೆ. ಕಲ್ಲಂಗಡಿ ಬೆಳೆಯನ್ನು 2.5 ಮೀ ರಿಂದ 3 ಮೀ * 1 ಮೀ ಅಂತರದಲ್ಲಿ ಏರು ಮಡಿ ಮಾಡಿ ಪ್ಲಾಸ್ಟಿಕ್ ಹೊದಿಕೆ ಹಾಕಿ ಬೆಳೆಯುವುದು ಆಧುನಿಕ ಪದ್ದತಿಯಾಗಿದೆ. ಇದರಿಂದ ಕೀಟ ಮತ್ತು ರೋಗಗಳ ಪರಿಣಾಮಕಾರಿ ನಿಯಂತ್ರಣ ಮಾಡಬಹುದಾಗಿದೆ. ಎಕರೆಗೆ ಬೇಕಾಗುವ ಬೀಜಗಳ ಪ್ರಮಾಣ ಸಂಕರಣ ತಳಿಗಳಾದಲ್ಲಿ 300 ರಿಂದ 400 ಗ್ರಾಂ ಮತ್ತು ಇತರೆ ತಳಿಗಳಾದಲ್ಲಿ 750 ಗ್ರಾಂ.



ಆದಷ್ಟು ಕೊಟ್ಟಿಗೆ ಮತ್ತು ಸಾವಯವ ಗೊಬ್ಬರ ಅಲ್ಲದೇ ಎರೆಹುಳು ಗೊಬ್ಬರಗಳನ್ನು ಜೈವಿಕ ಗೊಬ್ಬರಗಳಾದ ಟ್ರೈಕೊಡರ್ಮ, ಸೂಡೊಮೋನಾಸ್ ಮತ್ತು ವ್ಯಾಮ್ ನೊಂದಿಗೆ ಸಮೃದ್ಧಿಗೊಳಿಸಿ ಬಳಸುವುದರಿಂದ ರೋಗ ಮತ್ತು ಕೀಟದ ಬಾಧೆಯನ್ನು ತಡೆಗಟ್ಟಬಹುದು. ಪ್ರತಿ ಎಕರೆಗೆ 1 ಕ್ವಿ. ಬೇವಿನ ಹಿಂಡಿ ಬೆರೆಸುವುದು ಸೂಕ್ತ. ಬಿತ್ತನೆ ಮಾಡಿದ 20 ರಿಂದ 30 ದಿನಗಳೊಳಗೆ ಕುಡಿ ಚಿವುಟುವದರಿಂದ ಹೆಚ್ಚಿನ ಇಲುಕುಗಳು ಬಿಟ್ಟು ಇಳುವರಿ ಹೆಚ್ಚಾಗುವುದು ಅಲ್ಲದೇ ಕೀಟಗಳ ಬಾಧೆಯನ್ನು ತಡೆಗಟ್ಟಬಹುದು. ಬಳ್ಳಿಗೆ 7 ರಿಂದ 8 ಗಿಣ್ಣುಗಳ ಬಿಡುವ ಹೂವುಗಳು ಫಲಪ್ರದವಾಗಿರುತ್ತವೆ ಮತ್ತು 11 ಗಿಣ್ಣಿನ ನಂತರ ಬರುವ ಹೆಣ್ಣು ಹೂವುಗಳನ್ನು ತೆಗೆಯುವುದು ಸೂಕ್ತ.

ಹೆಚ್ಚಿನ ಇಳುವರಿಗಾಗಿ ಸಲಹೆ: ಹೆಚ್ಚಿನ ಇಳುವರಿಗಾಗಿ ಕೆಲವು ಸಲಹೆಗಳನ್ನು ಅನುಸರಿಸಲು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಜ್ಞಾನಿಗಳು ತಿಳಿಸುತ್ತಾರೆ. ಥ್ರಿಪ್ಸ್ ನುಸಿಯನ್ನು ಆರಂಭ ಹಂತದಿಂದಲೇ ನಿಯಂತ್ರಿಸುವುದು ಬಹಳ ಮುಖ್ಯ. ಕಸ ರಹಿತ ತೋಟ ಕೀಟಗಳನ್ನು ಹತೋಟಿ ಮಾಡುತ್ತದೆ. ಹೊಲದ ಸುತ್ತಲೂ 1 ತಿಂಗಳ ಮೊದಲೇ ಮೆಕ್ಕೆ ಜೋಳ ಅಥವಾ ಸಜ್ಜೆ ಬೀಜಗಳನ್ನು 4 ಸಾಲು ಬಿತ್ತನೆ ಮಾಡಬೇಕು. ಎರಡು ವರ್ಷಗಳ ನಂತರ ಬೆಳೆ ಪರಿವರ್ತನೆ ಮಾಡಬೇಕು ಇದಕ್ಕಾಗಿ ದ್ವಿದಳ ಧಾನ್ಯಗಳನ್ನು ಬೆಳೆಯುವುದು ಸೂಕ್ತ.

ಕೀಟ ನಾಶಕಗಳನ್ನು ಬಳಸುವಾಗ ಬಳ್ಳಿಗಳ ತುದಿಗಳ ಮೇಲೆ ಸಿಂಪಡಿಸಬೇಕು. 2 ರಿಂದ 3 ಬಾರಿ ಬಳ್ಳಿಯ ತುದಿಗಳನ್ನು ಅಂತರ ವ್ಯಾಪಿ ಕೀಟ ನಾಶಕಗಳಲ್ಲಿ ಅದ್ದಿ ತೆಗೆಯಬೇಕು.

ಎಕರೆಗೆ 4 ರಿಂದ 6 ಹಳದಿ ಮತ್ತು ನೀಲಿ ಬಣ್ಣದ ಅಂಟು ಕಾರ್ಡುಗಳನ್ನು ಬಳಸಬೇಕು. ಲಘು ಪೋಷಕಾಂಶಗಳಾದ ಬೋರಾನ್ ಮತ್ತು ಕ್ಯಾಲ್ಸಿಯಂನ್ನು ತಜ್ಞರ ಸಲಹೆಯಂತೆ ಬಳಸಬೇಕು. ನೀರಿನ ನಿರ್ವಹಣೆ ಬಹಳ ಮುಖ್ಯವಾಗಿರುವುದರಿಂದ ಹೂವಾಡವು ಹಂತದಲ್ಲಿ, ಹಣ್ಣು ಬಿಡುವ ಹಂತದಲ್ಲಿ ಮತ್ತು ಹಣ್ಣು ಬಲಿಯುವ ಹಂತದಲ್ಲಿ ಮಣ್ಣನ್ನು ಆದರಿಸಿ ನೀರು ಕೊಡಬೇಕು. ಬಿತ್ತನೆ, ನಾಟಿ ಮಾಡಿದ 15 ದಿನಗಳ ನಂತರ ನೀರಿನಲ್ಲಿ ಕರಗುವ ಗೊಬ್ಬರಗಳನ್ನು ಸಿಂಪಡಿಸುವುದ–ರಿಂದ ಹೆಚ್ಚಿನ ಇಳುವರಿಯನ್ನು ಪಡೆಯಬಹುದಾಗಿದೆ. ಪ್ರತಿ ಎಕರೆಗೆ 1 ರಿಂದ 2 ಜೇನು ಪೆಟ್ಟಿಗೆಗಳನ್ನು ಇಡುವುದರಿಂದ ಉತ್ತಮ ಇಳುವರಿ ಪಡೆಯಬಹುದು. ಪ್ರತಿ ಬಳ್ಳಿಗೆ 2 ಆರೋಗ್ಯಯುತ ಕಾಯಿಗಳನ್ನು ಬಿಟ್ಟು ಉಳಿದವುಗಳನ್ನು ಕತ್ತರಿಸಬೇಕು. ಕಾಯಿಗಳು ನಿಂಬೆಹಣ್ಣಿನ ಗಾತ್ರದಲ್ಲಿದ್ದಾಗ ಜಿಬ್ಬರ್ಲಿಕ್ ಆಮ್ಲ 20 ಪಿ.ಪಿ.ಎಮ್. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಕೃಷಿ ವಿಸ್ತರಣಾ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಎಂ.ವಿ.ರವಿ ಮೊ.ನಂ. 9480247745 ಮತ್ತು ಸಹಾಯಕ ಪ್ರಾಧ್ಯಾಪಕ ವಾಮನಮೂರ್ತಿ ಮೊ.ನಂ. 8217696837 ಇವರನ್ನು ಸಂಪರ್ಕಿಸಬಹುದಾಗಿದೆ.

# ಸಹಕಾರಿ ರಂಗದಿಂದ ರೈತರ ಬೆಳವಣಿಗೆ- ಮಹಾಂತೇಶ ದೊಡ್ಡಗೌಡರ



ಎಮ್ ಕೆ ಹುಬ್ಬಳ್ಳಿ . ಸಹಕಾರಿ ರಂಗ ಮತ್ತು ಗ್ರಾಮೀಣ ಕೃಷಿ ಸಹಕಾರಿ ಸಂಘಗಳಿಂದ ರೈತರ ಬೆಳವಣಿಗೆ ಸಾಧ್ಯ, ಈ ಕಾರ್ಯದಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಪಾತ್ರ ಮುಖ್ಯವಾಗಿದೆ ಎಂದು ಮಾಜಿ ಶಾಸಕ ಹಾಗೂ ಬಿಡಿಸಿಸಿ ಬ್ಯಾಂಕ ನಿರ್ದೇಶಕರಾದ ಮಹಾಂತೇಶ ದೊಡ್ಡಗೌಡರ ಹೇಳಿದರು.

ಅವರು ಇತ್ತೀಚಿಗೆ ಸಮೀಪದ ಹೊಳಿನಾಗಲಾಪೂರ ಗ್ರಾಮದಲ್ಲಿ ವಿವಿದೊದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘ ನಿಯಮಿತ, ಹೊಳಿನಾಗಲಾಪೂರ ಇದರ ನೂತನ ಕಟ್ಟಡ ಉದ್ಘಾಟಣಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕಿತ್ತೂರು ಕಲ್ಮಠದ ಶ್ರೀ ಮಡಿವಾಳ ರಾಜಯೋಗಿಂದ್ರ ಮಹಾಸ್ವಾಮಿಗಳು ವಹಿಸಿದ್ದರು. ಮಾಜಿ ಶಾಸಕ ಜಗದೀಶ್ ಮೆಟಗುಡ, ಜೆಡಿಎಸ್ ಮುಖಂಡ ಶಂಕರ ಮಾಡಲಗಿ, ಉದ್ಯಮಿ ವಿಜಯ ಮೆಟಗುಡ, ಮುಖಂಡ ಬಾಳಾಸಾಹೇಬ ದೇಸಾಯಿ,ಮಾಜಿ ಜಿ ಪಂ. ಉಪಾಧ್ಯಕ್ಷ ಚನ್ನಬಸಪ್ಪ ಮೊಖಾಸಿ, ಈಶ್ವರ ಉಳ್ಳೆಗಡ್ಡಿ, ಸಂಘದ ಅಧ್ಯಕ್ಷ ಪಕ್ಕೀರಪ್ಪ ಕೋಟಗಿ, ಉಪಾಧ್ಯಕ್ಷ ಸಂಗಪ್ಪ ಶೀಲವಂತರ, ಆಡಳಿತ ಮಂಡಳಿ ಸದಸ್ಯರಾದ ಸಿದ್ದಪ್ಪ ಬಂಗಿ, ವಿಠ್ಠಲ ಪವಾರ, ಬಸವರಾಜ ಚನ್ನನವರ, ಗಂಗಪ್ಪ ರೋಗನ್ನವರ, ರಮೇಶ ಬಿಡಿ, ಜೈಪಾಲ ಮೂಳಕುರ, ಯಲ್ಲಪ್ಪ ಕೌಜಲಗಿ, ಯಲ್ಲಪ್ಪ ಮರೆನ್ನವರ, ರತ್ನವ್ವ ಹಿರೇಮಠ, ಬಾಳವ್ವಾ ಚಂದರಗಿ, ಶಿವಾನಂದ ಗಣಾಚಾರಿ, ಕಾರ್ಯನಿರ್ವಾಹಕ ರಮೇಶ ಕಿಡತಾಳ ಸೇರಿದಂತೆ ಸಂಘದ ಸದಸ್ಯರು, ಮುಖಂಡರು, ರೈತರು, ಗ್ರಾಮಸ್ಥರು ಪಾಲ್ಗೊಂಡಿದ್ದರು. ನಿರೂಪಣೆಯನ್ನು ನಾಗವೇಣಿ ಕುಡಚಿಮಠ ನೆರವೇರಿಸಿದರು.

# ವಿಕಲ ಚೇತನ ದಿನಾಚರಣೆ ಕಾರ್ಯಕ್ರಮ



ಇಂಡಿ :ವಿಕಲಚೇತನರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಕುರಿತು ಜಾಗೃತಿ ಸಮಾನ ಅವಕಾಶ ಹಾಗೂ ಸೌಲಭ್ಯ ಕಲ್ಪಿಸುವದು ಸರಕಾರದ ಉದ್ದೇಶವಾಗಿದೆ ಎಂದು ಕಂದಾಯ ಉಪವಿಬಾಗಾಧಿಕಾರಿ ಅಬೀದ ಗದ್ಯಾಳ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಅಖಿಲ ಕರ್ನಾಟಕ ವಿಕಲ ಚೇತನರ ಒಕ್ಕೂಟ ಇಂಡಿ ಇವರ ಆಶ್ರಯದಲ್ಲಿ ನಡೆದ ವಿಕಲ ಚೇತನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ವಿಕಲ ಚೇತನರು ತಾವು ಯಾ-ರಿಗೂ ಕಮ್ಮಿ ಇಲ್ಲ ಎಂಬಂತೆ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ಸಾಧನೆಗಳ ಸಾಬೀತು ಮಾಡಿದ್ದಾರೆ. ಮಾತ್ರವಲ್ಲದೆ ಆತ್ಮ ಸ್ಥೈರ್ಯವನ್ನು ಹೆಚ್ಚಿಸಿ ಕೊಳ್ಳುವ ಮೂಲಕ ಇತರರಿಗೆ ಮಾದರಿ ಯಾಗಿದ್ದಾರೆ ಎಂದರು.

ಸರಕಾರಗಳು ವಿಕಲಚೇತನರನ್ನು ಮುಖ್ಯ ವಾಹಿನಿಗೆ ಕರೆ ತರಲು ಹಾಗೂ ಸ್ವಾವಲಂಬಿಗಳಾಗಲು ಹಲವು ಯೋಜನೆಗಳನ್ನು ರೂಪಿಸುತ್ತಿದೆ. ಇದಕ್ಕೆ ಖಾಸಗಿ ಸಂಸ್ಥೆಗಳು ಕೂಡ ಕೈ ಜೊಡಿಸಬೇಕು ಎಂದರು.

ಶಾಸಕರ ಪುತ್ರ ವಿಠ್ಠಲಗೌಡ ಪಾಟೀಲ, ಅಂತರ ರಾಷ್ಟ್ರೀಯ ಕ್ರೀಡಾಪಟು ರಾಜೇಶ ಪವಾರ,ಶಿಕ್ಷಣ ಇಲಾಖೆ ಕ್ಷೇತ್ರ ಸಮನ್ವಯ ಅಧಿಕಾರಿ ಎಸ್.ಆರ್.ನಡಗಡ್ಡಿ ,ಅಖಿಲ ಕರ್ನಾಟಕ ವಿಕಲ ಚೇತನ ಒಕ್ಕೂಟದ ಇಂಡಿ ಘಟಕದ ಅಧ್ಯಕ್ಷ ಎಸ್.ಎಂ.ಮಕಾನದಾರ, ಎಮ್.ಆರ್.ಡಬ್ಬೂ ಇಂಡಿ ಪರಸುರಾಮ ಭೋಸಲೆ, ಪ್ರಧಾನ ಕಾರ್ಯದರ್ಶಿ ಶಿವಲಿಂಗಪ್ಪ ನಾಯ್ಕೋಡಿ, ಪ್ರಕಾಶ ಐರೋಡಗಿ , ಬಸವರಾಜ ಗೊರನಾಳ ಮಾತನಾಡಿದರು.

ಸಮಾರಂಭದಲ್ಲಿ ಬಾಬುಶಾ ಹೊಸಮನಿ, ಸಿದ್ದಪ್ಪ ಗುಲೆ, ಪುಂಡಲೀಕ ಪೂಜಾರಿ, ಮಹಾನಂದಾ ಬಂಡಿವಡ್ಡರ, ಶ್ರೀದೇವಿ ಹಳಕೆ, ಕಲಾವತಿ ಹುಳ್ಳೆ, ಶಿವಕಾಂತವ್ವ ಕುಂಬಾರ, ಜ್ಞಾನೇಶ್ವರ ಠೋಕೆ, ನಿಂಗರಾಜ ಬಿಸನಾಳ, ಪಾಂಡು ರಾಠೋಡ, ಮಲ್ಲಪ್ಪ ಬನಸೋಡೆ, ಬಾಬು ಸಂಗೋಗಿ, ಭರಮಲಿಂಗ ಪೂಜಾರಿ, ಅಮಸಿದ್ದ ಬಗಲಿ, ರೇಖಾ ಕ್ಷತ್ರಿ, ಶಿವಾನಂದ ನಾಗರಹಳ್ಳಿ ಮತ್ತಿತರಿದ್ದರು.

# ಎಲ್ಲರೂ ಜಂಗಮರಾಗಲು ಸಾಧ್ಯವಿಲ್ಲ: ಬಿದರಿ

**ವಿಜಯಪುರ:** ಎಲ್ಲರೂ ಜಂಗಮರಾಗಲು ಸಾಧ್ಯವಿಲ್ಲ, ಜಂಗಮರು ತಲೆ ಮೇಲೆ ಜಗತ್ತಿನ ಭಾರ ಹೊತ್ತುಕೊಂಡಿದ್ದಾರೆ ಅವರಲ್ಲಿ ನಮ್ಮನ್ನು ಭಾಗಿಸಿ ಸನ್ಮಾರ್ಗದಲ್ಲಿ ನಡೆಸುವ ಶಕ್ತಿ ಇದೆ ಅದನ್ನೇ ಶ್ರೀ ಸಿದ್ಧೇಶ್ವರ ಅಪ್ಪಾವರು ಮಾಡಿ ಹೋಗಿದ್ದಾರೆ ಎಂದು ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸಿದ್ಧಪ್ಪ ಬಿದರಿ ಹೇಳಿದರು.

ನಗರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಗುರುನಮನ ಕಾರ್ಯಕ್ರಮದ ಮೂರನೇ ಗೋಷ್ಠಿ 'ಗ್ರಾಮ ಸಂಸ್ಕೃತಿ' ಉದ್ಘಾಟಿಸಿ ಮಾತನಾಡಿದ ಅವರು, ಶಾಣ್ಯಾರ ಜಗಳ ಬುದ್ಧಿವಳಗ, ದಡ್ಡರ ಜಗಳ ಬಡಿಗಿ ಒಳಗ ಎಲ್ಲಾರ ಜಗಳ ಒಂದೆ, ಸೋಸೆ ತಂದಾರ, ರೊಟ್ಟಿ ಬರುವಲ್ಲದು, ಮಾಸ್ತರ ನೌಕರಿ ಕೊಟ್ಟಾರ, ಕಲಿಸಾಕ ಬರುವಲ್ಲದು ಕಾರಣ ನಾವು ಗ್ರಾಮೀಣ ಸಂಸ್ಕೃತಿಯನ್ನು ಮರೆತಿದ್ದೇವೆ. ಹಿರಿಯರ ಮಾತಿಗೆ ಇಂದು ಬೆಲೆ ಇಲ್ಲದಂತಾಗಿದೆ ಇದು ಎಲ್ಲ ಸರಿಯಾಗಬೇಕಾದರೆ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳು ತಿಳಿಸಿರುವ ಗ್ರಾಮ ಸಂಸ್ಕೃತಿ, ಕೃಷಿ ಸಂಸ್ಕೃತಿಯನ್ನು ಪಾಲಿಸಬೇಕು ಎಂದರು.

ಶ್ರೀ ಸಿದ್ಧೇಶ್ವರ ಅಪ್ಪಾವರು ನನಗೆ ಜಾನಪದ ಸಾಹಿತ್ಯದ ಮೂಲಕ ಸಮಾಜವನ್ನು ಎಚ್ಚರಿಸುವ ಕೆಲಸವನ್ನು ಮುಂದುವರೆಸು ಎಂದು ಆಶೀರ್ವಾದ ಮಾಡಿ ಹೋಗಿದ್ದಾರೆ. ದಡ್ಡರಿಗೆ ಧೈರ್ಯ ಬಾಳ, ಶಾಣ್ಯಾರಿಗೆ ಸಂಶಯಬಾಳ ಹಾಗೇ ನಾನು ಜಾನಪದದ ಮೂಲಕ ತಿಳಿದಷ್ಟನ್ನು ಹೇಳುವ ಕಾರ್ಯ ಮಾಡುತ್ತಿದ್ದೇನೆ. ಇಂದು ಮಕ್ಕಳು ತಂದೆ-ತಾಯಿ ಮಾತು ಕೇಳುತ್ತಿಲ್ಲ. ಶಾಲೆಯಲ್ಲಿ ಶಿಕ್ಷಕರ ಮಾತು ಕೇಳುತ್ತಿಲ್ಲ. ನಾವು ನಮ್ಮ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳೆಸಬೇಕು. ನಮ್ಮ ಆಚಾರ ವಿಚಾರಗಳನ್ನು ಮರೆಯದೆ ಗುರು ಹಿರಿಯರಿಗೆ ಗೌರವಿಸುವ ಸಂಸ್ಕಾರವನ್ನು ಮಕ್ಕಳಲ್ಲಿ ಬಿತ್ತಬೇಕು ಎಂದು ಹೇಳಿದರು.

ಮೊದಲು ಊರಿಗೆ ಒಬ್ಬರೋ ಇಬ್ಬರೋ ಬುದ್ದಿವಂತರು ಇರ್ತಿದ್ರು, ಈಗ ಊರು ತುಂಬಾ ಬುದ್ದಿವಂತರು ಒಬ್ರೋ..ಇಬ್ರೋ ದಡ್ಡರು ಇದ್ದಾರ. ಹಾಗಾಗಿ ಯಾರಿಗೆ ಯಾರು ಬುದ್ದಿ ಹೇಳಬೇಕು ಎನ್ನುವುದು ಗೊತ್ತಾಗದೆ ನಮ್ಮ ವಿಚಾರ ಸಂಸ್ಕೃತಿ ಮರೆತು ಬದುಕು ಸಾಗಿಸುತ್ತಿದ್ದಾರೆ. ಅರ್ಧಬಂರ್ದಾ ಬಟ್ಟೆ ಹಾಕಿ ದೊಡ್ಡವರೆ ತಿರುಗಾಡಿದರೆ ಇನ್ನೂ ಮಕ್ಕಳು ಹೇಗೆ ತಿರುಗಾಡಬೇಕು ನೀವೇ ಯೋಚಿಸಿ. ನಮ್ಮ ಹಿರಿಯರ ಕಾಲದಲ್ಲಿ ಮನೆ ಸಣ್ಣದು, ಮನಸ್ಸು ದೊಡ್ಡದು ಇರುತ್ತಿತ್ತು. ಈಗ ಮನೆ ದೊಡ್ಡದು ಮನಸ್ಸು ಸಣ್ಣದು ಆಗುತ್ತಿವೆ. ಎಲ್ಲರೂ ಇದರ ಬಗ್ಗೆ ಯೋಚನೆ ಮಾಡಬೇಕು. ಸತ್ಯ ಹೇಳುವುದನ್ನು ರೂಡಿಸಿಕೊಂಡು, ಮಠ-ಮಸೀದಿಗಳು ಧರ್ಮವನ್ನು ಉಳಿಸುತ್ತವೆ. ಜಾತಿ ಮರೆತು ಎಲ್ಲರೂ ಒಂದಾಗಿ ಬದುಕು ಸಾಗಿಸಬೇಕು ಎಂದರು.



ನೀರು ಇಲ್ಲದೇ ಮೀನು ಬದುಕಲ್ಲ, ಮೀನು ಇಲ್ಲದಿದ್ದರೆ ನೀರು ಸ್ವಚ್ಚವಾಗಿರುವುದಿಲ್ಲ. ಹಾಗೆಯೇ ಊರಲ್ಲಿ ಶರಣರು, ಸಂತರು, ಕಲಾವಿದರು, ಸಾಹಿತಿಗಳು ಹಾಗೂ ಹಿರಿಯರು ಇರಬೇಕು. ಅವರು ಇದ್ದರೆ, ಊರೂ ಸ್ವಚ್ಚ, ಮನಸ್ಸು ಸ್ವಚ್ಚವಾಗಿರುತ್ತದೆ. ಸಂಸಾರ ಎಂಬ ಸಾಗರದಲ್ಲಿ ಕಲ್ಲಿನಂಗಿರಬೇಕು. ಎಲ್ಲರ ಬಾಯಿಯಲ್ಲಿ ಬೆಲ್ಲದಂಗಿರಬೇಕು. ಅತ್ಯದ್ಭುತ ಸಾಲುಗಳ ಮೂಲಕ ಗ್ರಾಮ ಸಂಸ್ಕೃತಿಯ ಬದುಕನ್ನು ಅರ್ಥ ಪೂರ್ಣವಾಗಿ ತೆರೆದಿಟ್ಟರು.

ಗ್ರಾಮಗಳಲ್ಲಿ ಎಲ್ಲರೂ ಒಟ್ಟಾಗಿ ಎಲ್ಲರೊಂದಿಗೂ ಪ್ರೀತಿ, ಸಂತೋಷದಿಂದ ಬದುಕಬೇಕು. ಹಿರಿಯರಿಗೆ ಗೌರವ ಕೊಡಬೇಕು. ಆಗಲೇ ನಮ್ಮ ಜೀವನ ಸಾಥ-ರ್ಕವಾಗುತ್ತದೆ ಎಂದು ಹೇಳಿದರು.

ಅಮೇರಿಕಾದಿಂದ ಆಗಮಿಸಿದ್ದ ಶಿಲ್ಪಾ ಹಾದಿಮನಿ ಅವರು ಮಾತನಾಡಿ, ಅಪ್ಪಾವರ ದೇಹ ತ್ಯಾಗವಾಗಿ 2 ವರ್ಷಗಳು ಕಳೆದಿವೆ. ಆದರೆ ಅವರು ನೀಡಿರುವ ಸತ್ಯ, ಪ್ರೇಮ, ಪ್ರವಚನಗಳು ನಮ್ಮೊಂದಿಗೆ ಸದಾ ಇವೆ. ಮಾನವೀಯ ಮೌಲ್ಯಗಳನ್ನು ನಮಗೆ ನೀಡಿ ಆದ-ರ್ಶ ಬದುಕು ಸಾಗಿಸಿದ್ದಾರೆ. ಸಕಲರಿಗೂ ಲೇಸನ್ನೇ ಬಯಸಿ ಜಗತ್ತಿಗೆ ಜ್ಞಾನ ದಾಸೋಹವನ್ನು ಹಂಚಿ ಹೋಗಿದ್ದಾರೆ. ಅಮೇರಿಕಾದಲ್ಲಿ ನಾನು ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡಿದ್ದೇನೆ. ಅದು ನನ್ನ ಬದುಕಿನ ಸಾರ್ಥಕ ಕ್ಷಣಗಳು ಎಂದು ಭಾವುಕರಾದರು.

ಬಾಗಲಕೋಟ ಭೊವಿ ಪೀಠದ ಜಗದ್ಗುರು ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮೀಜಿ ಮಾತನಾಡಿ, ಜಗತ್ತಿನ ಮೊದಲ ಸಂಸ್ಕೃತಿ ಗ್ರಾಮೀಣ ಸಂಸ್ಕೃತಿ, ಕೃಷಿ ಸಂಸ್ಕೃತಿ. ನಾವು ಮೂರು ಸಂಸ್ಕೃತಿಗಳನ್ನು ನೋಡುತ್ತೇವೆ. ಗ್ರಾಮೀಣ ಜನರು ನಾವು ಇಂದು ಗ್ರಾಮಗಳಿಂದ ವಲಸೆ ಬಂದು ನಗರಗಳನ್ನು ಸೇರುತ್ತಿದ್ದೇವೆ. ಇದರಿಂದ ನಮ್ಮಲ್ಲಿನ ಸಂಬಂಧಗಳ ಮೌಲ್ಯಗಳು ಕಡಿಮೆಯಾಗುತ್ತಿವೆ. ಕಾರಣ ನಾವು ನಮ್ಮ ಮೂಲ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ. ಕುಂಬಾರನ ಅಣತೆ, ನೇಕಾರನ ಬತ್ತಿ, ಗಾಣಿಗನ ಎಣ್ಣೆಯಂತೆ ನಾವೆಲ್ಲ ಒಂದಾಗಿ ಬದುಕಬೇಕಾಗಿದೆ. ಆಗ ಬದುಕು ಸುಂದರವಾಗುತ್ತದೆ ಎಂದರು.

ಯಾವ ಮನೆಯಲ್ಲಿ ಸಂಸ್ಕಾರ ಇರುತ್ತದೆಯೋ ಆ ಮನೆಯಲ್ಲಿ ಮಾತ್ರ ಸಂಸ್ಕೃತಿ ಇರುತ್ತದೆ. ಮನೆಯಲ್ಲಿ ಸಂಸ್ಕಾರ ಮೂಡಿಸುವವರು ತಾಯಂದಿರು. ಗುರು ಹಿರಿಯರನ್ನು ಗೌರವಿಸುವ, ಅತಿಥಿಗಳನ್ನು ಸತ್ಕರಿಸುವ ಅತಿಥಿ ದೇವೋಭವ ಎನ್ನುವ ಸಂಸ್ಕೃತಿ ನಮ್ಮದು. ಹಲವಾರು ಸಂಸ್ಕೃತಿಗಳನ್ನು ಹೊಂದಿರುವ ಭಾರತದಲ್ಲಿ ಬಸವಣ್ಣನವರು ಸಮಾನತೆ ಬೀಜವನ್ನು ಬಿತ್ತಿದರು. ಶರಣರು, ಸಂತರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯಬೇಕು ಎಂದು ಹೇಳಿದರು

ಸಿದ್ಧೇಶ್ವರ ಶ್ರೀಗಳಿಗೆ ಸಾಕಷ್ಟು ಪ್ರಶಸ್ತಿಗಳು, ಆಶ್ರಮಕ್ಕೆ ದಾನದ ರೂಪದಲ್ಲಿ ಹಣ ಬಂದರೂ ಅದನ್ನು ಸ್ವೀಕರಿಸದೆ ಮರಳಿಸಿ ತಮ್ಮ ಜೋಳಿಗೆಯನ್ನು ಖಾಲಿಯಾಗಿಯೇ ಇಟ್ಟುಕೊಂಡರು. ನಾವು ಅವರ ಆದರ್ಶಗಳನ್ನು ಪಾಲಿಸಿ ಅಳವಡಿಸಿಕೊಂಡು ಸಂಸ್ಕಾರವಂತರಾಗಬೇಕು ಎಂದು ಹೇಳಿದರು.

ಸಿಂದಗಿಯ ಸಾರಂಗಮಠದ ಶ್ರೀ ಪ್ರಭುಸಾರಂಗ ಶಿವಾಚಾರ್ಯ ಸ್ವಾಮೀಜಿಗಳು ಮಾತನಾಡಿ, ಗ್ರಾಮ ಪಂಚಾಯತ್ ಚುನಾವಣೆಗಳು ಬಂದಾಗಿನಿಂದ ಗ್ರಾಮೀಣ ಜನರ ಮನಸ್ಸನ್ನು ಕದಡುವ ಕೆಲಸ ಮಾಡಿವೆ. ಈ ಚುನಾವಣೆಗಳಿಂದ ಗ್ರಾಮಗಳು ಕೆಟ್ಟು ಹೋಗಿವೆ. ಗ್ರಾಮಗಳಲ್ಲಿ ಸೌಲಭ್ಯಗಳ ತೊಂದರೆ ಇರಬಹುದು ಆದರೆ ನೆಮ್ಮದಿ ಇದೆ. ನಗರಗಳಲ್ಲಿ ಸೌಲಭ್ಯಗಳಿವೆ ಆದರೆ ನೆಮ್ಮದಿ ಇಲ್ಲ. ಮೊದಲು ಗ್ರಾಮಗಳಲ್ಲಿ ಒಂದೇ ಗ್ರಾಮದೇವತೆ ಜಾತ್ರೆ ಇರುತ್ತಿತ್ತು. ಆದರೆ ಈಗ ಹಾಗಿಲ್ಲ, ಜಾತಿಗೊಂದು ಜಾತ್ರೆಗಳಾಗಿ ಜನರ ಹೃದಯಗಳು ಒಡೆದು ಹೋಗಿವೆ. ನಮ್ಮ ಭಾವಗಳು ಶುದ್ಧವಾಗದ ಹೊರತು ಬದುಕು ಸುಂದರವಾಗುವುದಿಲ್ಲ ಎಂದರು.

ಗ್ರಾಮ ಸಂಸ್ಕೃತಿಯಲ್ಲಿ ಮನೆಯ ಬಾಗಿಲು ಮುಂದೆ ಆಕಳು, ದನಕರುಗಳು ಇರುತ್ತಿದ್ದವು. ತೋಟದಲ್ಲಿ ಎತ್ತುಗಳು, ಆಕಳು ಇರುತ್ತಿದ್ದವು ಆದರೆ ಇಂದು ಟ್ರಾ ್ಯಕ್ಟರ್‌ಗಳನ್ನು ಮನೆ ಮುಂದೆ ನಿಲ್ಲಿಸಿಕೊಂಡಿದ್ದಾರೆ. ಮಕ್ಕಳಲ್ಲಿ ಒಳ್ಳೆಯ ಸಂಸ್ಕೃತಿಯನ್ನು ನೀಡಬೇಕು. ಗ್ರಾಮೀಣ ಸಂಸ್ಕೃತಿ ಉಳಿಸಿಕೊಳ್ಳಬೇಕಾದರೆ, ಪ್ರವಚನ, ಸತ್ಸಂಗ ಕಾರ್ಯಕ್ರಮಗಳಲ್ಲಿ ನಿಮ್ಮ ಮಕ್ಕಳನ್ನು ಕರೆದುಕೊಂಡು ಬರಬೇಕು. ಆಗ ಮಕ್ಕಳಲ್ಲಿ ಸಂಸ್ಕಾರ-ಸಂಸ್ಕೃತಿ ತಾನಾಗಿಯೇ ಬೆಳೆಯುತ್ತದೆ ಎಂದು ಹೇಳಿದರು.

ಜ್ಞಾನಯೋಗಾಶ್ರಮದ ಅಧ್ಯಕ್ಷ ಗುರುಗಳಾದ ಶ್ರೀ ಬಸವಲಿಂಗ ಸ್ವಾಮೀಜಿಗಳು ಮಾತನಾಡಿ, ಶ್ರೀ ಸಿದ್ಧೇಶ್ವರ ಅಪ್ಪಗಳೇ ಈ ಗ್ರಾಮ ಸಂಸ್ಕೃತಿ ಆಯೋಜನೆಗೆ ಕಾರಣೀಕರ್ತರು. ಭಾರತೀಯರು ಜ್ಞಾನದ ಬೆಳಕಿನಲ್ಲಿ ಬದುಕುವವರು. ತಂದೆ-ತಾಯಿಗಳನ್ನು ಪ್ರೀತಿಸು, ಗುರ-ಹಿರಿಯರನ್ನು ಗೌರವಿಸು, ಹಸಿದವರಿಗೆ ಅನ್ನ ಹಾಕು ಇದು ಸಿದ್ದೇಶ್ವರ ಅಪ್ಪನವರು ತಿಳಿಸಿಕೊಟ್ಟಿರುವ ಸಂಸ್ಕೃತಿ. ಅದನ್ನು ನಾವು ಪಾಲಿಸಿದರೆ ಶ್ರೀಗಳ ಆಶೀರ್ವಾದಕ್ಕೆ ಪಾತ್ರರಾಗುತ್ತೇವೆ ಎಂದರು.

ಬೆಳಗಿನ ಸೂರ್ಯ ಉದಯದ ಮೊದಲೇ ಏಳುವ ಸಂಸ್ಕೃತಿ ನಮ್ಮದು. ಬೆಳ್ಳಿ ಚುಕ್ಕಿ ಕಾಣಿಸುತ್ತಿತ್ತು, ರೈತ ಏಳುತ್ತಿದ್ದ, ತಾಯಂದಿಯರು ಹಾಡುಗಳನ್ನು ಹಾಡುತ್ತಾ ಧಾನ್ಯ ಬೀಸುತ್ತಿದ್ದರು, ಘಂಟೆ ಬಾರಿಸುತ್ತಾ ಪೂಜೆ ಮಾಡುತ್ತಿದ್ದರು ಇದು ನಮ್ಮ ಹಳ್ಳಿಯ ಸಂಸ್ಕೃತಿ. ತಾಯಿ ಕಲ್ಲಲ್ಲಿ ಕುಟ್ಟಿ ಕೊಡುತ್ತಿದ್ದ ಖಾರದ ಚಟ್ನಿಯ ರುಚಿ ಇಗಿಲ್ಲ. ಮನೆಗಳಲ್ಲಿ ದನಗಳಿಲ್ಲ, ಪಾಕಿಟ್ ಹಾಲು ಮಕ್ಕಳಿಗೆ ಹಾಕುತ್ತೇವೆ ಇದರಿಂದ ಮಕ್ಕಳ ಆರೋಗ್ಯ ಕೆಡುತ್ತಿದೆ ದುಡಿದದ್ದನ್ನು ಆಸ್ಪತ್ರೆಗೆ ಹಾಕುತ್ತಿದ್ದೇವೆ ಇದು ನಮ್ಮ ಬದುಕು. ಶ್ರೀ ಸಿದ್ದೇಶ್ವರ ಅಪ್ಪಗಳು ಹೇಳಿದಂತೆ ನಾವು ಹಳ್ಳಿಯ ಸಂಸ್ಕೃತಿ, ರೈತ ಸಂಸ್ಕೃತಿಯನ್ನು ರೂಡಿಸಿಕೊಳ್ಳಬೇಕು ಆಗ ನಮಗೆ ಆರೋಗ್ಯಯುತ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜ್ಞಾನ ಯೋಗಾಶ್ರಮದ ಭಕ್ತರು, ನಾಡಿನ ಸಾಹಿತಿಗಳು, ಸ್ವಾಮೀಜಿಗಳು ಉಪಸ್ಥಿತ-ರಿದ್ದರು.

# ರಾಷ್ಟ್ರೀಯ ಸರಕಾರಿ ನಿವೃತ್ತ ನೌಕರ ದಿನಾಚರಣೆ


ಬೆಳಗಾವಿ : ರಾಷ್ಟ್ರೀಯ ಸರಕಾರಿ ನಿವೃತ್ತ ನೌಕರರ ದಿನಾಚರಣೆಯಲ್ಲಿ ಅಧ್ಯಕ್ಷರಾದ ಎಸ್. ಜಿ. ಸಿದ್ನಾಳ್ ಮಾತನಾಡುತ್ತಾ ಈ ದಿನಾಚರಣೆಗೆ ಕಾರಣಿಭೂತರಾದ ಡಿ. ಎಸ್. ನಕ್ಕರ್. ಇವರು ಕೇಂದ್ರ ಸರ್ಕಾರ ನೇಮಿಸಿದ್ದ ಭಟ್ಟಾಚಾರ್ಯ ವರದಿಯಲ್ಲಿನ ನಿವೃತ್ತ ನೌಕರ-ರಿಗೆ ಪಿಂಚಣಿಯನ್ನು ನಿಲ್ಲಿಸಬೇಕೆಂಬುದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿ ನಿವೃತ್ತಿ ವೇತನ ಪಿಂಚಣಿದಾರರ ಹಕ್ಕು ಅದು ಭಿಕ್ಷೆಯಲ್ಲ ಎಂದು ಸಮ ಸಮರ್ಥವಾದ ವಾದ ಮಂಡಿಸಿದರು. 1956 ರಲ್ಲಿ ಸುಪ್ರೀಂಕೋರ್ಟಿನ ನ್ಯಾಯಾಧೀಶರಾದ ವಾಯ್. ಬಿ ಚಂದ್ರಚೂಡ. ಇವರ ಮುಂದೆ ದಾವೆ ನಡೆಸಿ ಸತತ 10 ವರ್ಷಗಳ ಕಾಲ ಹೋರಾಡಿದ್ದಾರೆ.

ನ್ಯಾಯಾಲಯದ ಪೂರ್ಣ ಪೀಠವು ದಿನಾಂಕ 17. 12,1982, ರಲ್ಲಿ ತನ್ನ




ಐತಿಹಾಸಿಕ ತೀರ್ಪನ್ನ ನೀಡಿ ಪಿಂಚಣಿಯನ್ನ ಮುಂದುವರಿಸುವಂತೆ ಆದೇಶ ನೀಡಿತು. ಆ ತೀರ್ಪಿನ ಫಲವಾಗಿ ನಾವಿಂದು ನಿವೃತ್ತಿ ವೇತನವನ್ನ ಪಡೆಯುತ್ತಿದ್ದೇವೆ. ಇದಕ್ಕಾಗಿ ಈ ದಿನವನ್ನು ಪಿಂಚಣಿ ದಾರರ ದಿನವನ್ನು ಆಚ-'ರಿಸುವುದರ ಮೂಲಕ ಅವರಿಗೆ ಕೃತಜ್ಞತೆಯನ್ನ ಸಲ್ಲಿಸಬೇಕೆಂದು ಎಲ್ಲಾ ನಿವೃತ್ತ ನೌಕರರ ಬಂಧುಗಳಲ್ಲಿ ವಿನಂತಿಸುತ್ತೇನೆ. ನಾವೆಲ್ಲರೂ ಡಿ.ಎಸ್. ನಕ್ಕರ್. ಅವರನ್ನ ಸ್ಮರಿಸಿಕೊಳ್ಳಲು ಈ ದಿನವನ್ನು ಬಹಳ ಶ್ರದ್ಧೆಯಿಂದ ಆಚರಿಸುವುದು ಸೂಕ್ತವೆಂದು ಎಸ್.ಜಿ. ಸಿದ್ನಾಳ್. ಒತ್ತಿ ಹೇಳಿದರು.ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸಭೆಯಲ್ಲಿ ನಮ್ಮ ದೇಶದ ಹಿಂದಿನ ಪ್ರಧಾನ ಮಂತ್ರಿಗಳಾದ ಡಾಕ್ಟರ್. ಮನ್ ಮೋಹನಸಿಂಗ್ ಅರ್ಥಶಾಸ್ತ್ರಜ್ಞರು ನಿಧನದಿಂದ ದೇಶವು ಒಬ್ಬ ಚಿಂತಕನನ್ನು ಕಳೆದು ಕಳೆದುಕೊಂಡಂತಾಗಿದೆ. ಎಂದು ತಿಳಿಸಿ ಎರಡು ನಿಮಿಷ ಮೌನ ಆಚರಿಸಿ ಚಿರಶಾಂತಿ ನೀಡಲು ಪ್ರಾರ್ಥನೆ ಸಲ್ಲಿಸಿದೆವು. ರಾಜ್ಯಸಂಘದ ಆದೇಶದಂತೆ ಸಂಘಟನೆ ಬೇಡಿಕೊಳ್ಳುವ ಬಗ್ಗೆ, ಸದಸ್ಯತ್ವದ ಬಗ್ಗೆ ಚರ್ಚಿಸಿದರು. ಅದರ ಜೊತೆಗೆ ನಿವೃತ್ತ ನೌಕರರ ಸಮಸ್ಯೆಗಳನ್ನ ಬಗೆಹರಿಸುವಲ್ಲಿ ಜಿಲ್ಲಾ ಸಂಘ ಹೋರಾಡುತ್ತದೆ ಎಂದು ತಿಳಿಸಿದರು. ಸಭೆಯಲ್ಲಿ ಮುದಕವಿ, ಹಿರೇಮಠ,ಡಿ. ಎಸ್.ವಾಗೂಕರ. ರಜಪೂತ ಮೇಡಂ, ಎಂ. ವಾಯ್. ಮೆಣಸಿನಕಾಯಿ,- ಎಲ್ಲ ತಾಲೂಕ ಅಧ್ಯಕ್ಷರು ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

## ಕುವೆಂಪು ಜನ್ಮದಿನವನ್ನು ವಿಶ್ವ ಮಾನವ ದಿನವನ್ನಾಗಿ ಆಚರಿಸುವುದು ಏಕೆ?



ಕನ್ನಡ ಭಾಷೆ ಎಂದಾಗ ಮೊದಲು ನೆನಪಾಗುವುದು ರಸ ಋಷಿ ಕುವೆಂಪು. ಹೌದು, ಡಿಸೆಂಬರ್ 29 ರಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ಕನ್ನಡ ನಾಡು ನುಡಿಗೆ ತನ್ನ ಪ್ರಾಣವನ್ನೇ ಮುಡಿಪಾಗಿಸಿಟ್ಟ ಸಾಹಿತಿ ಕುವೆಂಪುರವರ ಜನ್ಮದಿನ. ಇವರ ಪೂರ್ಣ ಹೆಸರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ. 20ನೇ ಶತಮಾನದಲ್ಲಿ ಅವರು ಬೋಧಿಸಿದ ಮನುಜಪಥ ವಿಶ್ವಪಥ ಸಂದೇಶವನ್ನು ಗೌರವಿಸುವ ಸಲುವಾಗಿ ಪ್ರತೀ ವರ್ಷ ಅವರ ಜನ್ಮ ದಿನವಾದ ಡಿಸೆಂಬರ್ 29 ಅನ್ನು ವಿಶ್ವ ಮಾನವ ದಿನ ಎಂದು ಆಚರಿಸುತ್ತ ಬರಲಾಗುತ್ತಿದೆ. ಈ ವಿಶೇಷ ದಿನದಂದು ಕುವೆಂಪುರವರು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆಗಳನ್ನು ನೆನಪಿಸಿಕೊಳ್ಳಲಾಗುತ್ತದೆ. ಅವರ ಜನ್ಮದಿನದ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ಆಯೋಜಿಸಲಾಗುತ್ತದೆ. ಕುವೆಂಪು ಅವರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಿರೇಕೊಡಿಗೆ ಎಂಬಲ್ಲಿ ಡಿಸೆಂಬರ್ 29, 1904ರಲ್ಲಿ ಜನಿಸಿದರು. ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ಮೈಸೂರಿನ ಮಹಾರಾಜ ಕಾಲೇಜಿನಿಂದ ಬಿ.ಎ ಹಾಗೂ ಕನ್ನಡದಲ್ಲಿ ಎಂ.ಎ. ಪದವಿಯನ್ನು ಪಡೆದರು. ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರೂ ಕೂಡ ಆಗಿ ಸೇವೆ ಸಲ್ಲಿಸಿದರು. ತದನಂತರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದರು. ತಮ್ಮ ಕಲ್ಪನೆಯ ಕೂಸಾಗಿದ್ದ ಮಾನಸಗಂಗೋತ್ರಿಯನ್ನು ಕಟ್ಟಿ ಬೆಳೆಸಿ ಕೀರ್ತಿಗೆ ಇವರಿಗೆ ಸಲ್ಲಿಸುತ್ತದೆ.

ಕುವೆಂಪು ಅವರು ಕವಿ ಯಾಗಿ, ಕಾದಂಬರಿಕಾರರಾಗಿ ಸಾಹಿತ್ಯದ ವಿವಿಧ ಮಜಲುಗಳಲ್ಲಿ ಕೃಷಿ ಮಾಡಿದ, ಇಡೀ ಪ್ರಪಂಚಕ್ಕೆ ವಿಶ್ವ ಮಾನವ ಸಂದೇಶ ನೀಡಿದ ಮಹಾನ್ ವ್ಯಕ್ತಿಯಾಗಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ಇವರು ನೀಡಿದ ಕೊಡುಗೆ ಅಪಾರವಾಗಿದೆ. ಶ್ರಿ ರಾಮಾಯಣ ದರ್ಶನಂ 'ಕಾನೂರು ಹೆಗ್ಗಡತಿ' ಹಾಗೂ 'ಮಲೆಗಳಲ್ಲಿ ಮದುಮಗಳು' ಸೇರಿದಂತೆ ವಿವಿಧ ಕೃತಿ ಹಾಗೂ ಕಾದಂಬರಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಇವರು ಸಾಹಿತ್ಯ ಸೇವೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ, ಕರ್ನಾಟಕ ರತ್ನ ಪ್ರಶಸ್ತಿ, ರಾಷ್ಟಕವಿ, ಶ್ರಿ ರಾಮಾಯಣ ದರ್ಶನಂ ಮಹಾಕಾವ್ಯಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ ಹಾಗೂ ಪದ್ಮವಿಭೂಷಣ ಸೇರಿದಂತೆ ವಿವಿಧ ಪ್ರಶಸ್ತಿಗಳು ಲಭಿಸಿದೆ.

# ನಾಡು ಕಂಡ ಶ್ರೇಷ್ಠ ಸಾಹಿತಿ ರಾಷ್ಟ್ರಕವಿ ಕುವೆಂಪು

ಕನ್ನಡ ನಾಡು ಕಂಡ ಶ್ರೇಷ್ಠ ಸಾಹಿತಿ,ರಾಷ್ಟ್ರ ಕವಿ ,ಸಾಹಿತ್ಯ ಲೋಕದ ಧ್ರುವತಾರೆ, ಮಾನವೀಯತೆಯ ಸಂದೇಶವನ್ನು ವಿಶ್ವಕ್ಕೆ ಸಾರಿದ ಮೇಧಾವಿ, ಕರುನಾಡಿನ ಹೆಮ್ಮೆಯ ಪುತ್ರ ಕುವೆಂಪುರವರು ಈ ನಾಡು ಕಂಡ ಪ್ರಗತಿಪರ ಸಾಹಿತಿ ಎಂದೇ ಪ್ರಖ್ಯಾತರಾಗಿದವರು. ಕುವೆಂಪುರವರು ಜನಪರ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ಅತ್ಯಂತ ಪ್ರಾಮಾಣಿಕತೆಯಿಂದ ಅಷ್ಟೇ ದಕ್ಷತೆಯಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡ ಶ್ರೇಷ್ಠ ಚಿಂತಕರು.


ಅವರ ಜೀವನ ಮೌಲ್ಯಗಳ ಸಾಹಿತ್ಯವನ್ನು ನಾಡಿಗೆ ಧಾರೆಯೆರೆದ ಶ್ರೇಷ್ಠ ಸಮಾಜವಾದಿಯಾಗಿದಾರೆ. ವರಕವಿ ಬೇಂದ್ರೆ ಯವರಿಂದ 'ಯುಗದ ಕವಿ ಜಗದ ಕವಿ' ಎನಿಸಿಕೊಂಡವರು.ವಿಶ್ವಮಾನವ ಸಂದೇಶ ನೀಡಿದವರು. ಕನ್ನಡದ ಎರಡನೆಯ ರಾ?ಕವಿ. ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮೊದಲ ಬಾರಿಗೆ ಕರುನಾಡಿಗೆ ತಂದುಕೊಟ್ಟವರು. ಕರ್ನಾಟಕ ಸರ್ಕಾರವು ಕೊಡಮಾಡುವ ಕರ್ನಾಟಕ ರತ್ನ ಹಾಗೂ ಪಂಪ ಪ್ರಶಸ್ತಿಯನ್ನು ಮೊಟ್ಟ ಮೊದಲ ಬಾರಿಗೆ ಪಡೆದವರು. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದಿದ ಇವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ, ಉಪಕುಲಪತಿಯಾಗಿ ನಿವೃತ್ತರಾದವರು.

ಅಂದಹಾಗೇ ಅವರು ಕೈಗೊಂಡ ಹತ್ತು ಹಲವು ಸಾಮಾಜಿಕ ಹಾಗೂ ಸಾಹಿತ್ಯದ ಸೇವಾ ಕೈಂಕರ್ಯಗಳು ಇಂದಿನ ಸಮಾಜಕ್ಕೆ ಮಾದ-ರಿಯಾಗಿ ನಿಂತಿವೆ ಎಂದರೆ ಖಂಡಿತವಾಗಿಯೂ ತಪ್ಪಾಗಲಾರದು. ಅದಕ್ಕಾಗಿ ಕುವೆಂಪುರವರ ಸಾಹಿತ್ಯದ ಸುಗಂಧವನ್ನು ತಿಳಿದುಕೊಳ್ಳುವ ಯತ್ನ ನಾವೆಲ್ಲರೂ ಸೇರಿ ಮಾಡುವುದು ಅತಿ ಅವಶ್ಯಕತೆ ಇರುವ ಈ ಹಿನ್ನೆಲೆಯಲ್ಲಿ ಅವರ ಕುರಿತು ಬರೆಯುವ ಸಣ್ಣ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಆತ್ಮೀಯ ಬಂಧುಗಳೇ, ಕುಪ್ಪಳಿಯ ವೆಂಕಟಪ್ಪನವರ ಮಗ ಪುಟ್ಟಪ್ಪನವರು ಸಾಹಿತ್ಯ ಕ್ಷೇತ್ರದಲ್ಲಿ ಅಗಾಧವಾದ ಕೃಷಿ ಮಾಡಿ,ಈ ನಾಡು ಎಂದೆಂದಿಗೂ ಮರೆಯಲಾಗದ ವಿಶ್ವ ಭ್ರಾತೃತ್ವ, ಸೌಹಾರ್ದತೆ, ಸಹೋದರತೆ, ಸಹಬಾಳ್ವೆ,ಸಮಾನತೆ, ಮಾನವೀಯತೆಯ ಸಂದೇಶವನ್ನು ಶಾಶ್ವತವಾಗಿ ಈ ಪುಣ್ಯ ಭೂಮಿಯಲ್ಲಿ ಸಾರಿದ ಭಾವೈಕ್ಯತೆಯ ಸಹೃದಯಿಗಳು, ಪ್ರೇರಣದಾಯಕರು ಎಂದರೆ ತಪ್ಪಾಗಲಾರದು.

ಕುವೆಂಪು ರವರು ಮಾನವೀಯತೆಯ ಸುಗಂಧವನ್ನು ಸರ್ವ ಜನಾಂಗಕ್ಕೂ ತಲುಪಿಸುವ, ಸರ್ವ ಜನಾಂಗವನ್ನು ಪ್ರೀತಿಸುವ ಗುಣವನ್ನು ಪ್ರಚುರಪಡಿಸುವ ನಿಟ್ಟಿನಲ್ಲಿ ಹಗಲಿರುಳು ಶ್ರಮಿಸಿದ್ದು ಕಾಣುತ್ತೇವೆ.

ಇನ್ನು ಈ ದೇಶದಲ್ಲಿ ಕ್ರೂರ ಅನ್ಯಾಯ ಸೃಷ್ಟಿಸಿದ ಜಾತಿ,ಧರ್ಮ ವ್ಯವಸ್ಥೆ ವಿರುದ್ಧ, ದೇವರು ,ಮೌಢ್ಯ, ಕಂಧಾಚಗಳಿಗೆ ಸೆಡ್ಡುಹೊಡೆದು, "ನೂರು ದೇವರನೆಲ್ಲಾ ನೂಕಾಚೆ ದೂರ" ಎಂದು ಕರೆ ನೀಡಿ, ಅನ್ಯಾಯಕ್ಕೊಳಗಾದ ಜನರನ್ನು "ಗುಡಿ ಚರ್ಚು ಮಸೀದಿಗಳಿಂದ ಹೊರಗಡೆ ಬನ್ನಿ"



ಎಂದು ಸಂದೇಶ ಸಾರಿದ ಮಾಹಾನ ಕವಿ. ಆ ತನ್ಮೂಲಕ ಮಾನವರಿಗೆಲ್ಲಾ ವಿಶ್ವಮಾನವ ತತ್ವವನ್ನು ಸಾರಿ.., ಬಸವಣ್ಣನವರ ಸಮಾನತೆಯ ವಚನ ಸಾಹಿತ್ಯ ಮತ್ತು ಬಾಬಾಸಾಹೇಬರ ಸಂವಿಧಾನದ ಆಶಯವನ್ನು ಸರ್ವರಿಗೂ ತಲುಪುವಂತೆ ಮಾಡಿ, ತಿಳಿಸಿದವರು.

ಅದೇ ರೀತಿ ಸರ್ವರಿಗೂ ಸಮಬಾಳು ಸರ್ವ-ರಿಗೂ ಸಮಪಾಲು ಎಂಬ ಸಮಾನತೆಯ ಬಸವಾದಿ ಶರಣರ ವಾಣಿಯಂತೆ ಝೇಂಕ-ರಿಸಿದ ಕುವೆಂಪುರವರ ಸಾಹಿತ್ಯ ಸೇವೆ ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿ ದಾಖಲಾಗಿದೆ.

ಅಲ್ಲದೆ ಅವರು ಸತ್ಯ, ನ್ಯಾಯ, ನಿ?, ಪ್ರಮಾಣಿಕತೆಗೆ ಹೆಚ್ಚು ಒತ್ತು ಕೊಟ್ಟು ವಾಸ್ತವ ವಿಚಾರಗಳ ನಿಜಾಂಶವನ್ನು ಸಾಹಿತ್ಯದ ಮೂಲಕ ಜನಸಾಮಾನ್ಯಕ್ಕೆ ತಿಳಿಸುವ ಕಾರ್ಯದಲ್ಲಿ ಪ್ರಯತ್ನ ಶೀಲರಾದವರು ಕುವೆಂಪುರವರು.

ಕುವೆಂಪು ರವರು ಬರೆದು ಹಾಡಿದ ಹಾಡು.., "ವಿಚಾರ ಕ್ರಾಂತಿಗೆ ಮುನ್ನುಡಿ ಬರೆದು, ಐತಿಹಾಸಿಕ ಕ್ರಾಂತಿಯ ಕಹಳೆಗೆ ನಾಂದಿ ಹಾಡಿದ್ದು ಯಾರು ಮರೆಯುವಂತಿಲ್ಲ. ಅವುಗಳಿಗೆ ಹೊಸ ರೂಪ ಕೊಟ್ಟು, ವೈಚಾರಿಕ ವಿಚಾರಗಳಿಗೆ ಮುನ್ನುಡಿ ಬರೆದವರು ಕುವೆಂಪುರವರು.

ಹೀಗೆ ಕ್ರಾಂತಿಕಾರಕ ಪುಸ್ತಕಗಳ ಮೂಲಕ ಬಡವರ ನೋವನ್ನು ಧನಿಕ ವರ್ಗಕ್ಕೆ ತಿಳಿಸುವ ಯತ್ನವನ್ನು ಮಾಡಿ, ಬಹುಜನರಿಗೆ ವೈಜ್ಞಾನಿಕ ಬೆಳಕನ್ನು ಚೆಲ್ಲುವ ಮತ್ತು ಸತ್ಯಾಂಶವನ್ನು ತಿಳಿಸಿ ಕಾಯಕ ಮಾಡಿರುತ್ತಾರೆ. ಜೊತೆಗೆ ಜನರಲ್ಲಿ ವಾಸ್ತವ ಚಿತ್ರಣವನ್ನು ಕಟ್ಟಿಕೊಡುವ ಕಾರ್ಯದಲ್ಲಿ ನಿರತರಾಗಿ, ಜಾಗೃತಗೊಳಿಸುವ ಕಾರ್ಯ ಅವರು ಮಾಡಿದ್ದು ಶ್ಲಾಘನೀಯವಾಗಿದೆ.

ಪ್ರಶಸ್ತಿ-ಪುರಸ್ಕಾರ, ಮಾನ-ಸನ್ಮಾನ, ಹೆಸರು-ಕೀರ್ತಿ, ಅಂತ ಕುವೆಂಪು ಅವರು ಎಂದೂ ಕೂಡ ಅವುಗಳ ಹಿಂದೆ ಬಿದ್ದವರಲ್ಲ. ಕೀರ್ತಿ ಶನಿ ತೊಲಗಾಚೆ ಎಂದವರು ಅವರು. ಆದರೆ ಅವುಗಳೇ ಅವರನ್ನು ಬೆನ್ನತ್ತಿ ಬಂದು ಆಲಂಗಿಸಿಕೊಂಡವು. ಹಾಗಾಗಿ ತಮ್ಮ ಸಾಹಿತ್ಯ ಸಾಧನೆಯಿಂದ ಹಲವು ಮೊದಲುಗಳಿಗೆ ಭಾಜನರಾದ ಕುವೆಂಪು ಅವರು ತಮ್ಮ "ಶ್ರೀ ರಾಮಾಯಣ ದರ್ಶನಂ"ಮಹಾಕಾವ್ಯದ ಮೂಲಕ ರಾ?ದ ಪ್ರತಿಷ್ಠಿತ ಪ್ರಶಸ್ತಿಗಳಾದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಜ್ಞಾನಪೀಠ ಪ್ರಶಸ್ತಿ ಸೇರಿದಂತೆ ಹಲವು ಹತ್ತು ಪ್ರಶಸ್ತಿಗಳನ್ನು ಮೊಟ್ಟ ಮೊದಲಿಗೆ ಕನ್ನಡಕ್ಕೆ ತಂದುಕೆಣಟಿಜಜಜಿಟಜಜಟ್ಟ ಕೀರ್ತಿಯೊಡನೆ ಕರ್ನಾಟಕ ಸರಕಾರದ ಪ್ರಮುಖ ನಾಗರಿಕ ಪ್ರಶಸ್ತಿಗಳಾದ ಕರ್ನಾಟಕ ರತ್ನ ಪ್ರಶಸ್ತಿ ಮತ್ತು ಪಂಪ ಪ್ರಶಸ್ತಿ ಪಡೆದ ಮೊದಲಿಗರೆನಿಸಿದ್ದಾರೆ. ಹಾಗೆಯೇ ಪದ್ಮಭೂ?ಣ ಪಡೆದ ಕನ್ನಡದ ಮೊದಲ ಕವಿಯೂ ಸಹ ಹೌದು.ಕುವೆಂಪು ಅವರ ಮತ್ತೊಂದು ವಿಶೇ?ವೆಂದರೆ ಕನ್ನಡಕ್ಕೊಂದು ಓಜಸ್ವಿಯಾದ ಶೈಲಿಯನ್ನು ತಂದುಕೊಟ್ಟದ್ದು. ಹಾಗೆಯೇ ಸಾಹಿತ್ಯದ ಮೂಲಕ ಕನ್ನಡ ಪ್ರಜ್ಞೆ, ವೈಜ್ಞಾನಿಕ ಪ್ರಜ್ಞೆ, ವೈಚಾರಿಕ ಪ್ರಜ್ಞೆ, ಭಾವೈಕ್ಯ ಪ್ರಜ್ಞೆ, ಮನುಜಮತ ಪ್ರಜ್ಞೆ, ವಿಶ್ವಪಥ ಪ್ರಜ್ಞೆ ಒಟ್ಟಾರೆ ವಿಶ್ವಮಾನವ ಪ್ರಜ್ಞೆ ಮೂಡಿಸಿದವರು. ಆದಿಕವಿ ಪಂಪ ನುಡಿದ ಮನು?ಯ ಜಾತಿ ತಾನೊಂದೆ ವಲಂ ಎಂಬುದನ್ನು ತಮ್ಮ ಬದುಕಿನ ಧ್ಯೇಯ ವಾಕ್ಯವನ್ನಾಗಿಸಿಕೊಂಡು ಅದರಂತೆಯೇ ಬರೆದು ಬದುಕಿದವರು. ಗುಡಿ, ಚರ್ಚು, ಮಸೀದಿಗಳನ್ನು ಬಿಟ್ಟು ಹೊರಬನ್ನಿ, ಬಡತನವ ಬುಡಮಟ್ಟ ಕೀಳಬನ್ನಿ, ಮೌಢ್ಯತೆಯ ಮಾರಿಯನು ಹೊರದೂಡ ಮುಂದೆ ಬನ್ನಿ, ವಿಜ್ಞಾನ ದೀವಿಗೆಯ ಹಿಡಿಯಲು ಬೇಗ ಬೇಗ ಮುಂದೆ ಬನ್ನಿ ಎಂದವರು.

ಅವರು ತಮ್ಮ ಜೀವನ ಸಂಧ್ಯಾ ಕಾಲದಲ್ಲಿ ವಿಶ್ವಮಾನವತ್ವಕ್ಕೆ ಮಿಡಿದ ಹೃದಯ ಬಗೆ ಇಡೀ ಮಾನವ ಕುಲಕ್ಕೆ ಆದರ್ಶ ಪ್ರಾಯವಾಗಿದಾರೆ. ಓ ನನ್ನ ಚೇತನ,ಆಗು ನೀ ಅನಿಕೇತನ ಎನ್ನುವ ಅವರ ವಿಚಾರಧಾರೆಯ ನೀತಿಯಂತೆ ರಾ?ಕವಿ ಕುವೆಂಪು ರವರ ವಿಶ್ವಮಾನ್ಯ ಆದರ್ಶ ಚಿಂತನೆಗಳು ಈ ಹೊತ್ತಿನಲ್ಲಿ ಪ್ರಸ್ತುತವಾಗಿವೆ ಎಂದರೆ ತಪ್ಪಾಗಲಾರದು. ಅದಕ್ಕಾಗಿಯೇ ಇಂದಿಗೂ ಅವರ ವಿಚಾರಧಾರೆಗಳು ಜನಮನದಲ್ಲಿ ಸಾಕ್ಷಿಪ್ರಜ್ಞೆಯಾಗಿ ನಿಂತು ಎಚ್ಚ-ರಿಸುತ್ತಿವೆ.

**ಸ್ವಾರ್ಥತೆಯನ್ನು ಬದಿಗೊತ್ತಿ ಬನ್ನಿ:** ನಮ್ಮ ನಮ್ಮ ಸ್ವಾರ್ಥತೆಯನ್ನು ಬದಿಗೊತ್ತಿ ವಿಶ್ವಮಾನವನ ಸಂದೇಶವನ್ನು ತಿಳಿದುಕೊಳ್ಳುವುದು ಅನಿವಾರ್ಯ ಮತ್ತು ಅಗತ್ಯತೆ ಇದೆ. ಅದಕ್ಕಾಗಿ ಸರ್ವರಿಗೂ ಸ್ವಚ್ಛಂದ ವಾತಾವರಣ ನಿರ್ಮಾಣ ಮಾಡಿಕೊಳ್ಳಬೇಕು. ಮಾಡಿಕೊಡುವ ಮೂಲಕ ಕುವೆಂಪು ಅವರ ಆಶಯದಂತೆ ಹೆಜ್ಜೆ ಹಾಕಬೇಕು. ಅದೇ ರೀತಿ ಅವರ ಸಂದೇಶವನ್ನು ಸರ್ವ ಜನಾಂಗಕ್ಕೂ ತಲುಪಿಸುವ ಕೆಲಸ ವ್ಯವಸ್ಥಿತವಾಗಿ ಮಾಡಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಭಾವಿಸಿ ಮುನ್ನಡೆಯಬೇಕಾಗಿದೆ.

ಅವರ ಆದರ್ಶವನ್ನು ಜನಮಾನಸಕ್ಕೆ ಕೊಂಡೊಯ್ಯುವುದು, ಅನ್ಯಾಯವನ್ನು ಬುಡಸಮೇತ ಕಿತ್ತು, ವಿಶ್ವಮಾನವತೆ ಕಡೆಗೆ ಸಾಗುವ ನಿಟ್ಟಿನಲ್ಲಿ ನಾವು ಕುವೆಂಪು ಅವರ ಆಶಯದಂತೆ ಬದುಕುವ ಹಾಗೂ ಸಾಗುವ ಕೆಲಸವನ್ನು ನಿತ್ಯ ನಿರಂತರವಾಗಿ ಮಾಡಬೇಕು. ಅಂದಾಗಲೇ ಮಾತ್ರ ಅವರು ಕಂಡ ನವ ಆದರ್ಶ ಸಮಾಜದ ಕನಸುಗಳನ್ನು ನನಸಾಗಿಸಲು ಸಾಧ್ಯ. ಅದಕ್ಕಾಗಿಯೇ ನಮ್ಮೆಲ್ಲರಲ್ಲಿಯೂ ಇರುವ ಬೇದ ಭಾವಗಳನ್ನು ಕಿತ್ತೊಗೆದು ಒಂದಾಗಿ ಬನ್ನಿ ಎನ್ನುವ ಅವರ ಆಸೆಯಕ್ಕೆ ಆಸೆರೆಯಾಗುವ ಕೆಲಸ ಮಾಡಬೇಕಾಗಿರುವುದು ಇಂದಿನ ಪ್ರಜ್ಞಾವಂತ ನಾಗರಿಕರ ಕಾಯಕವಾಗಿದೆ.

**ಹಲವು ಕೃತಿಗಳು ನಾಡಿಗೆ ಧಾರೆ ಎರೆದವರು:** ಐತಿಹಾಸಿಕ - ಶ್ಲಾಘನೀಯ ಸಾಹಿತ್ಯ ಸೇವೆಯನ್ನು ರಚಿಸುವ ಮೂಲಕ ಹಲವು ಕೃತಿಗಳನ್ನು ನಾಡಿಗೆ ಧಾರೆ ಎರೆದಿದ್ದಾರೆ. ಅವರ ಪ್ರಮುಖ ಕೃತಿಗಳು ಹೀಗಿವೆ -

ಕಥನ ಕವನಗಳು, ಕಲಾ ಸುಂದರಿ, ನವಿಲು, ಪಕ್ಷಿಕಾಶಿ, ಶ್ರೀರಾಮಾಯಣ ದರ್ಶನಂ ಮಹಾಕಾವ್ಯವೂ ಸೇರಿ 30ಕ್ಕೂ ಹೆಚ್ಚು ಕಾವ್ಯ ಕೃತಿಗಳು. ಜಲಗಾರ, ಯಮನಸೋಲು, ಬೊಮ್ಮನಹಳ್ಳಿ ಕಿಂದರಿ ಜೋಗಿ, ವಾಲ್ಮೀಕಿ ಭಾಗ್ಯ ಸ್ಮಶಾನ ಕುರುಕ್ಷೇತ್ರ, ಮಹಾರಾತ್ರಿ, ರಕ್ತಾಕ್ಷಿ, ಬಿರುಗಾಳಿ, ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿ, ಇತರೆ ನಾಟಕಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗಳು, ವಿಮರ್ಶೆ, ಕಾವ್ಯ ಮೀಮಾಂಸೆ-ಕಾವ್ಯ ,ಶಿಸುಸಾಹಿತ್ಯ ಸೇರಿದಂತೆ ಹಲವಾರು ಕೃತಿಗಳು ಸಾಹಿತ್ಯ ಲೋಕಕ್ಕೆ ನೀಡಿರುತ್ತಾರೆ. ಅವರ ಬದುಕಿನ ಕಟ್ಟಕಡೆಯ ಸಂದೇಶ ವಿಶ್ವಮಾನವ ಸಂದೇಶ ಎನ್ನುತ್ತಲೇ 1994 ರ ನವೆಂಬರ್ 11 ರಂದು ಸೃಷ್ಟಿಕರ್ತನ ಮಡಿಲಲ್ಲಿ ಲೀನರಾದ ಕುವೆಂಪುರವರು, ಮಹಾ ಮಾನವತಾವಾದಿಯಾಗಿ ಬದುಕಿದವರು. ಅಂತೆಯೇ ಕನ್ನಡ ಸಾಹಿತ್ಯ ಮತ್ತು ಭಾರತೀಯ ಸಾಹಿತ್ಯಕ್ಕ?ೀ ಅಲ್ಲದೇ ವಿಶ್ವ ಸಾಹಿತ್ಯಕ್ಕೆ ವಿಚಾರ ಕ್ರಾಂತಿಯ ಮಹಾಬೆಳಕು ನೀಡಿದ ಯುಗ ಪುರು?ರಾಗಿ ಬೆಳಗುತ್ತಿದ್ದಾರೆ.

ಜಗದ ಕವಿಗೆ ಭಕ್ತಿಯ ನಮನಗಳು : ಜಯ ಭಾರತ ಜನನಿಯ ತನುಜಾತೆ, ಎಲ್ಲಾದರು ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು, ಓ ನನ್ನ ಚೇತನ ಆಗುವ ನೀ ಅನಿಕೇತನ ಎನ್ನುವಂತೆ ಅವರ ವಿಚಾರಧಾರೆಗಳ ಆಶಯದಂತೆ ಬಾಳಿದವರು ಜಗದ ಕವಿ, ರಾ?ಕವಿ ಕುವೆಂಪುರವರು. ಅವರ ಹಲವಾರು ಕವನಗಳು ಕನ್ನಡಿಗರ ಮನದಾಳದಲ್ಲಿ ಇಂದಿಗೂ - ಎಂದೆಂದಿಗೂ ಹಾಸುಹೊಕ್ಕಾಗಿವೆ ಎಂಬುದಂತೂ ಸತ್ಯ. ವಿಶ್ವಕ್ಕೇ ಮಾನವೀಯತೆಯ ಸಂದೇಶಗಳನ್ನು ಸಾರಿದ ಮಾಹಾನ ಕವಿಯ, ಕವಿವಾಣಿಯ, ಕ್ರಾಂತಿಕಾರಕ ಕವಿತೆಗಳನ್ನು ಓದೋಣ, ಕೇಳೋಣ, ಅವರ ವಿಚಾರಗಳನ್ನು ಕುರಿತು ಚರ್ಚಿಸೋಣ - ಅರಿಯೋಣ. ನಿಜಪ್ರಜ್ಞೆಯನ್ನು ಜಾಗೃತಗೊಳಿಸೋಣ, ವಿಶ್ವಮಾನವನ ಮಾನವೀಯತೆಯ ಮೌಲ್ಯಾಧಾರಿತ ಸಂದೇಶಗಳ ತತ್ವಗಳನ್ನು ಅನುಸರಿಸಿ, ಜಾಗತಿಕ ಪ್ರಪಂಚಕ್ಕೆ ಮಾದರಿಯಾಗುವ ಕೆಲಸ ಮಾಡೋಣ. ಈ ಸಂದರ್ಭದಲ್ಲಿ ಜಗದ ಕವಿಗೆ ಭಕ್ತಿಯ ನಮನಗಳು.

**ಲೇಖಕರು: ಸಂಗಮೇಶ ಎನ್ ಜವಾದಿ**
**ಸಾಹಿತಿ, ಪತ್ರಕರ್ತ,**
**ಹೋರಾಟಗಾರರು ,ಬೀದರ ಜಿಲ್ಲೆ.**

# ಹಾಲಿಗೆ ಒಂದು ಚಮಚ ಇದನ್ನು ಮಿಕ್ಸ್ ಮಾಡಿ ಕುಡಿದ್ರೆ ತೂಕನೂ ಇಳಿಯುತ್ತೆ, ಸ್ಕಿನ್ ಕಾಂತಿಯುತವಾಗುತ್ತೆ





ಹಾಲನ್ನು ಸಂಪೂರ್ಣ ಆಹಾರವೆಂದು ಪರಿಗಣಿಸಲಾಗುತ್ತದೆ. ಇದರೊಂದಿಗೆ ಅನೇಕ ಆರೋಗ್ಯ ಸಂಬಂಧಿತ ಸಮಸ್ಯೆಗಳನ್ನು ಅವುಗಳ ಮೂಲದಿಂದ ತೆಗೆದುಹಾಕಲಾಗುತ್ತದೆ. ಹಾಲಿಗೆ ಜೇನುತುಪ್ಪ ಬೆರೆಸಿ ಕುಡಿಯುವುದರಿಂದ ಆಗುವ ಲಾಭಗಳೇನು ಎಂದು ತಿಳಿಯೋಣ.

ಹಾಲು ಒಂದು ಆರೋಗ್ಯಕರ ಪೌಷ್ಟಿಕಾಂಶದ ಭರಿತ ಪಾನೀಯವಾಗಿದೆ. ಮಕ್ಕಳಿಂದ ಹಿಡಿದು ವೃದ್ಧರವರೆಗೂ ಹಾಲು ಅಗತ್ಯ. ಕೆಲವರು ಹಾಲನ್ನು ಸಪ್ಪೆಯಾಗಿಯೇ ಕುಡಿಯಲು ಇಷ್ಟಪಟ್ಟರೆ ಇನ್ನೂ ಕೆಲವರು ಅದಕ್ಕೆ ಸಕ್ಕರೆ ಹಾಕಿ ಕುಡಿಯಲು ಇಷ್ಟಪಡುತ್ತಾರೆ. ಸಕ್ಕರೆಯ ಬದಲಿಗೆ ಹಾಲಿಗೆ ಜೇನುತುಪ್ಪವನ್ನು ಸೇರಿಸಿ ಕುಡಿಯೋದ್ರಿಂದ ಆರೋಗ್ಯಕ್ಕೆ ಒಳ್ಳೆಯದು. ಇದ್ರಿಂದ ಸಾಕಷ್ಟು ಪ್ರಯೋಜನಗಳಿವೆ. ಅವುಗಳ ಬಗ್ಗೆ ನಾವಿಲ್ಲಿ ತಿಳಿಯೋಣ.

**ರೋಗನಿರೋಧಕ ಶಕ್ತಿ ಬಲವಾಗಿರುತ್ತದೆ**

ನಾವು ಆರೋಗ್ಯದಿಂದಿರಬೇಕಾದರೆ ನಮ್ಮ ದೇಹದಲ್ಲಿ ರೋಗನಿರೋಧಕ ಶಕ್ತಿ ಉತ್ತಮವಾಗಿರಬೇಕು. ಹಾಲು ಮತ್ತು ಜೇನುತುಪ್ಪ ಬೆರೆಸಿ ಕುಡಿದರೆ ದೇಹದ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ಹಾಲಿನಲ್ಲಿ ಕಂಡುಬರುವ ಪ್ರೋಟೀನ್-ಕ್ಯಾಲ್ಸಿಯಂ ಮತ್ತು ಜೇನುತುಪ್ಪದ ಆಂಟಿಆಕ್ಸಿಡೆಂಟ್ ಗುಣಗಳು ನಿಮ್ಮನ್ನು ಅನೇಕ ರೋಗಗಳಿಂದ ರಕ್ಷಿಸುತ್ತದೆ.

**ತೂಕವನ್ನು ಕಳೆದುಕೊಳ್ಳಲು ಸಹಕಾರಿ**

ಬೊಜ್ಜು ಇಂದಿನ ದಿನಗಳಲ್ಲಿ ದೊಡ್ಡ ಸಮಸ್ಯೆಯಾಗುತ್ತಿದೆ. ಜನರು ಅದನ್ನು ಕಡಿಮೆ ಮಾಡಲು ನಾನಾ ರೀತಿಯಲ್ಲಿ ಪ್ರಯತ್ನಿಸುತ್ತಾರೆ. ಎಷ್ಟೇ ಡಯೆಟ್ ಫಾಲೋ ಮಾಡಿದ್ರೂ ತೂಕ ಇಳಿಯೋದಿಲ್ಲ. ್ರತಿದಿನ ಜೇನುತುಪ್ಪ ಬೆರೆಸಿ ಹಾಲು ಕುಡಿದರೆ ನಿಮ್ಮ ಅಧಿಕ ತೂಕದ ಸಮಸ್ಯೆ ಕೆಲವೇ ದಿನಗಳಲ್ಲಿ ದೂರವಾಗುತ್ತದೆ. ಹಾಲು ಮತ್ತು ಜೇನುತುಪ್ಪವನ್ನು ಮಿಶ್ರಣ ಮಾಡಿಯೋದು ತೂಕ ಇಳಿಸಲು ಸಹಕಾರಿಯಾಗಿದೆ. ಜೇನುತುಪ್ಪದಲ್ಲಿರುವ ಉತ್ಕರ್ಷಣ ನಿರೋಧಕ ಗುಣಲಕ್ಷಣಗಳು ದೇಹದ ತೂಕವನ್ನು ನಿಯಂತ್ರಿಸುತ್ತದೆ ಮತ್ತು ಸ್ಥೂಲಕಾಯತೆಯನ್ನು ನಿವಾರಿಸುತ್ತದೆ.

**ಒತ್ತಡದಲ್ಲಿ ಹಾಲು-ಜೇನು ಸಂಯೋಜನೆ ಬೆಸ್ಟ್**

ಇತ್ತೀಚಿನ ದಿನಗಳಲ್ಲಿ ಜೀವನಶೈಲಿಯು ಅನೇಕ ರೀತಿಯ ಒತ್ತಡ ಉಂಟುಮಾಡುತ್ತದೆ. ನೀವು ಒತ್ತಡದಲ್ಲಿದ್ದರೆ ಹಾಲು ಮತ್ತು ಜೇನುತುಪ್ಪವು ನಿಮಗೆ ರಾಮಬಾಣವಾಗಿದೆ. ಈ ಎರಡನ್ನೂ ಬೆರೆಸಿ ಕುಡಿಯುವುದರಿಂದ ಒತ್ತಡವನ್ನು ನಿಯಂತ್ರಿಸುತ್ತದೆ ಮತ್ತು ಮನಸ್ಸನ್ನು ಶಾಂತವಾಗಿರಿಸುತ್ತದೆ. ಸಂಶೋಧನೆಯ ಪ್ರಕಾರ, ಹಾಲು ಮೂಳೆಗಳನ್ನು ಬಲಪಡಿಸುತ್ತದೆ ಮತ್ತು ಜೇನುತುಪ್ಪವು ನರಗಳಿಗೆ ಪ್ರಯೋಜನಕಾರಿಯಾಗಿದೆ. ಇವೆರಡರ ಸಂಂ-ಯೋಜನೆಯು ನಿಮ್ಮ ಒತ್ತಡವನ್ನು ದೂರ ಮಾಡುತ್ತದೆ.

**ಉಸಿರಾಟದ ಸಮಸ್ಯೆಗಳಿಂದ ಪರಿಹಾರ**


ನಿಮಗೆ ಯಾವುದೇ ಉಸಿರಾಟದ ಸಮಸ್ಯೆ ಇದ್ದರೆ ಹಾಲು ಮತ್ತು ಜೇನುತುಪ್ಪದ ಮಿಶ್ರಣವು ನಿಮಗೆ ಪ್ರಯೋಜನಕಾರಿಯಾಗಿದೆ.

ಇದನ್ನು ಕುಡಿಯುವುದರಿಂದ ಉಸಿರಾಟದ ತೊಂದರೆಗಳು ಬರುವುದಿಲ್ಲ. ಉಸಿರಾಟದ ಸಮಸ್ಯೆ ಇದ್ದಲ್ಲಿ ಹಾಲು ಮತ್ತು ಜೇನುತುಪ್ಪ ಬೆರೆಸಿ ಔಷಧ ಸೇವಿಸಿ ಎಂದು ಆರೋಗ್ಯ ತಜ್ಞರು ಸಲಹೆ ನೀಡುತ್ತಾರೆ.

**ಚರ್ಮ ಕಾಂತಿಯುತವಾಗುತ್ತದೆ**

ನಿಮ್ಮ ಚರ್ಮವು ಕಾಂತೀಹೀನವಾಗಿದ್ದರೆ, ಹೊಳಪನ್ನು ಕಳೆದುಕೊಂಡಿದ್ದರೆ, ನೀವು ಹಾಲಿಗೆ ಜೇನುತುಪ್ಪ ಬೆರೆಸಿ ಕುಡಿಯಬೇಕು.

ಇದು ನಿಮ್ಮ ಮುಖದ ಕಾಂತಿಯನ್ನು ವರ್ಧಿಸುತ್ತದೆ ಮತ್ತು ನೈಸರ್ಗಿಕ ಹೊಳಪನ್ನು ನೀಡುತ್ತದೆ. ಹಾಗಾಗಿ ಪ್ರತಿದಿನ ಇದನ್ನು ಕುಡಿಯಿರಿ.




# ದಿನಾ ಮೇಕಪ್ ಹಚ್ಚೋರಿಗಾಗಿ ಇದು: ಎಷ್ಟು ಗಂಟೆಗಳ ಕಾಲ ಮಾತ್ರ ಮೇಕಪ್ ಮುಖದ ಮೇಲಿರಬೇಕು ಗೊತ್ತಾ?

ಇತ್ತೀಚಿನ ದಿನಗಳಲ್ಲಿ ಹುಡುಗೀರು ಮೇಕಪ್ ಇಲ್ಲದೆ ಮನೆಯಿಂದ ಹೊರಗೆ ಬರೋದಿಲ್ಲ ಎನ್ನುವಂತಾಗಿದೆ. ಪ್ರತಿದಿನ ಮೇಕಪ್ ಹಚ್ಚಿಕೊಳ್ಳುವುದು ಒಂದು ಅಭ್ಯಾಸವಾಗಿಬಿಟ್ಟಿದೆ. ಆದ-'ರೆ ಇದು ಚರ್ಮದ ಮೇಲೆ ಎಷ್ಟರ ಮಟ್ಟಿಗೆ ಸೇಫ್ ಎನ್ನುವುದನ್ನು ತಿಳಿಯುವುದು ಮುಖ್ಯ.

ಇಂದಿನ ಕಾಲದಲ್ಲಿ ಪ್ರತಿಯೊಬ್ಬ ಮಹಿಳೆಯರೂ ಮೇಕ್‌ಅಪ್ ಧ-ರಿಸುತ್ತಾರೆ. ಇತ್ತೀಚೆಗೆ ಪುರುಷರೂ ಕೂಡಾ ಲೈಟ್ ಆಗಿ ಮೇಕಪ್ ಮಾಡಿಕೊಳ್ಳಲಾರಂಭಿಸಿದ್ದಾರೆ. ಮೇಕಪ್ ನಮ್ಮ ಜೀವನದ ಒಂದು ಭಾಗವಾಗಿದೆ.





ವಿಶೇಷ ಸಂದರ್ಭವಾಗಳಲ್ಲಿ ಮಾತ್ರವಲ್ಲ, ಕಾಲೇಜು ಹೋಗುವಾಗ, ಆಫೀಸ್‌ಗೆ ಹೋಗುವಾಗಲೂ ನಮ್ಮ ದೈನಂದಿನ ಜೀವನದಲ್ಲಿ ಮೇಕಪ್ ಹಾಕಿಕೊಳ್ಳುತ್ತೇವೆ. ಇದು ನಮ್ಮ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.ಆದ-'ರೆ ಮೇಕಪ್ ನಮ್ಮ ಚರ್ಮಕ್ಕೆ ಎಷ್ಟು ಸುರಕ್ಷಿತ ಹಾಗೂ ಎಷ್ಟು ಗಂಟೆಗಳ ಕಾಲ ಮಾತ್ರ ಧರಿಸಬೇಕೆಂಬುವುದು ಹೆಚ್ಚಿನವರಿಗೆ ತಿಳಿದಿಲ್ಲ.

**ದೀರ್ಘಕಾಲದವರೆಗೆ ಮೇಕ್‌ಅಪ್ ಧರಿಸುವುದರಿಂದ ಏನಾಗುತ್ತದೆ?**

ಮೇಕಪ್ ಉತ್ಪನ್ನಗಳು ಅನೇಕ ರೀತಿಯ ರಾಸಾಯನಿಕಗಳನ್ನು ಒಳಗೊಂಡಿರುತ್ತವೆ. ಇದು ನಮ್ಮ ಚರ್ಮದ ರಂಧ್ರಗಳನ್ನು ಮುಚ್ಚುತ್ತದೆ ಮತ್ತು ಚರ್ಮವು ಉಸಿರಾಡುವುದನ್ನು ತಡೆಯುತ್ತದೆ. ದೀರ್ಘಕಾಲದವರೆಗೆ ಮೇಕ್‌ಅಪ್ ಧರಿಸುವುದರಿಂದ ಮೊಡವೆ, ಬ್ಲ್ಯಾಕ್ ಹೆಡ್ಸ್, ವೈಟ್ ಹೆಡ್ಸ್, ಚರ್ಮದ ಶುಷ್ಕತೆ ಮತ್ತು ಅಕಾಲಿಕ ವಯಸ್ಸಾದಂತಹ ಅನೇಕ ಚರ್ಮದ ಸಮಸ್ಯೆಗಳು ಉಂಟಾಗಬಹುದು. ಸಾಮಾನ್ಯವಾಗಿ, 8 ರಿಂದ 12 ಗಂಟೆಗಳ ಕಾಲ ಮೇಕ್‌ಅಪ್ ಇರಿಸಿಕೊಳ್ಳಲು ಸುರಕ್ಷಿತವೆಂದು ಪರಿಗಣಿಸಲಾಗುತ್ತದೆ. ಇದಕ್ಕಿಂತ ಹೆಚ್ಚು ಕಾಲ ಮೇಕಪ್ ಹಾಕಿಕೊಂಡರೆ ಚರ್ಮಕ್ಕೆ ಹಾನಿಯಾಗುತ್ತದೆ.

**ಮೇಕ್‌ಅಪ್ ಅನ್ನು 8 ರಿಂದ 12 ಗಂಟೆಗಳಿಗಿಂತ ಹೆಚ್ಚು ಏಕೆ ಧ-ರಿಸಬಾರದು?**

ಚರ್ಮದ ರಂಧ್ರಗಳು ಮುಚ್ಚಿಹೋಗುತ್ತವೆ: ದೀರ್ಘಕಾಲದವರೆಗೆ ಮೇಕ್‌ಅಪ್ ಧ-ರಿಸುವುದರಿಂದ ಚರ್ಮದ ರಂಧ್ರಗಳು ಮುಚ್ಚಿಹೋಗುತ್ತವೆ, ಇದರಿಂದಾಗಿ ಕೊಳಕು ಮತ್ತು ಬ್ಯಾಕ್ಟೀರಿಯಾಗಳು ಚರ್ಮದೊಳಗೆ ಸಿಲುಕಿಕೊಳ್ಳುತ್ತವೆ ಮತ್ತು ಮೊಡವೆಗಳ ಅಪಾಯವನ್ನು ಹೆಚ್ಚಿಸುತ್ತವೆ.

ಚರ್ಮದ ಶುಷ್ಕತೆ: ಮೇಕಪ್ ಉತ್ಪನ್ನಗಳಲ್ಲಿರುವ ರಾಸಾಯನಿಕಗಳು ಚರ್ಮವನ್ನು ಶುಷ್ಕ ಮತ್ತು ನಿರ್ಜೀವಗೊಳಿಸುತ್ತದೆ.

ಅಕಾಲಿಕ ವಯಸ್ಸಾಯುವಿಕೆ: ದೀರ್ಘಕಾಲದವರೆಗೆ ಮೇಕ್‌ಅಪ್ ಧ-ರಿಸುವುದರಿಂದ ಚರ್ಮದ ಕೋಶಗಳಿಗೆ ಹಾನಿಯಾಗುತ್ತದೆ, ವಯಸ್ಸಾಗುವಿಕೆಗೆ ಸಂಬಂಧಿತ ಸಮಸ್ಯೆಗಳಾದ ಸುಕ್ಕುಗಳು ಮತ್ತು ಸೂಕ್ಷ್ಮ ರೇಖೆಗಳು ತ್ವರಿತವಾಗಿ ಕಾಣಿಸಿಕೊಳ್ಳುತ್ತವೆ.

ಚರ್ಮದ ಕಿರಿಕಿರಿ: ಕೆಲವು ಜನರ ಚರ್ಮವು ಮೇಕಪ್ ಉತ್ಪನ್ನಗಳಿಗೆ ಅಲರ್ಜಿಯನ್ನು ಹೊಂದಿರಬಹುದು, ಇದು ಚರ್ಮದ ಕಿರಿಕಿರಿ, ಕೆಂಪು ಮತ್ತು ತುರಿಕೆಗೆ ಕಾರಣವಾಗಬಹುದು.

**ನೀರಿನಿಂದ ಮುಖ ತೊಳೆದರೆ ಸಾಕಾಗುವುದಿಲ್ಲ**

ಕೇವಲ ನೀರಿನಿಂದ ಮುಖ ತೊಳೆದರೆ ಮೇಕಪ್ ಹೋಗುವುದಿಲ್ಲ. ಮೇಕ್‌ಅಪ್ ಅನ್ನು ಬಾಳಿಕೆ ಬರುವಂತೆ ಮಾಡಲು ಅವುಗಳನ್ನು ನೀರು ಮತ್ತು ಬೆವರು ಪ್ರೂಫ್ ಮಾಡಲಾಗುತ್ತದೆ. ಇದರಿಂದಾಗಿ ಅನೇಕ ಬಾರಿ ಮುಖವನ್ನು ತೊಳೆಯುವ ಮೂಲಕ ಸಂಪೂರ್ಣವಾಗಿ ಮೇಕಪ್‌ನ್ನು ಸ್ವಚ್ಛಗೊಳಿಸಲಾಗುವುದಿಲ್ಲ. ಮೇಕಪ್ ಮುಖದಲ್ಲಿನ ರಂಧ್ರಗಳಲ್ಲಿ ಸಂಗ್ರಹವಾಗುತ್ತದೆ, ಇದು ಚರ್ಮಕ್ಕೆ ಹಾನಿ ಮಾಡುತ್ತದೆ. ಆದ್ದರಿಂದ, ಮೇಕ್‌ಅಪ್ ಅನ್ನು ಸರಿಯಾಗಿ ತೆಗೆದುಹಾಕುವುದು ಮುಖ್ಯವಾಗಿದೆ.

**ಮೇಕ್‌ಅಪ್ ತೆಗೆಯಲು ಏನು ಮಾಡಬೇಕು?**

ಮೇಕಪ್ ರಿಮೂವರ್ ಬಳಸಿ: ಮೇಕಪ್ ತೆಗೆಯಲು ಯಾವಾಗಲೂ ಮೇಕಪ್ ರಿಮೂವರ್ ಬಳಸಿ. ಮೇಕಪ್ ರಿಮೂವರ್ ನಿಮ್ಮ ಚರ್ಮದ ಪ್ರಕಾರಕ್ಕೆ ಅನುಗುಣವಾಗಿರಬೇಕು.

ಫೇಸ್ ವಾಶ್: ಮೇಕಪ್ ರಿಮೂವರ್ ನಂತರ, ಫೇಸ್ ವಾಶ್ ನಿಂದ ಮುಖವನ್ನು ಚೆನ್ನಾಗಿ ತೊಳೆಯಿರಿ. ನಿಮ್ಮ ತ್ವಚೆಗೆ ಅನುಗುಣವಾಗಿ ಫೇಸ್ ವಾಶ್ ಕೂಡ ಇರಬೇಕು.?

ಮಾಯಿಶ್ಚರೈಸರ್ : ಮೇಕ್‌ಅಪ್ ತೆಗೆದ ನಂತರ ಚರ್ಮವನ್ನು ತೇವಗೊಳಿಸುವುದನ್ನು ಮರೆಯಬೇಡಿ.

**ಈ ಸಲಹೆಗಳು ಸಹ ಸಹಾಯಕವಾಗಿವೆ**

ಕಡಿಮೆ ಮೇಕ್‌ಅಪ್: ಸಾಧ್ಯವಾದಷ್ಟು ಕಡಿಮೆ ಅಥವಾ ಲೈಟ್ ಮೇಕಪ್ ಬಳಸಿ.

ನಾನ್-ಕಾಮೆಡೋಜೆನಿಕ್ ಉತ್ಪನ್ನಗಳು: ಕಾಮೆಡೋಜೆನಿಕ್ ಅಲ್ಲದ ಮೇಕಪ್ ಉತ್ಪನ್ನಗಳನ್ನು ಬಳಸಿ, ಅದು ನಿಮ್ಮ ಚರ್ಮದ ರಂಧ್ರಗಳನ್ನು ಮುಚ್ಚುವುದಿಲ್ಲ.?

ನೀರು ಕುಡಿಯಿರಿ: ಸಾಕಷ್ಟು ನೀರು ಕುಡಿಯಿರಿ, ಇದರಿಂದ ನಿಮ್ಮ ಚರ್ಮವು ಹೈಡ್ರೀಕರಿಸಲ್ಪಡುತ್ತದೆ.

ಆರೋಗ್ಯಕರ ಆಹಾರ: ಆರೋಗ್ಯಕರ ಆಹಾರವನ್ನು ತೆಗೆದುಕೊಳ್ಳಿ, ಇದ-ರಿಂದ ನಿಮ್ಮ ಚರ್ಮವು ಒಳಗಿನಿಂದ ಆರೋಗ್ಯಕರವಾಗಿರುತ್ತದೆ.

ಒತ್ತಡವನ್ನು ಕಡಿಮೆ ಮಾಡಿ: ಒತ್ತಡವು ಚರ್ಮವನ್ನು ಹಾನಿಗೊಳಿಸುತ್ತದೆ, ಆದ್ದರಿಂದ ಒತ್ತಡವನ್ನು ಕಡಿಮೆ ಮಾಡಲು ಯೋಗ ಅಥವಾ ಧ್ಯಾನ ಮಾಡಿ.





# ಚಳಿಗಾಲದಲ್ಲಿ ಈ 5 ಹಣ್ಣುಗಳನ್ನು ಸೇವಿಸೋದ್ರಿಂದ ತ್ವಚೆಯು ಕಾಂತಿಯುತವಾಗಿ ಹೊಳೆಯುತ್ತಂತೆ!

ಚಳಿಗಾಲದಲ್ಲಿ ತ್ವಚೆಯು ಸಾಮಾನ್ಯವಾಗಿ ಒಣಗುವಂತಾಗುವುದು , ಕಾಂತಿಯನ್ನು ಕಳೆದುಕೊಳ್ಳುವುದು ಇತ್ಯಾದಿ ಸಮಸ್ಯೆಗಳಾಗುತ್ತದೆ. ಇದಕ್ಕಾಗಿ ಸಾಕಷ್ಟು ತ್ವಚೆಯ ತೇವಾಂಶವನ್ನು ಕಾಪಾಡುವ ಅವಶ್ಯಕತೆ ಇದೆ ಇದಕ್ಕಾಗಿ ಹಲವಾರು ಮಾಯಿಶ್ಚರೈಸರ್ ಗಳು, ಫೇಸ್ ಪ್ಯಾಕ್ ಇತ್ಯಾದಿಗಳನ್ನು ಬಳಸಿದರೂ ಸಹ ಇದು ಮೇಲ್ಮೈಯನ್ನು ತಕ್ಷಣಕ್ಕೆ ಸರಿಪಡಿಸಬಹುದು ಆದರೆ ನಮ್ಮ ತ್ವಚೆಯನ್ನು ಒಳಗಿನಿಂದ ಆರೋಗ್ಯಕರವಾಗಿರಿಸಲು ನಮ್ಮ ಆಹಾರಕ್ರಮಗಳ ಬಗ್ಗೆ ಗಮನಹ-ರಿಸಬೇಕಾಗುತ್ತದೆ ಅವುಗಳಲ್ಲಿ ಹಣ್ಣುಗಳೂ ಒಂದು. ಚಳಿಗಾಲದಲ್ಲಿ ಯಾವ ಹಣ್ಣುಗಳ ಸೇವನೆಯು ತ್ವಚೆಯ ಆರೋಗ್ಯವನ್ನು ಕಾಪಾಡಲು ಉತ್ತಮ ನೋಡೋಣ.

ಚಳಿಗಾಲ ಬಂತೆಂದರೆ ಸಾಕು ಆರೋಗ್ಯದಲ್ಲಿ ನಾನಾ ಬದಲಾವಣೆಗಳಾಗುವಂತೆ ನಮ್ಮ ತ್ವಚೆಯಲ್ಲಿಯೂ ಬದಲಾವಣೆಗಳಾಗುವುದು ಸಾಮಾನ್ಯ. ಚಳಿಗಾಳಿಯು ತ್ವಚೆಯನ್ನು ಒಣಗಿಸುತ್ತವೆ ಮತ್ತು ತ್ವಚೆಯ ಹೊಳಪನ್ನು ಹೋಗಲಾಡಿಸುತ್ತವೆ. ಇದಕ್ಕಾಗಿ ತ್ವಚೆಯ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಚಳಿಗಾಲದಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಇದಕ್ಕಾಗಿ ನೀವು ನಾನಾ ಬಗೆಯ ಕ್ರೀಮ್ ಗಳು, ಮಾಯಿಶ್ಚರೈಸರ್ ಗಳು ಇತ್ಯಾದಿಗಳಿಗೆ ಮೊರೆ ಹೋಗಬಹುದು ಮತ್ತು ಚರ್ಮವನ್ನು ಹೊಳೆಯುವಂತೆ ಮಾಡಲು ನಾನಾ ಬಗೆಯ ಫೇಸ್ ಪ್ಯಾಕ್ ಗಳು ಇತ್ಯಾದಿ ಸೌಂದರ್ಯವರ್ಧಕಗಳನ್ನು ಉಪಯೋಗಿಸಬಹುದು.

ಆದರೆ ಇವುಗಳು ತಾತ್ಕಾಲಿಕವಾಗಿ ನಿಮ್ಮ ತ್ವಚೆಯನ್ನು ಹೊಳೆಯುವಂತೆ ಮಾಡಬಹುದು ನಿಮ್ಮ ಚರ್ಮವು ದೀರ್ಘಕಾಲದವರೆಗೆ ಕಾಂತಿಯುತವಾಗಿ ಮತ್ತು ಆರೋಗ್ಯಕರವಾಗಿರ ಬೇಕಾದಲ್ಲಿ ನೀವು ನಿಮ್ಮ ಆಹಾರಕ್ರಮಗಳಲ್ಲಿಯೂ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಪೌಷ್ಟಿಕಾಂಶವಿರುವ ಆಹಾರಗಳ ಜೊತೆಗೆ ವಿಟಮಿನ್ , ಉತ್ಕರ್ಷಣ ನಿರೋಧಕ ಮತ್ತು ದೇಹದಲ್ಲಿ ತೇವಾಂಶವನ್ನು ಕಾಪಾಡುವಂತಹ ಹಣ್ಣುಗಳ ಸೇವನೆಯೂ ಮಾಡಬೇಕಾಗುತ್ತದೆ. ಚಳಿಗಾಲದಲ್ಲಿ ಸಿಗುವ ಈ ಹಣ್ಣುಗಳ ಸೇವನೆಯಿಂದ ನಿಮ್ಮ ಚರ್ಮವನ್ನು ಹೇಗೆ ಕಾಂತಿಯುತವಾಗಿ ಇರಿಸಿಕೊಳ್ಳಬಹುದು ಮತ್ತು ಇವು ತ್ವಚೆಯ ಆರೋಗ್ಯವನ್ನು ಹೇಗೆ ಕಾಪಾಡುತ್ತವೆ ನೋಡೋಣ.

**ಸೇಬಿನ ಹಣ್ಣು**

ಸೇಬು ಹಣ್ಣಿನಲ್ಲಿ ಆಹಾರದ ಫೈಬರ್ ವಿಟಮಿನ್ ಸಿ ಮತ್ತು ಉತ್ಕರ್ಷಣ ನಿರೋಧಕಗಳು ಸಮೃದ್ಧವಾಗಿವೆ. ಇದು ಚರ್ಮದ ಆರೋಗ್ಯವನ್ನು ಬೆಂಬಲಿಸುವಲ್ಲಿ ಸಹಾಯ ಮಾಡುತ್ತದೆ.

ಚಳಿಗಾಲದಲ್ಲಿ ಚರ್ಮದಲ್ಲಿ ಉಂಟಾಗುವ ಶುಷ್ಕತೆಯನ್ನು ಹೋಗಲಾ ಡಿಸುತ್ತಾ ನಿಮ್ಮ ಚರ್ಮವನ್ನು ತೇವಾಂಶದಿಂದ ಇಡಲು ಅವು ಸಹಾಯ ಮಾಡುತ್ತವೆ. ಮತ್ತು ಅವುಗಳ ನೈಸರ್ಗಿಕ ಆಮ್ಲಗಳು ಚರ್ಮದ ಸತ್ತ ಜೀವಕೋಶಗಳನ್ನು ತೆಗೆದು ಹಾಕುತ್ತಾ ಚರ್ಮದ ರಂಧ್ರಗಳನ್ನು ಸ್ವಚ ಮಾಡುತ್ತವೆ ಮತ್ತು ಆರೋಗ್ಯಕರ ಮೈಬಣ್ಣ ವನ್ನು ಉತ್ತೇಜಿಸುವಲ್ಲಿ ಸಹಾಯ ಮಾಡುತ್ತದೆ. ಆದ್ದರಿಂದ ಸೇಬಿನ ನಿಯಮಿತ ಸೇವನೆಯಿಂದ ನಿಮ್ಮ ಚರ್ಮದ ವಿನ್ಯಾಸವನ್ನು ಸುಧಾ-ರಿಸಬಹುದಾಗಿದೆ.

**ಕಿತಳೆ ಹಣು**



ಕಿತ್ತಳೆ ಹಣ್ಣಿನಲ್ಲಿ ವಿಟಮಿನ್ ಸಿ ಸಮೃದ್ಧವಾಗಿದ್ದು, ಇದು ಉತ್ಕರ್ಷಣ ನಿರೋಧಕವಾಗಿದೆ ಮತ್ತು ಕಾಲಜನ್ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಸಹಾಯ ಮಾಡುತ್ತದೆ ಇದರಿಂದಾಗಿ ಚರ್ಮದಲ್ಲಿ ಉಂಟಾಗುವ ಸುಕ್ಕುಗಳು ಮತ್ತು ಕಾಂತಿ-ರಹಿತವಾಗುವುದನ್ನು ತಡೆಯುತ್ತದೆ. ವಿಟಮಿನ್ ಸಿ ಚರ್ಮದ ಹೊಳಪಿಗೆ ಕಾರಣವಾಗುತ್ತದೆ ಮತ್ತು ಕಲೆಗಳನ್ನು ಕಡಿಮೆ ಮಾಡುತ್ತಾ ಸ್ವತಂತ್ರ ರಾಡಿಕಲ್ ಗಳಿಂದ ಚರ್ಮವನ್ನು ರಕ್ಷಿಸುತ್ತದೆ.

ಚಳಿಗಾಲದಲ್ಲಿ ಕಿತ್ತಳೆ ಹಣ್ಣನ್ನು ಸೇವಿಸುವುದರಿಂದ ಕಾಂತಿಯುತ ಚರ್ಮವನ್ನು ಹೊಂದಲು ಸಹಾಯ ಮಾಡುವುದಲ್ಲದೆ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.


**ಕಿವಿ ಹಣ್ಣು**

ವಿಟಮಿನ್ ಇ ಮತ್ತು ಸಿ ಯನ್ನು ಸಮೃದ್ಧವಾಗಿ ಹೊಂದಿರುವ ಕಿವಿ ಹಣ್ಣು ಕೂಡಾ ಚಳಿಗಾಲದಲ್ಲಿ ಹೆಚ್ಚಾಗಿ ಸಿಗುವಂತಹ ಹಣ್ಣಾಗಿದ್ದು, ಇದು ಕಾಲಜನ್ ಉತ್ಪಾದನೆ ಮತ್ತು ಚರ್ಮದ ದುರಸ್ತಿಗೆ ಅತ್ಯುತ್ತಮವಾದು ದಾಗಿದೆ. ಇದರ ಸೇವನೆಯು ಚರ್ಮದ ಅಕಾಲಿಕ ವಯಸ್ಸಾಗುವಿಕೆಯನ್ನು ತಡೆಯುತ್ತಾ ಆಕ್ಸಿಡೇಟಿವಿ ಒತ್ತಡದ ವಿರುದ್ಧ ಹೋರಾಡಲು ಸಹಾಯ ಮಾಡುತದೆ. ಕೀವಿ ಹಣಿನಲಿರುವ ನೀರಿನಾಂಶವು ಚಳಿಗಾಲದ ತಿಂಗಳುಗಳಲ್ಲಿ ಚರ್ಮದ ತೇವಾಂಶವನ್ನು ಕಾಪಾಡುತ್ತಾ ತಾಜಾವಾಗಿ ರಿಸುವಲ್ಲಿ ಸಹಾಯ ಮಾಡುತ್ತದೆ.

**ಸ್ಟ್ರಾಬೆರಿ ಹಣ್ಣು**

ಸ್ಟ್ರಾಬೆರಿ ಹಣ್ಣುಗಳೂ ಸಹಾ ವಿಟಮಿನ್ ಸಿಯ ಸಮೃದ್ಧ ಮೂಲಗಳಾಗಿವೆ. ಮತ್ತು ಇವು ಸ್ಟ್ರಾಬೆರಿಗಳು ನೈಸರ್ಗಿಕ ಸ್ಯಾಲಿ ಸಿಲಿಕ್ ಆಮ್ಲವನ್ನು ಹೊಂದಿರುತ್ತವೆ.

ಇದನ್ನು ಹೆಚ್ಚಾಗಿ ಮೊಡವೆಗಳಿಗೆ ಚಿಕಿತ್ಸೆ ನೀಡುವ ಮತ್ತು ಚರ್ಮದ ಟೋನ್ ಅನ್ನು ಉತ್ತಮಗೊಳಿಸುವ ತ್ವಚೆಯ ಉತ್ಪನ್ನಗಳಲ್ಲಿ ಬಳಸಲಾಗುತ್ತದೆ.





ಸತ್ತ ಚರ್ಮದ ಕೋಶಗಳನ್ನು ತೆಗೆದುಹಾಕುವ ಮೂಲಕ ಚರ್ಮವನ್ನು ಎಕ್ಸ್ಫೋಲಿಯೇಟ್ ಮಾಡಲು ಸಹಾಯಮಾಡುತ್ತದೆ. ಮತ್ತು ಈ ಹಣ್ಣುಗಳ ಸೇವನೆಯು ಚರ್ಮದ ಬಣ್ಣವನ್ನು ಉತ್ತೇಜಿಸುತ್ತಾ ಹೈಪರ್ ಪಿಗ್ಮೆಂಟೇಶನ್ ಮತ್ತು ಕಪ್ಪು ಕಲೆಗಳನ್ನು ಕಡಿಮೆ ಮಾಡುವಲ್ಲಿ ಸಹಾಯ ಮಾಡುತ್ತದೆ.

ಇದರಲ್ಲಿರುವ ವಿಟಮಿನ್ ಸಿ ಪ್ರಬಲ ಉತ್ಕರ್ಷಣ ನಿರೋಧಕ ವಾಗಿದೆ. ಇದು ಚರ್ಮದ ಸ್ಥಿತಿಸ್ಥಾಪಕತ್ವ ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಇದು ಮೆಲನಿನ್ ಉತ್ಪಾದನೆಯನ್ನು ತಡೆಯುವ ಮೂಲಕ ಚರ್ಮವನ್ನು ಹೊಳಪುಗೊಳಿಸುತ್ತದೆ ಮತ್ತು ಕಪ್ಪು ಕಲೆಗಳನ್ನು ಹೋಗಲಾಡಿಸುವಲ್ಲಿ ಸಹಾಯ ಮಾಡುತ್ತದೆ.

**ಪೇರಳೆ ಹಣ್ಣು**

ಪೇರಳೆ ಹಣ್ಣು ವಿಟಮಿನ್ ಎ, ವಿಟಮಿನ್ ಸಿ , ಕ್ಯಾರೋಟಿನ್ ಮತ್ತು ಲೈಕೋಪಿನ್ ನಂತಹ ಉತ್ಕರ್ಷಣ ನಿರೋಧಕಗಳಿಂದ ತುಂಬಿರುತ್ತದೆ. ಇವು ಚರ್ಮದ ಆರೋಗ್ಯಕ್ಕೆ ಪರಿಣಾಮಕಾರಿ ಯಾಗಿದೆ.

ಈ ಪೋಷಕಾಂಶಗಳು ಚರ್ಮವನ್ನು ಸ್ವತಂತ್ರ ರಾಡಿಕಲ್ ಗಳಿಂದ ಉಂಟಾಗುವ ಹಾನಿಯನ್ನು ತಡೆಯುತ್ತದೆ ಮತ್ತು ಉರಿಯೂತವನ್ನು ಕಡಿಮೆ ಮಾಡಲು ಹಾಗೂ ಚರ್ಮದ ವಿನ್ಯಾಸ ವನ್ನು ಸುಧಾ-ರಿಸುವಲ್ಲಿ ಸಹಾಯ ಮಾಡುತ್ತದೆ.

ಇದರಲ್ಲಿರುವ ವಿಟಮಿನ್ ಸಿ ಯು ದೃಢವಾದ ಚರ್ಮಕ್ಕಾಗಿ ಕಾಲಜನ್ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಇದರಲ್ಲಿರುವ ಕ್ಯಾರೋಟಿನ್ ಮತ್ತು ಲೈಕೋಪಿನ್ ಚರ್ಮವನ್ನು ಸೂರ್ಯನ ಕಿರಣಗಳಿಂದ ಉಂಟಾಗುವ ಹಾನಿ ಮತ್ತು ಅಕಾಲಿಕ ವಯಸ್ಸಾಗು ವಿಕೆಯ ವಿರುದ್ಧ ಹೋರಾಡುತ್ತಾ ರಕ್ಷಣೆ ನೀಡುತ್ತದೆ.

ಈ ಹಣ್ಣಿನ ನಿಯಮಿತ ಸೇವನೆಯು ಆರೋಗ್ಯಕರ, ಹೊಳೆಯುವ ಚರ್ಮವನ್ನು ಬೆಂಬಲಿಸುತ್ತದೆ ಮತ್ತು ಮೊಡವೆ, ಕಪ್ಪು ಕಲೆಗಳು ಮತ್ತು ಸುಕ್ಕುಗಳಂತಹ ಚರ್ಮದ ಸಮಸ್ಯೆಗಳನ್ನು ತಡೆಯಲು ಸಹಾಯ ಮಾಡುತ್ತದೆ.?

**ನಿಮ್ಮ ಗಮನಕ್ಕೆ**

ನೀವು ಪರಿಣಾಮಕಾರಿ ಮೊಡವೆ, ಪಿಗ್ಮೆಂಟೇಶನ್ ಅಥವಾ ಕೂದಲು ಉದುರುವಿಕೆ ಚಿಕಿತ್ಸೆ ಅಥವಾ ದಿನನಿತ್ಯದ ಚರ್ಮದ ಕ್ಯಾನ್ಸರ್ ಸ್ಕ್ರೀನಿಂಗ್ ಇತ್ಯಾದಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಿಮ್ಮ ಚರ್ಮರೋಗ ವೈದ್ಯರನ್ನು ಭೇಟಿ ಮಾಡುವುದು ಸೂಕ್ತ. ಚರ್ಮದ ಆರೋಗ್ಯವನ್ನು ಕಾಪಾಡಿಕೊಳ್ಳಲು ವರ್ಷಕ್ಕೆ ಒಮ್ಮೆಯಾದರೂ ವೈದ್ಯರ ಸಲಹೆ ತೆಗೆದುಕೊಳ್ಳುವುದು ಉತ್ತಮ.

## ಜ.೧ ರಿಂದ ೪ ವರೆಗೆ ಲಕ್ಷ್ಮೀದೇವಿ ಯ ಜಾತ್ರಾ ಮಹೋತ್ಸವ



ರಾಯಬಾಗ: ರೈಲ್ವೆ ಸ್ಟೇಷನ (ಖೈರವಾಡಿ) ದಲ್ಲಿ ಲಕ್ಷ್ಮೀದೇವಿ ಯ ಜಾತ್ರಾ ಮಹೋತ್ಸವ ಹಾಗೂ ದನಗಳ ಜಾತ್ರೆ ಮತ್ತು ದನಗಳ ಭವ್ಯ ಪ್ರದರ್ಶನ ಜ.1 ರಿಂದ 4 ವರೆಗೆ ವಿಜೃಂಭಣೆಯಿಂದ ಜರುಗಲಿದೆ.

ಜ.1 ರಂದು ಮುಂ.7.15 ಕ್ಕೆ ಲಕ್ಷ್ಮೀದೇವಿಗೆ ಮಹಾಭಿಷೇಕ, ನಂತರ ಮಹಾಪೂಜೆ, 10 ಗಂಟೆಗೆ ದೇವಿಗೆ ಉಡಿ ತುಂಬುವದು ಹಾಗೂ ಮಹಾನೈವೇದ್ಯ ನಂತರ ಭಕ್ತಾದಿಗಳಿಗೆ ಮಹಾಪ್ರಸಾದ ಜರುಗುವುದು. ರಾತ್ರಿ ದೇವಿಯ ಉತ್ಸವ ಮೂರ್ತಿ ಭವ್ಯ ಮೆರವಣಿಗೆ ನೆರವೇರುವುದು.

ಜ.2 ರಂದು ಸಂಜೆ ಸಾಯಕಲ್ ಶರ್ಯತ್ತು, ಕುದುರೆ ಶರ್ಯತ್ತು ಜರುಗಲಿವೆ. ಸಂಜೆ 6 ಗಂಟೆಗೆ ಅಲಖನೂರ ಮಲ್ಲಿಕಾರ್ಜುನ ಪ್ರಾಸಾದಿಕ ನಾಟ್ಯ ಸಂಘದಿಂದ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಜ.3 ರಂದು ಮುಂ.10 ಗಂಟೆಗೆ ದನಗಳ ಭವ್ಯ ಪ್ರದರ್ಶನ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ, ಮಧ್ಯಾಹ್ನ 3 ಗಂಟೆಗೆ ಜಂಗಿ ನಿಕಾಲಿ ಕುಸ್ತಿಗಳು ನಡೆಯಲಿವೆ.

ಜ.4 ರಂದು ಮುಂ.10 ಗಂಟೆಗೆ ಜೋಡು ಎತ್ತಿನ ಗಾಡಿ ಶರ್ಯತ್ತು ಜರುಗಲಿವೆ ಎಂದು ರಾಯಬಾಗ ಸ್ಟೇಷನ ಶ್ರೀ ಲಕ್ಷ್ಮೀದೇವಿ ಟ್ರಸ್ಟ ಕಮಿಟಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ.೦೧ ರಂದು ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ಬೆಳಗಾವಿ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತ ಆಶ್ರಯದಲ್ಲಿ 2025 ಜನೇವರಿ 01 ರಂದು ಬೆಳಗ್ಗೆ 11 ಗಂಟೆಗೆ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಮತ್ತು ಹಿರಿಯ ನಾಗರಿಕ ಸಬಲೀಕರಣ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸುವರು. ಶಾಸಕ ಆಸೀಫ್(ರಾಜು) ಸೇಠ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ನವದೆಹಲಿಯ ವಿಶೇಷ ಪ್ರತಿನಿಧಿ–2 ಪ್ರಕಾಶ ಹುಕ್ಕೇರಿ, ವಾಯವ್ಯ ಸಾರಿಗೆ ನಿಗಮ ನಿಯಮಿತದ ಅಧ್ಯಕ್ಷರಾದ ಭರಮಗೌಡ ಕಾಗೆ, ರಾಜ್ಯ ಹಣಕಾಸು ಸಂಸ್ಥೆಯ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಅವರು ವಿಶೇಷ ಆಮಂತ್ರಿತರಾಗಿ ಆಗಮಿಸವರು.

ಸಂಸದರಾದ ಈರಣ್ಣ ಕಡಾಡಿ, ಪ್ರಿಯಾಂಕಾ ಜಾರಕಿಹೊಳಿ, ಜಗದೀಶ ಶೇಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಗೌರವಾನ್ವಿತ ಅತಿಥಿಗಳಾಗಿ ಆಗಮಿಸುವರು.

## ವಿಆರ್‌ಡಬ್ಲ್ಯೂ ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನ

ಬೆಳಗಾವಿ : ಬೆಳಗಾವಿ ಜಿಲ್ಲೆಯ ವಿವಿಧ ತಾಲೂಕಿನ ಗ್ರಾಮ ಪಂಚಾಯತಯಲ್ಲಿ ಖಾಲಿ ಇರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳನ್ನು ಇಲಾಖೆಯ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಮಾಸಿಕ 9000 ಗೌರವ ಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸಂಬಂಧಪಟ್ಟ ಗ್ರಾಮ ಪಂಚಾಯತ ವ್ಯಾಪ್ತಿಯ ಅರ್ಹ ವಿಕಲಚೇತನ ಅಭ್ಯಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಕನಿಷ್ಟ 40% ಮತ್ತು ಅದಕ್ಕಿಂತ ಹೆಚ್ಚಿನ ವಿಕಲತೆ ಪ್ರಮಾಣ ಹೊಂದಿರಬೇಕು. ಅರ್ಜಿದಾರರು ಆಯಾ ಗ್ರಾಮ ಪಂಚಾಯತಿ ವ್ಯಾಪ್ತಿಗೊಳಪಟ್ಟಿರಬೇಕು. ಕನಿಷ್ಟ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿದ್ದು, ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಕನಿಷ್ಟ 18 ರಿಂದ 45 ವರ್ಷ ವಯೋಮಿತಿಯಲ್ಲಿರಬೇಕು. ವಿಕಲಚೇತನ ಮಹಿಳೆ, ಪ.ಜಾತಿ ಮತ್ತು ಪ. ಪಂಗಡದ ಅಭ್ಯರ್ಥಿಗಳು ಹಾಗೂ ಇಲಾಖೆಯ ಯೋಜನೆಗಳ ಬಗ್ಗೆ ಜ್ಞಾನ ಹೊಂದಿರುವವ–ರಿಗೆ ಆದ್ಯತೆ ನೀಡಲಾಗುವುದು.

ಆಸಕ್ತ ಅಭ್ಯರ್ಥಿಗಳು ದಿನಾಂಕ:08–01–2025 ರ ಸಂಜೆ 5 ಗಂಟೆಯೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಆಯಾ ತಾಲೂಕುಗಳ ಪಂಚಾಯತ ಕಾರ್ಯಲಯದ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ನಮೂನೆಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಾಲೂಕಿನ ಎಂಆರ್‌ಡಬ್ಲ್ಯೂ ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುಕುಂದ ಕೃಷ್ಣರಾವ ಕಣಬೂರ



ಬೆಳಗಾವಿ 28– ನಾನಾವಾಡಿಯ ನಿವಾಸಿ ಮುಕುಂದ ಕೃಷ್ಣರಾವ ಕಣಬೂರ ಅವರು ಡಿಸೆಂಬರ್ 25 ರಂದು ನಿಧನರಾದರು. ಇವ–ರಿಗೆ 76 ವರ್ಷ ವಯಸ್ಸಾಗಿತ್ತು. ಮೂಲತಃ. ವಿಜಾಪುರದವರಾಗಿದ್ದ ಇವರು ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ನಿವೃತ್ತರಾಗಿದ್ದರು. ದಿವಂಗತರು ಪತ್ನಿ, ಮಗಳು, ಮಗ, ಅಳಿಯ, ಸೊಸೆ, ಮೊಮ್ಮಕ್ಕಳು ಅಪಾರ ಬಂಧು ಬಳಗ ವನ್ನು ಅಗಲಿದ್ದಾರೆ.

## ವಾಜಪೇಯಿ ದೇಶ ಕಂಡ ಅಪ್ರತಿಮ ನಾಯಕ – ಶಾಸಕ ಸಿದ್ದು ಸವದಿ



ರಬಕವಿ–ಬನಹಟ್ಟಿ, : ದೇಶದ ಮಾಜಿ ಪ್ರಧಾನಿ ಅಟಲ್‌ಬಿಹಾರಿ ವಾಜಪೇಯಿ ದೇಶ ಕಂಡ ಅಪ್ರತಿಮ ನಾಯಕ ಮತ್ತು ಭಾರತ ದೇಶದ ಅಭಿವೃದ್ಧಿಯ ಹರಿಕಾರರು ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಬನಹಟ್ಟಿಯ ಕೆ–ಎಚ್‌ಡಿಸಿ ಕಾಲನಿಯಲ್ಲಿ ವಾಜಪೇಯಿ ಜನ್ಮದಿನಾಚರಣೆ ನಿಮಿತ್ತ ನಡೆದ ಸಮಾರಂಭದಲ್ಲಿ ವಾಜಪೇಯಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ಪ್ರಮಾಣಿಕವಾಗಿ ಪಕ್ಷ ಸಂಘಟನೆ ಮಾಡುವುದು ಕೂಡಾ ನಮ್ಮ ರಾಷ್ಟ್ರದ ಅಳಿಲು ಸೇವೆ ಮಾಡಿದಂತೆ ಪಕ್ಷದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡು. ಪಕ್ಷದ ಬೆಳವಣಿಗೆಗೆ ಕೆಲಸ ಮಾಡಿ. ಹಿರಿಯರ ಆದರ್ಶಗಳನ್ನು ಪಾಲಿಸಿ, ಅವರು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯಿರಿ. ಪಕ್ಷ ಸಂಘಟನೆಗೆ ತಾವೆಲ್ಲರೂ ಕಂಕಣ ಬದ್ದರಾಗಿರಿ ಎಂದರು.

ಇಂದಿನ ಬಿಜೆಪಿ ಕಾರ್ಯಕರ್ತರಿಗೆ ವಾಜಪೇಯಿ ಅವರ ತತ್ವ, ಆದರ್ಶಗಳು ಮಾದರಿಯಾಗಬೇಕು. ರಸ್ತೆಗಳ ಅಭಿವೃದ್ಧಿಯಿಂದ ದೇಶದ ಪ್ರಗತಿ ಸಾಧ್ಯ ಎಂಬುದನ್ನು ತಿಳಿದುಕೊಂಡು ದೇಶದ ರಸ್ತೆಗಳನ್ನು ಅಭಿವೃದ್ಧಿಗೊಳಿಸಿದ ಕೀರ್ತಿ ಶ್ರೇಯಸ್ಸು ವಾಜಪೇಯಿ ಅವರದು. ಅದೇ ರೀತಿಯಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದರು ಎಂದು ಸವದಿ ತಿಳಿಸಿದರು.

ಶಿವಾನಂದ ಬುದ್ನಿ, ಅಶೋಕ ರಾವಳ, ವೀರಭದ್ರಪ್ಪ ಕುಂಚನೂರ, ಸುರೇಶ ಮಠದ, ನಾಗಯ್ಯ ಬಕ್ಕಯ್ಯಗೋಳ, ಹುಚ್ಚಪ್ಪ ಕಡ್ಲಿಮಟ್ಟಿ, ಮಹಾಂತೇಶ ಜವರೇ, ನವೀನ ಪೋರೆ, ಕಾಡಪ್ಪ ಮಳಲಿ, ರವಿ ಕೊರ್ತಿ, ರಾಜು ಹೂಗಾರ, ಶ್ರೀಶೈಲ ಬೀಳಗಿ, ಅಕ್ಷಯ ಗೆದ್ದಪ್ಪನವರ ಸೇರಿದಂತೆ ಅನೇಕ–ರಿದ್ದರು.

## ವೃದ್ಧಾಶ್ರಮದಲ್ಲಿ ನಾದಸುಧಾದವರಿಂದ ಸಾಂಸ್ಕೃತಿಕ ಕಾರ್ಯಕ್ರಮ



ಬೆಳಗಾವಿ 28– ಹಿರಿಯ ನಾಗರಿಕರು ಸಾಹಿತ್ಯ, ಸಂಗೀತ, ಚಿತ್ರಕಲೆ ಹೀಗೆ ಯಾವುದಾದರೂಂದು ಹವ್ಯಾಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಇದರಿಂದ ವಯೋಸಹಜ ಕಾಯಿಲೆ, ಬದುಕಿನ ನೋವುಗಳನ್ನು ಮರೆಯಬಹುದು. ಮನರಂಜನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದ–ರಿಂದ ಮಾನಸಿಕ ಸದೃಢತೆಯನ್ನು ಬೆಳೆಸಿಕೊಳ್ಳಬಹುದೆಂದು ಘರ್ ಕುಲ್ ವೃದ್ಧಾಶ್ರಮದ ಅಧ್ಯಕ್ಷ ರಾಜೀವ್ ಪೋದಾರ ಇಂದಿಲ್ಲಿ ಹೇಳಿದರು.

ಇತ್ತೀಚೆಗೆ ನಾದಸುಧಾ ಸಂಗೀತ ಶಾಲೆಯ ಸಂಸ್ಥಾಪಕರಾದ ಡಾ. ಕೆ. ಸತ್ಯನಾರಾಯಣ ತಮ್ಮ 68 ನೇ ಹುಟ್ಟುಹಬ್ಬವನ್ನು ಬೆಳಗಾವಿ ತಾಲೂಕಿನ ಬೆನಕನಹಳ್ಳಿಯ ಘರಕುಲ ವೃದ್ಧಾಶ್ರಮದ ಸದಸ್ಯರೊಂದಿಗೆ ಆಚ–ರಿಸಿಕೊಂಡರು. ಈ ಸಂದರ್ಭದಲ್ಲಿ ವೃದ್ಧಾಶ್ರಮದ ಅಧ್ಯಕ್ಷರಾದ ರಾಜೀವ ಪೋದಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮೇಲಿನಂತೆ ಅಭಿಪ್ರಾಯ ಪಟ್ಟರು. ಮುಂದೆ ಮಾತನಾಡುತ್ತ ರಾಜೀವ ಅವರು ನಗರದ ನಾದಸುಧಾ ಸಂಗೀತಶಾಲೆಯ ರುವಾರಿ ಕೆ. ಸತ್ಯನಾರಾಯಣ ಹುಟ್ಟು ಹಬ್ಬದ ಸಂಭ್ರಮವನ್ನು ವೃದ್ಧಾಶ್ರಮ ದವರೊಂದಿಗೆ ಹಂಚಿಕೊಳ್ಳುತ್ತಿರುವುದು ಸಂತೋಷದ ವಿಷಯ. ಇವರು ತಮ್ಮ ತಂಡದವರೊಂದಿಗೆ ಅನಾಥ–ಾಶ್ರಮ, ವೃದ್ಧಾಶ್ರಮಗಳಿಗೆ, ಅಂ–ಧಶಾಲೆಗಳಿಗೆ ಹೋಗಿ ಸಂಗೀತ, ಅಭಿನಯ, ನೃತ್ಯಗಳಿಂದ ಅವರನ್ನು ರಂಜಿಸುವುದರೊಂದಿಗೆ ಹಬ್ಬದ ವಾತಾವರಣ ನಿರ್ಮಿಸುತ್ತಾರೆ. ಇವರು ಸಲ್ಲಿಸುತ್ತಿರುವ ಸೇವೆ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಈ ಸಂದರ್ಭದಲ್ಲಿ, ವಿದ್ವಾನ ಎಂ.ಜಿ. ರಾವ, ಸಂಧ್ಯಾ, ಪದ್ಮಾ ಸತ್ಯನಾರಾಯಣ, ಉಪಸ್ಥಿತ–ರಿದ್ದರು. ಲಕ್ಷ್ಮೀ ಪೋದಾರ ಸ್ವಾಗತಿಸಿದರು, ಪೂರ್ಣಿಮಾ ಪತ್ತಾರ ವಂದಿಸಿದರು.

## ಸಾಧಿಸುವ ಮೊದಲೇ ಕೈಚೆಲ್ಲಿ ಕುಳಿತುಕೊಳ್ಳದೇ ಆಸಕ್ತ ಕ್ಷೇತ್ರದಲ್ಲಿ ನಿರಂತರ ಪರಿಶ್ರಮ ವಹಿಸಿದಲ್ಲಿ ಸಾಧನೆ ಸಾಧ್ಯವಿದೆ



ರಾಮದುರ್ಗ : ಆತ್ಮಬಲ ಹೊಂದಿದಲ್ಲಿ ಜೀವನದಲ್ಲಿ ಸಾಧಿಸುವುದು ಅಸಾಧ್ಯವಾದುದು ಯಾವುದು ಇಲ್ಲ. ಆಸಕ್ತ ಕ್ಷೇತ್ರಗಳಲ್ಲಿ ನಿರಂತರ ಪರಿಶ್ರಮವಹಿಸಿದಲ್ಲಿ ಉನ್ನತ ಸಾಧನೆ ಮಾಡಲು ಸಾಧ್ಯವಿದೆ ಸಾಧಿಸುವ ಮೊದಲೆ ಕೈಚೆಲ್ಲಿ ಕುಳಿತುಕೊಳ್ಳಬಾರದು ಎಂದು ಸವದತ್ತಿ ತಹಶೀಲ್ದಾರ್ ಮಲ್ಲಿಕಾರ್ಜುನ ಹೆಗ್ಗನ್ನವರ ಹೇಳಿದರು.

ತಾಲೂಕಿನ ಸುರೇಬಾನ ಗ್ರಾಮದ ಪಾರ್ವತಿ ಸುಬ್ರಾಯಪ್ಪ ಮೋಟೆ ವೇದಿಕೆಯಲ್ಲಿ ಅವರಾದಿ ಶಿವಪೇಟೆಯ ಓಂ ಶಿವ ಮೇಳ ತಂಡ ಗುರುವಾರ ಆಯೋಜಿಸಿದ್ದ 2ನೇ ದಿನದ ರಾಜ್ಯಮಟ್ಟದ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಾನಪದ ಕಲೆಯೂ ಅಷ್ಟೆ ಎಲ್ಲ–ರಿಗೂ ಒಲಿಯುವ ವಿದ್ಯೆ ಅಲ್ಲ. ಅದು ಕೆಲವರನ್ನು ಮಾತ್ರ ಅಪ್ಪಿಕೊಳ್ಳುತ್ತದೆ. ಡೊಳ್ಳು ಕಲಾವಿದ ಸಿದ್ದು ಮೋಟೆ ಅವರು ತಮ್ಮ ಸ್ವಂತ ಹಾಡುಗಳಿಂದ ಸಮಾಜದ ಅಂಕು ಡೊಂಕುಗಳನ್ನು ತಿದ್ದುವುದು, ದುರ್ಬಲರಿಗೆ ನೈತಿಕ ಬಲ ತುಂಬುವ ಮೂಲಕ ಸಮಾಜಕ್ಕೆ ದೊಡ್ಡ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ ಕಲಾವಿದರಾಗಿ ಉಳಿಯದೇ ಇತರ ಜಾನಪದ ಕಲಾವಿದರಿಗೆ ಪ್ರೋತ್ಸಾಹ ನೀಡಿ ಬೆಳೆಸುತ್ತಿದ್ದಾರೆ ಎಂದರು.

ಪ್ರಸಕ್ತ ಮೊಬೈಲ್ ಯುಗದಿಂದ ಜಾನಪದ ಕಲೆ ನಸಿಶಿ ಹೋಗುತ್ತಿದೆ. ಇದರ ಮಧ್ಯೆ ಎಲ್ಲಿಯೋ ಎಲೆಮರೆ ಕಾಯಿಯಂತಿರುವ ಜಾನಪದ ಕಲಾವಿದರು ಬೆಳಗಾಗುವಷ್ಟರಲ್ಲಿ ಸಾಮಾಜಿಕ ಜಾಲತಾನಗಳ ಮೂಲಕ ಜನಪ್ರೀಯರಾಗುತ್ತಿದ್ದಾರೆ. ಅದಕ್ಕೆ ಹಾವೇರಿ ಜಿಲ್ಲೆಯ ಕಲಾವಿದರಾದ ಹನಮಂತ ಲಮಾಣಿ ಮತ್ತು ಬಾಳು ಬೆಳಗುಂದಿ ಸಾಕ್ಷಿ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಾನಪದ ವಿದ್ವಾಂಸ ಪ್ರೊ. ಪಿ.ಎಲ್. ಮಿಸಾಳೆ ಮಾತನಾಡಿ, ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜಾನಪದ ಸಂಭ್ರಮ ಎಂಬ ಹೊಸ ಅಧ್ಯಾಯವನ್ನು ಜಾರಿಗೆ ತರುವುದರಿಂದ ಅಳಿದು ಹೋಗುತ್ತಿರುವ ಜಾನಪದ ಕಲೆಗೆ ಉತ್ತೇಜನ ನೀಡಿದಂತಾಗುತ್ತದೆ ಎಂದರು.

ಅವರಾದಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಬಿ.ಎಸ್. ಗುಡದನ್ನವರ ಉಪನ್ಯಾಸ ನೀಡಿದರು. ಸುರೇಬಾನ ಗ್ರಾಪಂ ಅಧ್ಯಕ್ಷೆ ನಾಗರತ್ನ ಜಡಿ, ಉಪಾಧ್ಯಕ್ಷೆ ಬಸವ್ವ ಭಜಂತ್ರಿ, ನಿಂಗಪ್ಪ ಮೆಳ್ಳಿಕೇರಿ, ಶಂಕ್ರಯ್ಯಸ್ವಾಮಿ ಹಿರೇಮಠ, ಬಸವಂತಪ್ಪ ಮದಕಟ್ಟಿ, ಶ್ರೀಶೈಲ್ ಗಂಗರಗಿ, ಸರಸ್ವತಿ ಬೀಳಗಿ, ಕಾಶಪ್ಪ ಕಾರಜೋಳ, ಫಕೀರಪ್ಪ ಹಾವೋಜಿ, ಕ–ರಿಯಪ್ಪ ವಡ್ಡರ, ಮರಿಯಪ್ಪ ದೊಡಮನಿ, ಕುಮಾರ ವಡ್ಡರ, ಭೀಮಣ್ಣ ಭಾವಿಕಟ್ಟಿ ಸೇರಿದಂತೆ ಇತರರಿದ್ದರು.

ರಾಮದುರ್ಗದ ಕುಬೇರ ಗರಡಿಮನಿ, ರೋಣ ತಾಲೂಕಿನ ಕೊತಬಾಳದ ಶಂಕ್ರಣ್ಣ ಸಂಕಣ್ಣವರ, ಧಾರವಾಡದ ಇಮಾಮಸಾಬ ವಲ್ಲೆಪ್ಪನವರ, ಗದಗಿನ ಯಲ್ಲಪ್ಪ ಡೊಕ್ಕನ್ನವರ, ಸುರೇಬಾನದ ಶಿವಾನಂದ ಶಿರೂರ, ಮಾರುತಿ ಪ್ಯಾಟಿ, ಚೆನ್ನಾಪೂರದ ಮೈಲಾರಪ್ಪ ಗೊಂದೆಪ್ಪನವರ, ಅವರಿಗೆ ಜಾನಪದ ಶಿವೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು. ತಡರಾತ್ರಿ ವರೆಗೆ ವಿವಿಧ ಜಾನಪದ ಕಲಾ ತಂಡದವ–ರಿಂದ ಡೊಳ್ಳು ಕುಣಿತ, ಕರಡಿ ಮಜಲು, ಸೋಬಾನ ಪದ, ಹಂತಿ ಪದ ಸೇ–ರಿದಂತೆ ಹಲವು ಜಾನಪದ ಕಾರ್ಯಕ್ರಮ ಮತ್ತು ಜಾನಪದ ಒಡ್ಡೋಲಗ ಸಭಿಕರನ್ನು ರಂಜಿಸಿತು. ಸಿದ್ದು ಮೋಟೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾರುತಿ ಪೂಜಾರ ಸ್ವಾಗತಿಸಿದರು. ಎಂ.ಎನ್. ಗವನ್ನವರ ಕಾರ್ಯಕ್ರಮ ನಿರೂಪಿಸಿದರು. ಆನಂದ ಹಕ್ಕೆನ್ನವರ ವಂದಿಸಿದರು.

## ರೈತ ದೇಶದ ಬೆನ್ನೆಲುಬು ಎನ್ನಬೇಕಾದರೆ ಎಲ್ಲರೂ ರೈತರನ್ನು ಗೌರವಿಸಬೇಕು : ಚೂನಪ್ಪಾ ಪೂಜೇರಿ




ವಿಜಯಪುರ : ಈ ದೇಶದ ಪ್ರತಿಯೊಬ್ಬರು ರೈತ ದೇಶದ ಬೆನ್ನೆಲುಬು ಎಂದು ಹೇಳಿ ತಮ್ಮ ಆಚೆಗಾಗಿ ಚುನಾವಣೆಯಂತಹ ಸಂದರ್ಭದಲ್ಲಿ ರೈತರನ ಮನೆ ಬಾಗಿಲಿಗೆ ಬಂದು ಮತಭಿಕ್ಷೆ ಪಡೆದು ರೈತರನ್ನು ಮರೆತು ಅವರನ್ನೆ ಸುಲಿಗೆ ಮಾಡುವಂತಹ ಈ ಕೆಟ್ಟ ಚಾಳಿಯನ್ನು ಬಿಟ್ಟು ಎಲ್ಲರೂ ರೈತರನ್ನು ಗೌರವಿಸಬೇಕು ಹಾಗೂ ನಿತ್ಯ ಅವನನ್ನು ಪೂಜೆಸುವಂತಾಗಬೇಕು, ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಡಿಸೆಂಬರ್ 23 ರಂದು ವಿಶ್ವ ರೈತ ದಿನವನ್ನು ಆಚರಣೆ ಮಾಡಬೇಕು ಎಂದು ರಾಜ್ಯಧ್ಯಕ್ಷರಾದ ಚೂನಪ್ಪಾ ಪೂಜೇರಿ ಹೇಳಿದರು

ನಗರದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಕಚೇರಿಯಲ್ಲಿ ಹಮ್ಮಿಕೊಂಡ ವಿಶ್ವ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ಇಂದಿನ ದಿನಮಾನಗಳಲ್ಲಿ ರೈತ–ರಿಗಾಗುವ ಅನ್ಯಾಯ ಮೋಸದ ಬಗ್ಗೆ ಜಾಗೃತರಾಗಬೇಕು ಎಲ್ಲರೂ ಸಂಘಕ್ಕೆ ಬಂದು ಸಂಘಟಿತರಾಗಿ ಯಾವ ರೈತ–ರಿಗೂ ಅನ್ಯಾಯ ಆಗದಂತೆ ಹೋರಾಟ ಮಾಡಬೇಕು ಎಂದರು. ವಿಶ್ವರೈತಚೇತನ ಪ್ರೋ ಎಂ.ಡಿ.ನಂಜುಂಡಸ್ವಾಮಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ರೈತ ಸಂಘದ ರಾಜ್ಯ ಗೌರವಾಧ್ಯಕ್ಷರಾದ ಶಶಿಕಾಂತ ಪಡಸಲಗಿ ಅವರು ಮಾತನಾಡುತ್ತಾ ಈ ಜಗತ್ತು ಎಷ್ಟೇ ಮುಂದುವೆದರು ರೈತ ಬೆಳೆದ ಅನ್ನವನ್ನು ತಿನ್ನಬೇಕೆ ಹೊರತು ಹಣ ಅಲ್ಲ, ಇಲ್ಲಿ ಅನ್ನದಾತನೆ ಸಾರ್ವಭೌಮ ಎಲ್ಲರೂ ರೈತರನ್ನು ಗೌರವಿಸಿ, ಮುಂದಿನ ಪೀಳಿಗೆಗೆ ಕೃಷಿಯೇ ಮೂಲಾಧಾರ, ಎಲ್ಲರೂ ಸಂಘಟಿತರಾಗಿ ಕೃಷಿಯಲ್ಲಿ ತೊಡಗಿ ಕೃಷಿಯೊಡನೆ ಉಪಉತ್ಪನ್ನಗಳನ್ನು ತಯಾರಿಸಿ ಜೊತೆಗೆ ಸಮಗ್ರ ಕೃಷಿ ಮಾಡಿ ಆಧಾಯ ಹೊಂದಿ ಸಾಲದಿಂದ ಮುಕ್ತರಾಗಬೇಕು ಎಂದರು.

ರಾಜ್ಯ ಕಾರ್ಯಾಧ್ಯಕ್ಷ ಮಹೇಶಗೌಡ ಸುಬೇದಾರ ಹಾಗೂ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡುತ್ತಾ ವಿಶ್ವದ ಸಕಲ ಜೀವರಾಶಿಗಳಿಗೆ ಅನ್ನಹಾಕುವ ರೈತ ಮಾತ್ರ ಇಲ್ಲಿ ಸರ್ಬಶ್ರೇಷ್ಠ, ಉಳಿದವರೆಲ್ಲರೂ ಕೇವಲ ರೈತನ ಹೆಸರು ಹೇಳಿ ತಮ್ಮ ಬೆಳೆ ಬೇಯಿಸಿಕೊಳ್ಳತ್ತಾರೆ, ಅಂತಹವರಿಂದ ದೂರಿದ್ದು, ಪ್ರಜ್ಞಾವಂತ ರೈತರಾಗಿ ಇಡೀ ದೇಶಕ್ಕೆ ಮಾದರಿ ಆಗುವಂತೆ ಹೇಳಿದರು.

ಈ ವೇಳೆ ಉತ್ತರ ಕರ್ನಾಟಕ ಕಾರ್ಯಾಧ್ಯಕ್ಷರಾದ ಚಂದನಗೌಡ ಮಾಲಿಪಾಟೀಲ, ಮುಖಂಡರಾದ ಕಲ್ಲನಗೌಡ ಪಾಟೀಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ರಾಮನಗೌಡ ಪಾಟೀಲ, ಮಹದೇವಪ್ಪ ತೇಲಿ, ಪ್ರಕಾಶ ತೇಲಿ, ಶಾನೂರ ನಂದರಗಿ, ನಜೀರ ನಂದರಗಿ, ಸೋಮು ಬಿರಾದಾರ, ಜಕರಾಯ ಪೂಜಾರಿ, ಸತೀಶ ಪಾಟೀಲ, ಮಹಾಂತೇಶ ಮಮದಾಪುರ, ಸುಜಾತಾ ಅವಟಿ, ಗುರುರಾಜ ಡೊಳ್ಳಿ, ಸಂಗಪ್ಪ ಟಕ್ಕೆ, ಹಾಜಿಲಾಲ ಕರ್ಜಗಿ, ಅನಮೇಶ ಜಮಖಂಡಿ, ಸುಬ್ಬಾ ಹಿಟ್ಟನಳ್ಳಿ, ಶರಣಪ್ಪ ಜಮಖಂಡಿ, ಪಾಂಡು ಜಂಬಗಿ, ಬಸ್ಸು ನ್ಯಾಮಗೊಂಡ ಸೇರಿದಂತೆ ಅನೇಕರು ಇದ್ದರು.

## ಪುಣ್ಯಸ್ಮರಣೋತ್ಸವ ಅಂಗವಾಗಿ ಸಂಗೀತ ಸೇವೆ



ತಾಳಿಕೋಟೆ, ಪಟ್ಟಣದ ಆಶ್ರಯ ಬಡಾವಣೆಯಲ್ಲಿ ದಿ. ಪರಶುರಾಮ್ ಗೋವಿಂದ್ ಸಿಂಗ್ ಹಜೇರಿ ಅವರ ಮೂರನೇ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದ ಅಂಗವಾಗಿ ಶ್ರೀ ಖಾಸ್ಗತೇಶ್ವರ ಸಂಗೀತ ಕಲಾ ಬಳಗದವತಿಯಿಂದ ಸಂಗೀತ ಸೇವೆ ಕಾರ್ಯಕ್ರಮವು ಜರುಗಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪುರಸಭಾ ಸದಸ್ಯ ವಾಸುದೇವ ಹೆಬಸೂರ, ಪರಶುರಾಮ್ ದೇವಿ, ಬಾಬು ಕಾರ್ಜೋಳ, ಪಿ.ಜಿ ಹಜೇರಿ ಅವರು ಪಾಲ್ಗೊಂಡು ದಿ.ಪರಶುರಾಮ ಹಜೇರಿ ಅವರ ಗೆಳತನ ಮತ್ತು ಸ್ನೇಹ ಸಂಬಂದದ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ಸುಮಾರು ಮೂರು ಗಂಟೆಗಳ ಕಾಲ ಶ್ರೀ ಖಾಸ್ಗತೇಶ್ವರ ಸಂಗೀತ ಕಲಾ ಬಳಗದ ವತಿಯಿಂದ ಸಂಗೀತ ಕಾರ್ಯಕ್ರಮಗಳು ಜರುಗಿದವು.

ಈ ಸಮಯದಲ್ಲಿ ಕುಮಾರ್ ವಿನಯ ಸಿಂಗ್ ಹಜೇರಿ, ಕಲಾವಿದರಾದ ಲಕ್ಷ್ಮಣ ಸಿಂಗ್ ವಿಜಯಪುರ್, ಬಸವರಾಜ್ ಬಿರಾದಾರ್ ಚೋಕಾವಿ, ಮುರಳಿದರ್ ಭಜಂತ್ರಿ ಖ್ಯಾತ ಕಲಾವಿದರು, ಹಾಗೂ ಸಂಗೀತ ಶಿಕ್ಷಕರಾದ ಗೋವಿಂದ್ ಸಿಂಗ್ ಹಜೇರಿ, ದೇವರಾಜ್ ಯರಕಿಹಾಳ, ಪರಶುರಾಮ ಚಟ್ನಳ್ಳಿ, ರಾಜು ಗುಬ್ಬೇವಾಡ್, ಸಾಯಬಣ್ಣ ಗುಪ್ಪೆವಾಡ್, ಕುಮಾರ್ ಮಡಿವಾಳಪ್ಪ ಯಲಗೋಡ, ಹಾಗೂ ಖ್ಯಾತ ತಬಲಾ ವಾದಕರಾದಕರಾದ ಯಲ್ಲಪ್ಪಾ ಗುಂಡಹಳ್ಳಿ, ಮೊದಲಾದವರು ಉಪಸ್ಥಿತರಿದ್ದರು.

ಎ.ಎಸ್ ವಠಾರ ಸಾಂಸ್ಕೃತಿಕ ಕಲಾ ಸಂಘದ ಅಧ್ಯಕ್ಷರಾದ ದೀಪಕ್‌ಸಿಂಗ್ ಹಜೇರಿ ಅವರು ನಿರೂಪಿಸಿದರು.

***

## ಒಕ್ಕೂಟದಿಂದ ಇಂದು ಪೂರ್ವಭಾವಿ ಸಭೆ

ತಾಳಿಕೋಟೆ, ಕೇಂದ್ರ ಸರ್ಕಾರದ ಗೃಹ ಸಚೀವರ ಅವಹೇಳನಕಾರಿ ಹೇಳಿಕೆ ಖಂಡಿಸಿ ತಾಳಿಕೋಟೆ ಬಂದ್ ಕರೆ ನೀಡುವ ಕುರಿತು ಹಾಗೂ ವಿಜಯಪುರ ಬಂದ್ ಕರೆಯ ಪ್ರತಿಭಟನೆಯಲ್ಲಿ ಭಾಗವಹಿಸುವ ಬಗ್ಗೆ ಚರ್ಚಿಸಲು ವಿವಿಧ ದಲಿತಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಇಂದು ದಿ.29 ರಂದು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ವಿವಿಧ ದಲಿತಪರ ಸಂಘಟನೆಗಳ ಒಕ್ಕೂಟದ ಗೌರವಾಧ್ಯಕ್ಷ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬಿ.ಕಟ್ಟಿಮನಿ ಹಾಗೂ ಅಧ್ಯಕ್ಷರಾದ ಮುತ್ತಪ್ಪಣ್ಣ ಚಮಲಾಪೂರ ಅವರು ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿರುವ ಪೂರ್ವಭಾವಿ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬರಿ ಅಂಬೇಡ್ಕರ್ ಅಂಬೇಡ್ಕರ್ ಅಂಬೇಡ್ಕರ್ ಎನ್ನುವ ಬದಲು ದೇವರ ಹೆಸರು ಹೇಳಿದ್ರೆ 7 ಜನ್ಮದ ಪುಣ್ಯನಾದರೂ ಬರುತ್ತಿತ್ತು ಎಂದು ನಮ್ಮ ನಮ್ಮೆಲ್ಲರ ಆರಾಧ್ಯ ದೈವ ವಿಶ್ವರತ್ನ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಅವಮಾನಿಸುವ ರೀತಿಯಲ್ಲಿ ವರ್ತಿಸಿದ್ದಾರೆ ಈ ಉದ್ಧಟತನ ಹೇಳಿಕೆಯನ್ನು ಖಂಡಿಸಿ ದಿ. 30 ರಂದು ಸೋಮವಾರ ವಿಜಯಪುರ ಬಂದ್ ಕರೆಯಲ್ಲಿ ಪಾಲ್ಗೊಳ್ಳುವದರ ಜೊತೆಗೆ ಬೆಂಬಲ ಸೂಚಿಸಿ ದಿ. 31 ರಂದು ತಾಳಿಕೋಟೆ ಸಂಪೂರ್ಣ ಬಂದ್ ಕರೆ ನೀಡಲು ತಿರ್ಮಾನಿಸಲು ಇಂದು ದಿ.29 ರಂದು ಪೂರ್ವಭಾವಿ ಸಭೆಯನ್ನು ಕರೆಯಲಾಗಿದ್ದು ಪಟ್ಟಣದ ಹಾಗೂ ಸುತ್ತಮುತ್ತಲಿನ ಗ್ರಾಮದ ಎಲ್ಲ ದಲಿತ ಬಂಧುಗಳು ಹಾಗೂ ವಿವಿಧ ದಲಿತ ಪರ ಸಂಘಟನೆಗಳ ಒಕ್ಕೂಟದ ಎಲ್ಲಾ ಪದಾಧಿಕಾರಿಗಳು ಅಂಬೇಡ್ಕರ್ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಪ್ರತಿಭಟನೆಯ ಕುರಿತು ಚರ್ಚಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ವಿವಿಧ ದಲಿತ ಪರ ಸಂಘಟನೆಗಳ ಒಕ್ಕೂಟದ ಗೌರವ ಅಧ್ಯಕ್ಷರಾದ ಎಸ್.ಬಿ ಕಟ್ಟಿಮನಿ, ಹಾಗೂ ಅಧ್ಯಕ್ಷರಾದ ಮುತ್ತಪ್ಪ ಚಮಲಾಪುರ ಮತ್ತು ಉಪಾಧ್ಯಕ್ಷರಾದ ಬಸವರಾಜ ಕಟ್ಟಿಮನಿ, ಡಿಎಸ್‌ಎಸ್ ವಿಭಾಗಿಯ ಸಂಚಾಲಕರಾದ ದೇವೇಂದ್ರ ಹಾದಿಮನಿ, ಜಿಲ್ಲಾ ವಿದ್ಯಾರ್ಥಿ ಒಕ್ಕೂಟದ ಸಂಚಾಲಕರಾದ ನಾಗೇಶ್ ಕಟ್ಟಿಮನಿ, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಮಹೇಶ ಚಲವಾದಿ ಅವರು ತಿಳಿಸಿದ್ದಾರೆ.

******

## ಹಲಗತ್ತಿ ಪಿಕೆಪಿಎಸ್‌ಗೆ ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆ



ರಾಮದುರ್ಗ : ತಾಲೂಕಿನ ಹಲಗತ್ತಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಮುಂದಿನ 5 ವರ್ಷಗಳ ಅವಧಿಗೆ ನಡೆದ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಬಾಲಪ್ಪ ಗೋವಿಂದಪ್ಪ ರುದ್ರಗೌಡ ಉರ್ಫ್ ಧ್ಯಾವನಗೌಡ್ರ ಹಾಗೂ ಉಪಾಧ್ಯಕ್ಷರಾಗಿ ಮಾರುತಿ ಬಾಲಪ್ಪ ಮುದಕವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಗಿರೀಶ ಯಾವಗಲ್ ಘೋಷಿಸಿದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಬಸನಗೌಡ ದ್ಯಾವನಗೌಡ್ರ, ಸಂಘದ ಸಿಬ್ಬಂದಿ ವರ್ಗ ಹಾಗೂ ಗ್ರಾಮದ ಪ್ರಮುಖರು ಇದ್ದರು.

***

## ಶ್ರೀ ಬಾಲಾಜಿ ಇಂಡಸ್ಟ್ರೀಸ್ ದಾಲ್ ಉತ್ಪಾದಕ ಘಟಕ ಲೋಕಾರ್ಪಣೆ



ಮುದ್ದೇಬಿಹಾಳ ; ರೈತರು ಬೆಳೆದ ತೊಗ–ರಿಯನ್ನು ಯಾವುದೇ ದಲ್ಲಾಳಿಗಳ ಸಮಸ್ಯೆಯಿಲ್ಲದೆ ನೇರವಾಗಿ ಮಾರಾಟ ಮಾಡಲು ಶ್ರೀ ಬಾಲಾಜಿ ದಾಲ್ ಉತ್ಪಾದಕ ಘಟಕ ರಹದಾರಿಯಾಗಿದೆ ಎಂದು ಜವಳಿ ,ಕಬ್ಬು ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹಾಗೂ ಕೆಎಸ್‌ಡಿ ನಿಗಮದ ಅಧ್ಯಕ್ಷ ಶಾಸಕ ಸಿ.ಎಸ್ ನಾಡಗೌಡ ಹೇಳಿದರು ಶನಿವಾರ ಪಟ್ಟಣದ ನಾಲತವಾಡ ರಸ್ತೆಯಲ್ಲಿರುವ ಶರಣು ಸಜ್ಜನ ,ರುದ್ರಪ್ಪ ಕಡಿ ಸಹಭಾಗಿತ್ವದ ಶ್ರೀ ಬಾಲಾಜಿ ಇಂಡಸ್ಟ್ರೀಸ್ ದಾಲ್ ಉತ್ಪಾದಕ ಘಟಕ ಲೋಕಾರ್ಪಣೆ ಮಾಡಿ ಮಾತನಾಡಿದರು ಪ್ರತಿನಿತ್ಯದ ಮಾರುಕಟ್ಟೆ ದರದಲ್ಲಿ ರೈತರಿಂದ ಕಾಳುಗಳನ್ನು ಖರೀದಿ ಮಾಡುತ್ತಾರೆ ಎಂದರು.

ಶ್ರೀ ಬಾಲಾಜಿ ಇಂಡಸ್ಟ್ರೀಸ್ ದಾಲ್ ಉತ್ಪಾದಕ ಘಟಕ ಉದ್ಘಾಟನೆಯನ್ನು ಅಂಕಲಿಮಠದ ಶ್ರೀ ವೀರಭದ್ರ ಮಹಾಸ್ವಾಮಿಗಳು, ಕುಂಟೋಜಿ ಭಾವೈಕ್ಯಮಠದ ಶ್ರೀ ಚೆನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳು, ವಡವಡಗಿ ನಂದಿಮಠದ ಶ್ರೀ ಗುರುವೀರಸಿದ್ಧ ಮಹಾಸ್ವಾಮಿಗಳು ಮಾಡಿದರು.

ಈ ವೇಳೆ ಮಾಜಿ ಸಚಿವ ಎಸ್ ಕೆ ಬೆಳ್ಳುಬ್ಬಿ , ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎ.ಎಸ್ ಪಾಟೀಲ್ (ನಡಹಳ್ಳಿ), ಜಿಲ್ಲಾ ಪಂ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ, ಸತೀಶ್ ಓಸ್ವಾಲ್, ಸಿದ್ದನಗೌಡ ಬಿರಾದಾರ, ಎಂ ಎ ಗಂಗನಗೌಡರ, ಅಧಿಕ ಪಾಟೀಲ್, ಎಂ ಬಿ ನಾವದಗಿ, ಸಿ ಬಿ ಅಸ್ಕಿ, ಬ್ಲಾಕ್ ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಗುರಣ್ಣ ತಾರನಾಳ,ಕಾಮರಾಜ ಬಿರಾದಾರ,ಬಾಬು ಬಿರಾದಾರ ,ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಎ.ಗಣೇಶ, ಟಿ

ವಿಜಯಭಾಸ್ಕರ್, ವಿಕ್ರಮ್ ಓಸ್ವಾಲ್, ಸುರೇಶ ನಾಡಗೌಡ, ಗುರು ದೇಶಮುಖ, ಪ್ರಭು ಡೇರೆದ,ರಾಜು ಕಲಬುರಗಿ,ದಾಲ್ ಮಿಲ್ ನ ಮಾಲೀಕರಾದ ಶರಣು ಸಜ್ಜನ, ಸಂಗಮೇಶ ಕಡಿ, ಪ್ರಕಾಶ ಸಜ್ಜನ, ರುದ್ರಪ್ಪ ಕಡಿ, ಸೇರಿದಂತೆ ಪ್ರಮುಖ ಗಣ್ಯರು ಮುಖಂಡರು ಭಾಗವಹಿಸಿದ್ದರು.

# ಕೆಎಎಸ್ ನೇಮಕಾತಿ: ಪೂರ್ವಭಾವಿ ಪರೀಕ್ಷೆ, ಅಭ್ಯರ್ಥಿಗಳಿಗೆ ಕಟ್ಟುನಿಟ್ಟಿನ ಮಾರ್ಗಸೂಚಿ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ವು ಭಾನುವಾರ (ಡಿಸೆಂಬರ್ 29) ನಡೆಸುತ್ತಿರುವ 384 ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ (ಕೆಎಎಸ್) ನೇಮಕಾತಿಯ ಪೂರ್ವಭಾವಿ ಮರುಪರೀಕ್ಷೆಗೆ ಭದ್ರತೆ ನೀಡಿ ಪಾರದರ್ಶಕವಾಗಿಡಲು ಸಿದ್ಧತೆ ಮಾಡಿಕೊಂಡಿದೆ. ಈ ಹಿನ್ನೆಲೆಯಲ್ಲಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಕಟ್ಟು ನಿಟ್ಟಿನ ಸೂಚನೆಗಳನ್ನು ಪಾಲಿಸುವಂತೆ ಕೂಡ ಸೂಚಿಸಿದೆ.



ಅಭ್ಯರ್ಥಿಗಳಿಗೆ ಮಾರ್ಗಸೂಚಿ: ಕೆಪಿ-ಎಸ್‌ಸಿಯಿಂದ ಡೌನ್‌ಲೋಡ್ ಮಾಡಿದ ಮರು ಪರೀಕ್ಷೆಯ ಪ್ರವೇಶ ಪತ್ರದ ಜೊತೆಗೆ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಪರೀಕ್ಷಾ ಕೇಂದ್ರಗಳಲ್ಲಿ ಕಡ್ಡಾಯವಾಗಿ ಹಾಜರುಪಡಿಸಬೇಕು. ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳಾದ ಮೊಬೈಲ್, ಕ್ಯಾಲ್ಕುಲೇಟ-ರ್, ಸ್ಮಾರ್ಟ್‌ವಾಚ್, ಬ್ಲೂಟೂತ್, ವೈರ್ ಲೆಸ್ ಸೆಟ್, ಪೇಪರ್, ಪುಸ್ತಕ ಸೇ-ರಿದಂತೆ ಇತರೆ ಎಲೆಕ್ಟ್ರಾನಿಕ್ ವಸ್ತುಗಳನ್ನು ತರುವಂತಿಲ್ಲ. ಅಭ್ಯರ್ಥಿಗಳು ತುಂಬು ತೋಳಿನ ಶರ್ಟ್ ಮತ್ತು ಫೇಸ್ ಮಾಸ್ಕ್ ಹಾಗೂ ಇತರ ವಸ್ತುಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ. ಸಾಧಾರಣ ಚಪ್ಪಲಿಯನ್ನು ಮಾತ್ರ ಧರಿಸಿ ಪರೀಕ್ಷೆಗೆ ಹಾಜರಾಗಬೇಕು ಎಂದು ಆಯೋಗ ಸೂಚನೆ ನೀಡಿದೆ.

ಮೊಬೈಲ್, ಬ್ಲೂಟೂತ್ ಮತ್ತು ಇತರೆ ಆಧುನಿಕ ಸಂವಹನ ಉಪಕರಣಗಳನ್ನು ಬಳಸಿ ಪರೀಕ್ಷೆಯಲ್ಲಿ ಅಕ್ರಮಗಳನ್ನು ಎಸಗುವುದನ್ನು ತಡೆಯಲು ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಅಳವಡಿಸಲಾಗುವುದು. ಪ್ರತಿ ಪರೀಕ್ಷಾ ಕೊಠಡಿಯಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗುವುದು. ಫೇಸ್ ರಿಕಗ್ನಿಶನ್ ಹಾಗೂ ಬಯೋಮೆಟ್ರಿಕ್ ಹಾಜರಾತಿಯನ್ನು ಕೆಪಿಎಸ್‌ಸಿಯಿಂದ ನೇಮಕವಾದ ಸಿಬ್ಬಂದಿ ಕೈಗೊಳ್ಳಲಿದ್ದಾರೆ. ಪರೀಕ್ಷಾ ಕೇಂದ್ರಗಳಿಗೆ ಆಗಮಿಸುವ ಅಭ್ಯರ್ಥಿಗಳನ್ನು ಪೂರ್ಣ ಪ್ರಮಾಣದಲ್ಲಿ ತಪಾಸಣೆಗೆ ಒಳಪಡಿಸಬೇಕು. ಇದಕ್ಕಾಗಿ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ತಂಡಗಳನ್ನು ರಚಿಸುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸಹ ಸೂಚಿಸಿದ್ದಾರೆ.

ಪರೀಕ್ಷಾ ಕೇಂದ್ರದ ಸುತ್ತಮುತ್ತ ನಿಷೇಧಾಜ್ಞೆ: 2023-24ನೇ ಸಾಲಿನ 384 ಗೆಜೆಟೆಡ್ ಪ್ರೊಬೆಷನರ್ ಹುದ್ದೆಗಳ ನೇಮಕಾತಿಯ ಪೂರ್ವಭಾವಿ ಮರು ಪರೀಕ್ಷೆಯು ಬೆಂಗಳೂರು ಜಿಲ್ಲಾ ಕೇಂದ್ರದ 53 ಪರೀಕ್ಷಾ ಉಪ ಕೇಂದ್ರಗಳಲ್ಲಿ ನಡೆಯಲಿದೆ. ಪರೀಕ್ಷೆಯನ್ನು ಸುವ್ಯವಸ್ಥಿತವಾಗಿ ನಡೆಸುವ ಸಲುವಾಗಿ ಪರೀಕ್ಷೆ ಕೇಂದ್ರಗಳ ಸುತ್ತಮುತ್ತ 200 ಮೀಟರ್ ಪ್ರದೇಶವನ್ನು ನಿಷೇಧಿತವೆಂದು ಘೋಷಿಸಲಾಗಿದೆ. ಈ ಪ್ರದೇಶದ ವ್ಯಾಪ್ತಿಗಳಲ್ಲಿ ಬರುವ ಎಲ್ಲ ಜೆರಾಕ್ಸ್ ಅಂಗಡಿ ಮತ್ತು ಪುಸ್ತಕ ಅಂಗಡಿಗಳನ್ನು ಮುಚ್ಚುವಂತೆ ನಗರ ಪೊಲೀಸ್ ಆಯುಕ್ತ ಬಿ ದಯಾನಂದ್ ಆದೇಶ ಹೊರಡಿಸಿದ್ದಾರೆ.

ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿ ಪೂರ್ವಭಾವಿ ಪರೀಕ್ಷೆ ಇದೇ ವರ್ಷ ಆಗಸ್ಟ್?ನಲ್ಲಿ ನಡೆದಿತ್ತು. ಆದರೆ ಆ ದಿನದ ಪ್ರಶ್ನೆ ಪತ್ರಿಕೆಯನ್ನು ಕಳಪೆಯಾಗಿ ಭಾಷಾಂತರ ಮಾಡಲಾಗಿದೆ ಎಂದು ಗೊಂದಲ ಉಂಟಾಗಿದ್ದರಿಂದ ಮರುಪ-ರೀಕ್ಷೆ ನಡೆಸುವಂತೆ ಸಿಎಂ ಸಿದ್ದರಾಮಯ್ಯ ಸೂಚಿಸಿದ್ದರು.

# ಕಾಶ್ಮೀರದಲ್ಲಿ ಭಾರೀ ಹಿಮಪಾತ

## ವಿಮಾನಗಳ ಹಾರಾಟ ರದ್ದು- ರಸ್ತೆ ಸಂಚಾರ ಬಂದ್

ಶ್ರೀನಗರ: ಕಣಿವೆ ನಾಡು ಕಾಶ್ಮೀರದಲ್ಲಿ ಮಳೆಯ ನಡುವೆ ವ್ಯಾಪಕ ಹಿಮಪಾತ ಆಗುತ್ತಿರುವುದರಿಂದ ಶ್ರೀನಗರದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ-ಕ್ಕೆ ಬರುವ ಮತ್ತು ಇಲ್ಲಿಂದ ಹೊರಡುವ ಎಲ್ಲಾ ವಿಮಾನಗಳನ್ನು ರದ್ದುಗೊಳಿಸಲಾಗಿದೆ. ಹವಾಮಾನ ವೈಪರೀತ್ಯದ ಕಾರಣದಿಂದ ವಿಮಾನಗಳ ಹಾರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದ್ದು, ಅನಾನುಕೂಲತೆಗಾಗಿ ನಾವು ವಿಷಾದಿಸುತ್ತೇವೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರದಿಂದ ಭಾರೀ ಹಿಮಪಾತ ಕಂಡುಬರುತ್ತಿದ್ದು, ಕಣಿವೆನಾಡು ಸಂಪೂರ್ಣವಾಗಿ ಬಿಳಿ ಬಣ್ಣದಿಂದ ಆವರಿಸಿದೆ. ಹಿಮಪಾತದಿಂದ ಶ್ರೀನಗರ-ಜಮ್ಮು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿದೆ. ಎಷ್ಟೋ ಪ್ರವಾಸಿಗರ ವಾಹನಗಳು ಹಿಮಪಾತದಲ್ಲಿ ಸಿಕ್ಕಿಹಾಕಿಕೊಂಡಿವೆ. ಅವುಗಳನ್ನು ತೆರವುಗೊಳಿಸಲಾಗುತ್ತಿದೆ.

ಇನ್ನು ನಿರಂತರ ಹಿಮಪಾತ ಮತ್ತು ಅತ್ಯಂತ ಕಡಿಮೆ ಗೋಚರತೆಯಿಂದಾಗಿ, ಶೇಖ್ ಉಲ್-ಆಲಂ ವಿಮಾನ ನಿಲ್ದಾಣಕ್ಕೆ ಬರುವ ಮತ್ತು ಅಲ್ಲಿಂದ ಹೊರಡುವ ಎಲ್ಲಾ ವಿಮಾನಗಳನ್ನು ರದ್ದುಗೊಳಿಸಲಾಗಿದೆ. ಶುಕ್ರವಾರದಿಂದ ಪ್ರತಿಕೂಲ ಹವಾಮಾನವು ವಿಮಾನ ನಿಲ್ದಾಣದಲ್ಲಿ ವಾಯು ಸಂಚಾರದ ಮೇಲೆ ಪರಿಣಾಮ ಬೀರಿದೆ. ಕಡಿಮೆ ಗೋಚರತೆ ಮತ್ತು ರನ್‌ವೇಯಲ್ಲಿ ಹಿಮದ ಶೇಖರಣೆಗೆ ಆಗುತ್ತಿರುವುದರಿಂದ ಹಾಗೂ ಕೆಟ್ಟ ಹವಾಮಾನದಿಂದಾಗಿ



ಎಲ್ಲಾ ವಿಮಾನಗಳನ್ನು ರದ್ದುಗೊಳಿಸಲಾಗಿದೆ. ರೈಲ್ವೆ ಹಳಿಯಲ್ಲಿ ಭಾರೀ ಹಿಮದ ಶೇಖರಣೆಯಾಗಿದ್ದು, ಅದರ ತೆರವು ಬಳಿಕ ರೈಲು ಸೇವೆ ಪುನರಾರಂಭಿಸಲಾಗುವುದು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಪಿರ್ ಪಂಜಾಲ್ ಸುರಂಗ ಮತ್ತು ಶ್ರೀನಗರ ನಗರದ ನಡುವೆ ನೂರಾರು ವಾಹನಗಳು ಹಿಮಪಾತದಲ್ಲಿ ಸಿಲುಕಿಕೊಂಡಿದ್ದರಿಂದ ಶ್ರೀನಗರ-ಜಮ್ಮು ರಾಷ್ಟ್ರೀಯ ಹೆದ್ದಾರಿಯನ್ನು ಸಹ ಮುಚ್ಚಲಾಗಿದೆ. ಅಧಿಕಾರಿಗಳು ಇಡೀ ದಿನ ವಾಹನಗಳ ತೆರವು ಕಾರ್ಯದಲ್ಲಿ ತೊಡಗಿದ್ದು, ಪ್ರವಾಸಿಗರು ಬೇಕು ಬೇಡಿಕೆಯತ್ತಲೂ ಗಮನ ಹ-ರಿಸುತ್ತಿದ್ದಾರೆ.

ಸಿಎಂ ಒಮರ್ ಅಬ್ದುಲ್ಲಾ ಅವರು ಶನಿವಾರದಂದು ಗಂದರ್‌ಬಾಲ್ ಜಿಲ್ಲೆಗೆ ಭೇಟಿ ನೀಡಿ ಆರೋಗ್ಯ ಮತ್ತು ಇತರ ಅಗತ್ಯ ಸೇವೆಗಳನ್ನು ಒದಗಿಸುವ ಸಿದ್ಧತೆಯನ್ನು ಪರಿಶೀಲಿಸಿದರು.

# ಭರತೇಶ ಮಹಾವಿದ್ಯಾಲಯದಲ್ಲಿ ವಾರ್ಷಿಕ ಕ್ರೀಡಾಕೂಟ



ಬೆಳಗಾವಿ: ಇಲ್ಲಿಯ ಭರತೇಶ ಪಿಯು ಕಾಲೇಜು ಮತ್ತು ಭರತೇಶ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಎರಡು ದಿನಗಳ ವಾರ್ಷಿಕ ಕ್ರೀಡಾಕೂಟಗಳು ಇತ್ತಿಚಿಗೆ ನಡೆದವು. ಈ ಕ್ರೀಡಾಕೂಟವನ್ನು ಬೆಳಗಾವಿ ವಿಭಾಗದ ಜುಡೋ ತರಬೇತಿದಾರ ರೋಹಿಣಿ ಪಾಟೀಲ ಅವರು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ದೈನಂದಿನ ಚಟುವಟಿಕೆಯಲ್ಲಿ ಕ್ರೀಡಯಲ್ಲಿ ಭಾಗವಹಿಸಬೇಕು. ಇದರಿಂದ ಮಾನಸಿಕ ಮತ್ತು ದೈಹಿಕವಾಗಿ ಸದೃಢತೆ ಸಿಗುತ್ತದೆ. ಹಾಗಾಗಿ ಎಲ್ಲರೂ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಅವರು ತಿಳಿಸಿದರು. ಈ ಎರಡು ದಿನಗಳ ಕ್ರೀಡಾಕೂಟದಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಕ್ರೀಡೆಯಲ್ಲಿ ಭಾಗವಹಿಸಿದ್ದರು. ಈ ಕ್ರೀಡಾಕೂಟ ಉದ್ಘಾಟನಾ ಸಮಾರಂಭದಲ್ಲಿ ಭರತೇಶ ಶೀಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿನೋದ ದೊಡ್ಡಣ್ಣವರ, ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಹೀರಾಚಂದ ಕಲಮನಿ, ಸ್ವಾತಿ ಉಪಾಧ್ಯೆ, ಶಾಲಿನಿ ಚೌಗುಲೆ, ಪ್ರಾಚಾರ್ಯ ಸುನಿತಾ ದೇಶಪಾಂಡೆ ಸೇ-ರಿದಂತೆ ಮೊದಲಾದವರು ಉಪಸ್ಥಿತರಿದ್ದರು. ಅರ್ಚನಾ ನಾಲಬಂದ ಕಾರ್ಯಕ್ರಮು ನಿರೂಪಿಸಿ ಕೊನೆಯಲ್ಲಿ ವಂದಿಸಿದರು.

# ಸಾರ್ವಜನಿಕರೇ ಗಮನಿಸಿ- ಸೈಬರ್ ವಂಚನೆಗೊಳಗಾದರೆ ತಕ್ಷಣ 1039ಗೆ ಕರೆ ಮಾಡಿ

ಬೆಂಗಳೂರು : ಸೈಬರ್ ವಂಚನೆಗೆ ಯಾರೇ ಒಳಗಾದರೂ ಕೂಡಲೇ 1039 ಗೆ ದೂರು ನೀಡಿದರೆ ಆ ಕರೆ ಎಲ್ಲಿಂದ ಬಂತು, ಯಾರು ಮಾಡಿದ್ದಾರೆ ಎಂಬುದನ್ನು ಪರಿಶೀಲಿಸಿ, ಸೈಬರ್ ವಂಚನೆಯಿಂದ ನಿಮನ್ನು ರಕ್ಷಿಸಬಹುದು ಎಂದು ನಗರ ಪೊಲೀಸ್ ಆಯುಕ್ತ ದಯಾನಂದ ಅವರು ಸಲಹೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಜಿಟಲ್ ಅರೆಸ್ಟ್, ಹೋಂ ಅರೆಸ್ಟ್ ಎಂದು ಯಾರೇ ಕರೆ ಮಾಡಿದರೆ ತಕ್ಷಣ ಆ ಕರೆಯನ್ನು ಸ್ಥಗಿತಗೊಳಿಸಿ ಸ್ಥಳೀಯ ಪೊಲೀಸರಿಗಾಗಲೀ, ಸೈಬರ್ ಪೊಲೀಸರಿಗಾಗಲೀ ತಿಳಿಸಬೇಕು. ನೀವು ಒಂದು ವೇಳೆ ಅಂತಹ ಕರೆಯನ್ನು ಸ್ವೀಕರಿಸಿ ವಂಚಕರ ಅಕೌಂಟ್ಗೆ ಹಣ ಏನಾದರೂ ಹಾಕಿದ್ದರೆ ಕೂಡಲೇ 1039 ಗೆ ಕರೆ ನೀಡಿ ಮಾಹಿತಿ ನೀಡಿದರೆ ಆ ಖಾತೆಯನ್ನು ಸ್ಥಗಿತಗೊಳಿಸಲಾಗುತ್ತದೆ ಎಂದರು.

ಸೈಬರ್ ಕ್ರೈಂನ್ನು ವರದಿ ಮಾಡುವ ಏಕೈಕ ರಾಷ್ಟ್ರೀಯ ಸಹಾಯವಾಣಿ ಸಂಖ್ಯೆ : 1930 ಆಗಿರುತ್ತದೆ. ಸಾರ್ವಜನಿಕರು






ಯಾವುದೇ ಸೈಬರ್ ಕ್ರೈಂ ವರದಿಗಾಗಿ ಇದೇ ನಂಬರನ್ನು ಸಂಪರ್ಕಿಸಲು ಆಯುಕ್ತರು ಮನವಿ ಮಾಡಿದ್ದಾರೆ.

ಯಾವುದೇ ಪೊಲೀಸರಾಗಲಿ, ಸಿಬಿಐ, ಸಿಐಡಿ, ಇ.ಡಿ. ಅಧಿಕಾರಿಗಳು ನಿಮಗೆ ದೂರವಾಣಿ ಕರೆ ಮಾಡಿ ಡಿಜಿಟಲ್ ಅರೆಸ್ಟ್ ಮಾಡಿದ್ದೇವೆಂದು ಹೇಳುವುದಿಲ್ಲ ಎಂದು ಈಗಾಗಲೇ ಹಲವು ಬಾರಿ ಸ್ಪಷ್ಟಪಡಿಸಿದ್ದರೂ ಪ್ರಜ್ಞಾವಂತರೇ ಸೈಬರ್ ಜಾಲಕ್ಕೆ ಬಿದ್ದು ಕೋಟ್ಯಂತರ ರೂ. ಹಣ ಕಳೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಸಾರ್ವಜನಿಕರು ಜಾಗೃತರಾಗಬೇಕು ಎಂದು ತಿಳಿಸಿದರು. ಯಾವುದೇ ಅಪರಿಚಿತ ವ್ಯಕ್ತಿ ಕರೆ ಮಾಡಿ ನಿಮ ಖಾಸಗಿ ಮಾಹಿತಿಯನ್ನು ಕೇಳಿದರೆ ಹಂಚಿಕೊಳ್ಳಬೇಡಿ, ಮೋಸದ ಜಾಲಕ್ಕೆ ಬೀಳಿಸಿಕೊಳ್ಳಲು ಯತ್ನಿಸಿದಾಗ ತಕ್ಷಣ ನೀವು ಆ ಬಗ್ಗೆ ಎಚ್ಚೆತ್ತುಕೊಂಡು ಸ್ಥಳೀಯ ಪೊಲೀಸರಿಗೆ ತಿಳಿಸಬೇಕು. ಸೈಬರ್ ವಂಚಕರ ಜಾಲಕ್ಕೆ ಒಳಗಾಗಬೇಡಿ ಎಂದು ಸಲಹೆ ನೀಡಿದರು.

ಒಂದು ವೇಳೆ ನಿಮ ವಿರುದ್ಧ ದೂರು ಇದ್ದರೆ ನಿಮಗೆ ಪೊಲೀಸರು ನೋಟೀಸ್ ಕೊಟ್ಟು, ಠಾಣೆಗೆ ಕರೆಸಿಕೊಂಡು, ವಿಚಾರಣೆ ಮಾಡುತ್ತೇವೆಯೇ ಹೊರತು ಡಿಜಿಟಲ್ ಅರೆಸ್ಟ್, ಹೋಂ ಅರೆಸ್ಟ್ ಅಂತಹ ಕಾನೂನು ನಮಲ್ಲಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ನಗರದಲ್ಲಿ ಒಟ್ಟು 9 ಸೈಬರ್ ಠಾಣೆಗಳಿವೆ. ಈ ಠಾಣೆಗಾಗಲೀ ಅಥವಾ ಸ್ಥಳೀಯ ಪೊಲೀಸ್ ಠಾಣೆಗಾಗಲಿ ಸೈಬರ್ ವಂಚನೆ ಬಗ್ಗೆ ನೀವು ತಕ್ಷಣ ತಿಳಿಸಿದರೆ ತನಿಖೆಗೆ ಸಹಕಾರವಾಗುತ್ತದೆ. ವೈಯಕ್ತಿಕ ಬ್ಯಾಂಕ್ ವಿವರಗಳನ್ನು ಯಾರಿಗೂ ಶೇರ್ ಮಾಡಬೇಡಿ ಎಂದು ಆಯುಕ್ತರು ಸಲಹೆ ಮಾಡಿದ್ದಾರೆ.

# ಜೀವನವನ್ನು ನಮ್ಮ ಹಿರಿಯರು ಹೇಳುವಂತೆ ಅರ್ಥಪೂರ್ಣ, ತೃಪ್ತಿಕರ- ಸಂಪೂರ್ಣವಾಗಿರಬೇಕು -ಡಾ.ಪ್ರಶಾಂತ ಕಟಕೋಳ

ವಿಜಯಪುರ : ಜೀವನವನ್ನು ನಮ್ಮ ಹಿರಿಯರು ಹೇಳುವಂತೆ ಅರ್ಥಪೂರ್ಣ, ಸದುದ್ದೇಶಿಸಿತ, ತೃಪ್ತಿಕರ ಹಾಗೂ ಸಂಪೂರ್ಣವಾಗಿರಬೇಕು ಎಂದು ಡಾ.ಪ್ರಶಾಂತ ಕಟಕೋಳ ಹೇಳಿದರು.

ನಗರದ ಜ್ಞಾನಯೋಗಾಶ್ರಮದಲ್ಲಿ ನಡೆಯುತ್ತಿರುವ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಗುರುನಮನ ಮಹೋತ್ಸವದಲ್ಲಿ ನಾಲ್ಕನೇ ಗೋಷ್ಠಿ “ಯೋಗ ಜೀವನ” ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನ ಇತರರಿಗೆ ಎಷ್ಟು ಉಪಯುಕ್ತವಾಗಿದ್ದಾನೆ ಎನ್ನುವುದರ ಮೇಲೆ ಆತನ ಜೀವನದ ಮೌಲ್ಯ ತಿಳಿಯುತ್ತದೆ. ಹೊರತು ಆತ ಎಷ್ಟು ಹಣ ಮಾಡಿದ್ದಾನೆ, ಎಷ್ಟು ಎತ್ತರಕ್ಕೆ ಬೆಳೆದಿದ್ದಾನೆ ಎನ್ನುವುದರ ಮೇಲೆ ಅಲ್ಲ. ಮನುಷ್ಯ ತನ್ನ ಸ್ವಹಿತಕ್ಕಾಗಿ ಬಳಸುವುದನ್ನು ಕಾಮ ಎಂದು ಕರೆಯಲಾಗಿದೆ. ಪರರ ಉಪಯೋಗಕ್ಕಾಗಿ ಬಳಸುವುದನ್ನು ಮೋಕ್ಷ ಎನ್ನಲಾಗಿದೆ ಹಾಗಾಗಿ ನಾವು ಪರೋಪಕಾರಿ ಜೀವನವನ್ನು ಅಳವಡಿಸಿಕೊಂಡು ಬದುಕು ಸುಂದರಗೊಳಿಸಿಕೊಳ್ಳಬೇಕು ಎಂದರು.

ಮನಸ್ಸಿನಲ್ಲಿ ಜ್ಞಾನಿ ಮತ್ತು ಅಜ್ಞಾನಿಗಳ ವಾಸವಿರುತ್ತದೆ. ನಮ್ಮ ತಲೆಯೊಳಗೆ ಎಲ್ಲವನ್ನು ಹಾಕಿಕೊಳ್ಳಬಾರದು. ನಮಗೆ ಯಾವುದು ಅವಶ್ಯವೋ ಅದನ್ನು ಮಾತ್ರ ತಲೆಯೊಳಗೆ ಹಾಕಿಕೊಳ್ಳಬೇಕು. ಅದಕ್ಕಾಗಿ ನಮಗೆ ಜ್ಞಾನ ಅವಶ್ಯ. ಆ ಜ್ಞಾನವನ್ನು ನಾವು ವಿದ್ಯಾರ್ಥಿ ಜೀವನದಲ್ಲಿ ಸಂಪಾದಿಸಿಕೊಳ್ಳಬೇಕು. ವಿದ್ಯಾರ್ಥಿ ಜೀವನದಲ್ಲಿ ಜ್ಞಾನಾರ್ಜನೆ ಅತೀ ಮುಖ್ಯವಾಗುತ್ತದೆ. ಕಾಮ, ಕ್ರೋಧ, ಮಧ ಮೋಹವನ್ನು ಮನಸ್ಸಿನಿಂದ



ದೂರ ಇಟ್ಟು ಅಧ್ಯಯನ ಮಾಡಬೇಕು ಎಂದರು.

ಮನಸ್ಸು ಸ್ವಚ್ಚವಾಗಿ ಇಟ್ಟುಕೊಳ್ಳುವುದು ಎಷ್ಟು ಮುಖ್ಯ ಎನ್ನುವುದನ್ನು ಶ್ರೀ ಸಿದ್ಧೇಶ್ವರ ಅಪ್ಪಾವರು ತಮ್ಮ ಪ್ರವಚನಗಳ ಮೂಲಕ ತಿಳಿಸಿಕೊಟ್ಟಿದ್ದಾರೆ. 'ನಾ ಯಾವಾಗಲು ಆರಾಮ ಇದ್ದಿನಿ ನಿನಗ ನೀನೇ ಅಂ-ದುಕೋ' ಎಷ್ಟು ಸಂತೋಷದಿಂದ ಇರತಿ ನೋಡು ಅಂತ ಅಪ್ಪಾವರು ಹೇಳುತ್ತಿದ್ದರು ಅವರ ಮಾತು ಎಷ್ಟು ಸತ್ಯ ನೋಡಿ. ಜೀವನವನ್ನು ಆ ಭಗವಂತನಿಗೆ ಒಪ್ಪಿಸಿದರೇ ಮಗು ಹೇಗೆ ತಾಯಿಯ ತೊಡೆಯ ಮೇಲೆ ಸಂತೋಷದಿಂದ ಮಲಗಿರುತ್ತದೆಯೋ ಅಷ್ಟು ಸಂತೋಷ ನಮಗಾಗುತ್ತದೆ. ಹಿಂದೆ ಋಷಿಮುನಿಗಳು ಆಸನಗಳನ್ನು ಮಾಡಿದರೆ ದೇಹ ಸ್ಥಿರವಾಗಿರುತ್ತದೆ. ಉಸಿರಾಟ ಯಾವಾಗ ಜೋರಾಗಿರುತ್ತದೆಯೋ ಆಗ ಮನಸ್ಸು ಚಂಚಲವಾಗಿರುತ್ತದೆ. ಉಸಿರಾಟ ಸಮಾದಾನವಾಗಿದ್ದಾಗ ಮನಸ್ಸು ಸ್ಥಿರ ಇರುತ್ತದೆ ಎನ್ನುವುದನ್ನು ಅವರು ಆಗಲೇ ಕಂಡುಕೊಂಡಿದ್ದರು. ಅದುವೇ ಯೋಗ ಜೀವನ. ನಾವು ನಮ್ಮ ಯೋಗ ಕಲಿಸಬೇಕು, ಸಂಸ್ಕಾರ ಕಲಿಸಬೇಕು. ಮಕ್ಕಳಿಗೆ ಸಂಸ್ಕಾರವೇ ಅವರ ಆಸ್ತಿಯಾಗಿರುವಂತೆ ಬೆಳೆಸಬೇಕು ಎಂದು ಹೇಳಿದರು.

ಯಾವಾಗ ನಿನ್ನ ಇಚ್ಛಾಪೂರ್ತಿಯಾಗಿ ಕೆಲಸ ಮಾಡುವುದನ್ನು ನೀನು ನಿಲ್ಲಿಸುತ್ತಿಯೋ ಆಗ ನೀನು ಸನ್ಯಾಸಿಯಾಗುತ್ತಿ ಎಂದು ಶ್ರೀಕೃಷ್ಣ ಅರ್ಜುನನಿಗೆ ಗೀತೋಪದೇಶ ಮಾಡುವಾಗ ಹೇಳಿದ. ಅದು ಎಷ್ಟು ಸತ್ಯ ಎನ್ನುವುದನ್ನು ನಾವು ಶ್ರೀ ಸಿದ್ಧೇಶ್ವರ ಅಪ್ಪಾವರನ್ನು ನೋಡಿ ತಿಳಿದುಕೊಳ್ಳಬಹುದು.

ನರರೋಗ ಶಸ್ತ್ರ ಚಿಕಿತ್ಸಕ ಡಾ.ಮಯೂರ ಕಾಕು ಮಾತನಾಡಿ, ನನಗೆ ಬಾಲ್ಯದಿಂದಲೇ ಯೋಗ ಮಾಡುವುದನ್ನು ನಮ್ಮ ಅಜ್ಜಿ ಕಲಿಸಿಕೊಟ್ಟಿದ್ದರು. ಶಸ್ತ್ರ ಚಿಕಿತ್ಸೆ ಅವಶ್ಯವಾಗಿದ್ದ ವ್ಯಕ್ತಿಗೆ ನಾನು ಯೋಗದ ಬಗ್ಗೆ ತಿಳಿಸಿ ಯೋಗ ಮಾಡಿಸಲು ಶುರು ಮಾಡಿದೆ. ಅಲ್ಲಿಂದ ಇಲ್ಲಿವರೆಗೂ 13 ವರ್ಷಗಳಾಗಿವೆ ಅವರಿಗೆ ಶಸ್ತ್ರ ಚಿಕಿತ್ಸೆ ಅವಶ್ಯಕತೆ ಬಿದ್ದಿಲ್ಲ. ಹಾಗಾಗಿ ಎಲ್ಲರೂ ಯೋಗವನ್ನು ಅಭ್ಯಾಸವಾಗಿ ರೂಡಿಸಿಕೊಳ್ಳಿ ಅದರಿಂದ ಯಾವುದೇ ರೋಗಗಳು ಬರುವುದಿಲ್ಲ ಎಂದರು.

ಪ್ಲಾಸ್ಟಿಕ್‌ನಿಂದ ನೆಲ-ಜಲ ಎಲ್ಲವೂ ಕಲುಶಿತವಾಗುತ್ತಿದೆ. ಪ್ಲಾಸ್ಟಿಕ್ ಬಳಸುವುದನ್ನು ನಾವು ನಿಲ್ಲಿಸಬೇಕು. ನಾವು ಹೆಚ್ಚು ಗಿಡಮರಗಳನ್ನು ಬೆಳೆಸಬೇಕು. ಇದರಿಂದ ನಮಗೆ ಶುದ್ಧ ಗಾಳಿ, ಆಮ್ಲಜನಕ ಸಿಗುತ್ತದೆ. ಅದರೊಟ್ಟಿಗೆ ಯೋಗವನ್ನು ರೂಡಿಸಿಕೊಳ್ಳಬೇಕು. ದೇಹ ಶುದ್ಧಿಗೆ, ಆತ್ಮಶುದ್ಧಿಗೆ ಯೋಗ ಅವಶ್ಯಕ.

ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಮಾತನಾಡಿ, ವಿಜಯಪುರ ಎಂದರೆ ಗೋಲಗುಮ್ಮಟ ಎಂದು ಗುರುತಿಸುತ್ತಿದ್ದರು. ಆದರೆ ಈಗ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳು ಜ್ಞಾನದ ಕ್ರಾಂತಿಯಿಂದ ವಿಜಯಪುರ ಎಂದರೆ ಸಿದ್ಧೇಶ್ವರ ಸ್ವಾಮೀಜಿಗಳು ಎನ್ನುವಂತೆ ಜ್ಞಾನದ ದೀವಿಗೆ ಹಚ್ಚಿದ್ದಾರೆ. ದೇಹಕ್ಕೆ ವಯಸ್ಸಾದರೂ, ಮನಸ್ಸನ್ನು ಹಗುರವಾಗಿ ಇಟ್ಟುಕೊಳ್ಳುವುದೇ ಯೋಗ ಜೀವನ ಎಂದು ನಮಗೆ ಸಿದ್ಧೇಶ್ವರ ಸ್ವಾಮೀಜಿಗಳು ತಿಳಿಸಿದ್ದಾರೆ.

ಸಿದ್ಧೇಶ್ವರ ಅಪ್ಪಗೋಳು ಎಲ್ಲೂ ಹೋಗಿಲ್ಲ ನಮ್ಮೆಲ್ಲರ ಮನಸ್ಸಿನಲ್ಲಿಯೇ ಇದ್ದಾರೆ. ಅವರು ಹೇಳಿದಂತೆ ಯುವಕರಲ್ಲಿ ಸಂಸ್ಕಾರದ ಬೀಜವನ್ನು ಬಿತ್ತಬೇಕು. ಆಗ ಅವರು ದೊಡ್ಡ ಸಾಧನೆ ಮಾಡಬಲ್ಲರು. ಯಾರು ಸಂತೋಷವನ್ನು ನಿರಂತರವಾಗಿ ಹಂಚುತ್ತಾರೋ ಅವರೇ ಸಂತರು ಎಂದು ಸಿದ್ಧೇಶ್ವರ ಅಪ್ಪಾವರು ಹೇಳಿದ್ದಾರೆ. ನಾವು ನಮ್ಮಲ್ಲಿರುವ ಮದ, ಮೋಹ, ಮತ್ಸರಗಳನ್ನು ತೆಗೆದು ಹಾಕಿ ಸಂತೋಷದ ಜೀವನ ನಡೆಸಿದರೆ ಅದೇ ಯೋಗ ಜೀವನ.

ಗದಗನ ಜಗದ್ಗುರು ಶ್ರೀ ಅಭಿನವ ಶಿವಾನಂದ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳು ಭಗವಂತನ ಸ್ವರೂಪಿಯಾಗಿ ಮನುಕುಲದ ಉದ್ಧಾರಕ್ಕಾಗಿ ಮನುಷ್ಯ ಜನ್ಮ ತಾಳಿ ಬಂದಿದ್ದರು. ಅವರ ಶಕ್ತಿ ದೈವದತ್ತವಾಗಿ ಬಂದಿರುವಂತಹದ್ದು, ಅದು ಎಲ್ಲರಲ್ಲೂ ಬರಲು ಸಾಧ್ಯವಿಲ್ಲ. ಸಿದ್ಧೇಶ್ವರರು ವೈರಾಗ್ಯದ ಪ್ರತಿನಿಧಿ ಅವರಲ್ಲಿ ವೈರಾಗ್ಯ ಬರಲು ಮಲ್ಲಿಕಾರ್ಜುನ ಮಹಾಸ್ವಾಮೀಜಿಗಳು ಕಾರಣರು. ಸಂಪತ್ತು ಸಿಗುತ್ತದೆ ಆದರೆ ಗುರು ಸಿಗುವುದಿಲ್ಲ ಗುರು ಸಿಕ್ಕಾಗ ನಾವು ಎಲ್ಲವನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ಶ್ರೀ ಸಿದ್ಧೇಶ್ವರ ಅಪ್ಪಾವರು ಗುರು ಸೇವೆ, ಗುರು ಪೂಜೆ ಎರಡನ್ನು ಮಾಡಿದರು. ಅದಕ್ಕಾಗಿಯೇ ಮಲ್ಲಿಕಾರ್ಜುನ ಸ್ವಾಮೀಜಿಗಳು ಅವರನ್ನು ತಮ್ಮ ಪಕ್ಕದಲ್ಲಿಯೇ ಉಳಿಸಿಕೊಂಡರು. ಸರ್ವ ಸಮಾಜವನ್ನು ಮೇಲು-ಕೀಳು ಎನ್ನದೇ ಎಲ್ಲರನ್ನು ಉದ್ಧಾರ ಮಾಡಿದಂತಹವರು ಯಾರಾದರೂ ಇದ್ದರೆ, ಅದು ಶಿವಾನಂದರು-ಸಿದ್ಧಾರೂಡರು.

ವಿಜಯಪುರದ ಜನ ಪುಣ್ಯವಂತರು ಇಬ್ಬರು ಗುರುಗಳನ್ನು ಪಡೆದಿದ್ದಿರಿ. ಎಲ್ಲರೂ ಶ್ರೀ ಸಿದ್ಧೇಶ್ವರ ಶ್ರೀಗಳ ತತ್ವ ಆದರ್ಶಗಳನ್ನು ಪಾಲಿಸಿ ಮೈಗೂಡಿಸಿಕೊಳ್ಳಬೇಕು. ಆಗ ನಾವು ನಮ್ಮಲ್ಲೇ ಸಿದ್ಧೇಶ್ವರರನ್ನು ಕಾಣಬಹುದು ಎಂದರು.

ಜ್ಞಾನಯೋಗಾಶ್ರಮದ ಅಧ್ಯಕ್ಷಗುರುಗಳು ಮಾತನಾಡಿ, ಯೋಗ ಜೀವನ ನಮಗೆ ಎಷ್ಟು ಮುಖ್ಯ ಎನ್ನುವುದನ್ನು ಶ್ರೀ ಸಿದ್ಧೇಶ್ವರ ಅಪ್ಪಾವರು ತಿಳಿಸಿದ್ದಾರೆ. ಆ ಯೋಗ ಜೀವನದ ಮಹತ್ವವನ್ನು ಗುರುಗಳು ತಿಳಿಸಿಕೊಟ್ಟಿದ್ದಾರೆ. ಅವರೆಲ್ಲರ ಮೇಲು ಶ್ರೀ ಸಿದ್ಧೇಶ್ವರರ ಆಶೀರ್ವಾದ ಇರಲಿದೆ ಎಂದು ಹೇಳಿದರು.

ಹರಿಹರ ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ಮಾತನಾಡಿ, ಅಷ್ಟಾಂಗ ಯೋಗ ಜೀವನದ ಕುರಿತಾಗಿ ವಿವರಿಸಿ ಎಲ್ಲ ಭಕ್ತ-ರಿಗೆ ಪ್ರಾಯೋಗಿಕವಾಗಿ ಯೋಗ ಹಾಗೂ ಧ್ಯಾನ ಮಾಡಿಸಿದರು.

ಜ್ಞಾನೋಗಾಶ್ರಮದ ಶ್ರದ್ಧಾನಂದ ಸ್ವಾಮೀಜಿಗಳು ಯೋಗ ಜೀವನದ ಕುರಿತು ಕವನ ವಾಚನ ಮಾಡಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಶಾಸಕ ಹಣಮಂತ ನಿರಾಣಿ, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೇಟ್ಟಿ ಸೇರಿದಂತೆ ಆಶ್ರಮದ ಭಕ್ತರು, ಸ್ವಾಮೀ-ಜಿಗಳು ಉಪಸ್ಥಿತರಿದ್ದರು.

# ಹೊಸ ವರ್ಷದ ಸ್ವಾಗತಕ್ಕೆ ಬೆಂಗಳೂರು ಸಜ್ಜು- ಪೊಲೀಸರೂ ಕೂಡ ರೆಡಿ

ಬೆಂಗಳೂರು,ಡಿ : ಹೊಸ ವರ್ಷಾಚರಣೆ ಸಂದರ್ಭದಲ್ಲಿ ಸಾರ್ವಜನಿಕರು, ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಯನ್ನು ಆದ್ಯತೆಯನ್ನಾಗಿ ಪರಿಗಣಿಸಿ ನಗರಾದ್ಯಂತ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಅಧಿಕಾರಿಗಳೂ ಸೇರಿದಂತೆ 11,830 ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ಬಂದೊಬಸ್ತ್ಗಾಗಿ ನಿಯೋಜಿಸಲಾಗಿದೆ.

ನಗರಾದ್ಯಂತ 112 ಕೆಎಸ್‌ಆರ್ಪಿ-ಸಿಎಆರ್ ತುಕಡಿಗಳನ್ನು ಹಗಲು ಮತ್ತು ರಾತ್ರಿ ವೇಳೆ ಭದ್ರತೆಗೆ ನಿಯೋಜಿಸಲಾಗಿದೆ. ಅಲ್ಲದೆ ನಗರದಲ್ಲಿ ಈಗಾಗಲೇ ಅಳವಡಿಸಿರುವ ಸಿಸಿಟಿವಿಗಳ ಜೊತೆಗೆ ಹೆಚ್ಚುವರಿಯಾಗಿ 817 ಸಿಸಿ ಕ್ಯಾಮರಾಗಳನ್ನು ಪ್ರಮುಖ ಸ್ಥಳಗಳಲ್ಲಿ ಅಳವಡಿಸಲಾಗಿದೆ.

**1 ಗಂಟೆವರೆಗೂ ಅವಕಾಶ :**
ಸಾರ್ವಜನಿಕವಾಗಿ ಹೊಸ ವರ್ಷಾಚರಣೆಗೆ ಸರ್ಕಾರದ ಅನುಮತಿ ಇದ್ದು, ಮಧ್ಯರಾತ್ರಿ 1 ಗಂಟೆವರೆಗೆ ಮಾತ್ರ ಹೊಸ ವರ್ಷಾಚರಣೆ ಕಾರ್ಯಕ್ರಮಗಳನ್ನು ನಡೆಸಲು ಅನುಮತಿ ನೀಡಲಾಗಿದೆ.ಜೊತೆಗೆ ಡ್ರೋನ್ ಕ್ಯಾಮರಾ, ವಾಚ್ ಟವರ್, ವುಮೆನ್ಸ ಸೇಫ್ಟಿ ಐಲ್ಯಾಂಡ್ ಹಾಗೂ ಹೆಲ್ತ್ ಸೆಂಟರ್ಗಳನ್ನು ತೆರೆಯಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ದಯಾನಂದ ಅವರು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

**ಪಿಕೇಟಿಂಗ್ ಪಾಯಿಂಟ್ :** ಪ್ರಮುಖವಾಗಿ ಹೊಸ ವರ್ಷ ಆಚರಣೆ ಸ್ಥಳಗಳಾದ ಎಂ.ಜಿ ರಸ್ತೆ-ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಸೆಂಟ್ ಮಾರ್ಕ್ಸ ರಸ್ತೆ, ಕಬ್ಬನ್ಪಾರ್ಕ್, ಟ್ರಿನಿಟಿ ಸರ್ಕಲ್, ಫೀನಿಕ್ಸ ಮಾಲ್, ಕೋರಮಂಗಲ, ಇಂದಿರಾನಗರ 100 ಅಡಿ ರಸ್ತೆ, ಪ್ರಮುಖ ಸ್ಟಾರ್ ಹೋಟೆಲ್ಗಳು,





ಪಬ್ಗಳು, ಕ್ಲಬ್ಗಳು ಮುಂತಾದ ಸ್ಥಳಗಳಲ್ಲಿ ಜನಸಂದಣಿಯನ್ನು ನಿಯಂತ್ರಿಸಲು ಸೂಕ್ತ ಬಂದೋಬಸ್ತ್ ಪಿಕೇಟಿಂಗ್ ಪಾಯಿಂಟ್ಗಳನ್ನು ನೇಮಕ ಮಾಡಲಾಗುವುದು ಎಂದರು.

**ಕೇಂದ್ರ ವಿಭಾಗದಲ್ಲಿ ಖಾಕಿ ಕಣ್ಗಾವಲು :** ವಿಶೇಷವಾಗಿ ಕೇಂದ್ರ ವಿಭಾಗದ ಬ್ರಿಗೇಡ್ ರಸ್ತೆ, ಎಂ.ಜಿ.ರಸ್ತೆ, ಒಪೆರಾ ಜಂಕ್ಷನ್, ರಿಚಂಡ್ ರಸ್ತೆ, ರೆಸಿಡೆನ್ಸಿ ರಸ್ತೆ ವ್ಯಾಪ್ತಿಯಲ್ಲಿ 5 ಡಿಸಿಪಿ, 18 ಎಸಿಪಿ, 41 ಪೊಲೀಸ್ ಇನ್‌ಸಪೆಕ್ಟರ್ ಸೇರಿದಂತೆ ಒಟ್ಟು 2572 ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ನಗರದ ಪ್ರಮುಖ ಸ್ಥಳಗಳನ್ನು ಶ್ವಾನದಳ ಮತ್ತು 16 ಎ.ಎಸ್. ಚೆಕ್ ತಂಡಗಳಿಂದ ತಪಾಸಣೆ ಕೈಗೊಳ್ಳಲಾಗುತ್ತದೆ ಎಂದು ಅವರು ವಿವರಿಸಿದರು.

**ಸಭೆ ನಡೆಸಿ ಸೂಚನೆ :**
ಇತ್ತೀಚೆಗೆ ಪೊಲೀಸ್ ಆಯುಕ್ತರ ಕಛೇರಿಯಲ್ಲಿ ನೂತನ ವರ್ಷಾಚರಣೆಯ ಸಂಬಂಧ ಬಿ.ಬಿ.ಎಂ.ಪಿ., ಆರೋಗ್ಯ ಇಲಾಖೆ, ಅಬಕಾರಿ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಅಗ್ನಿಶಾಮಕ ಇಲಾಖೆ, ಬೆಸ್ಕಾಂ, ಬಿ.ಎಂ.ಆರ್.ಸಿ.ಎಲ್ ಹಾಗೂ ಇತರೆ ಇಲಾಖೆಗಳು/ಸಂಸ್ಥೆಗಳೊಂದಿಗೆ ಸಭೆಯನ್ನು ನಡೆಸಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದರು.

**ನಿರ್ಗಮಕ್ಕೆ ಅವಕಾಶವಿಲ್ಲ :**
ಕಳೆದ ವರ್ಷ ವರ್ಷಾಚರಣೆ ಮುಗಿಸಿಕೊಂಡು ಸಾರ್ವಜನಿಕರು ಹಿಂದಿರುಗುವ ಸಂದರ್ಭದಲ್ಲಿ ಎಂ.ಜಿ.ರಸ್ತೆಯ ಮೆಟ್ರೊ ನಿಲ್ದಾಣದಲ್ಲಿ ಹೆಚ್ಚಿನ ಜನಸಂದಣಿಯಾಗಿ ನೂಕುನುಗ್ಗಲು ಪರಿಸ್ಥಿತಿ ನಿರ್ಮಾಣವಾದ್ದರಿಂದ ಈ ವರ್ಷ ಡಿ.31ರ ರಾತ್ರಿ 11 ಗಂಟೆಯಿಂದ ಬೆಳಗಿನ ಜಾವ 2 ಗಂಟೆವರೆಗೆ ಎಂ.ಜಿ.ರಸ್ತೆಯ ಮೆಟ್ರೊ ನಿಲ್ದಾಣದ ಮೂಲಕ ಪ್ರಯಾಣಿಕರು ನಿರ್ಗಮಿಸಲು ಅವಕಾಶವಿರುವುದಿಲ್ಲ ಎಂದು ಆಯುಕ್ತರು ಸ್ಪಷ್ಟಪಡಿಸಿದ್ದಾರೆ. ಬದಲಾಗಿ ಸಾರ್ವಜನಿಕರು ಟ್ರಿನಿಟಿ ಸರ್ಕಲ್ ಹಾಗೂ ಕಬ್ಬನ್ಪಾರ್ಕ್ ಮೆಟ್ರೊ ನಿಲ್ದಾಣದ ಮೂಲಕ ನಿರ್ಗಮಿಸಲು ಕೋರಿದ್ದಾರೆ.

**ಮಾಲ್ಗಳ ಬಳಿ ಪೊಲೀಸ್ ನಿಯೋಜನೆ :**
ನಗರದ ಇತರೆ ವಿಭಾಗಗಳ ಪ್ರಮುಖ ಹೊಸ ವರ್ಷಾಚರಣೆಯ ಸ್ಥಳಗಳಾದ ಫೀನಿಕ್?ಸ ಮಾಲ್, ಓರಾಯನ್ ಮಾಲ್ ಹಾಗೂ ನಗರದ ಇತರೆ ಪ್ರಮುಖ ಸ್ಥಳಗಳಲ್ಲಿ ಅಗತ್ಯ ಮುನ್ನೆಚ್ಚರಿಕೆ ಮತ್ತು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿಕೊಳ್ಳಲಾಗುವುದು. ಕೋರಮಂಗಲ, ಇಂದಿರಾನಗರ, ಮಾರತ್ತಳ್ಳಿ, ಹೆಚ್.ಆರ್.ಬಿ.ಆರ್ ಲೇಔಟ್, ಏರ್ ಪೋರ್ಟ್ ರಸ್ತೆ, ವೈಟ್‌ಫೀಲ್?ಡ ಪ್ರದೇಶಗಳಲ್ಲಿ ನಡೆಯಲಿರುವ ಹೊಸ ವರ್ಷಾಚರಣೆಯ ಬಂದೋಬಸ್ತ್ ಕರ್ತವ್ಯಕ್ಕೆ 4 ಡಿಸಿಪಿ, 6-ಎ.ಸಿ.ಪಿ, 18-ಪೊಲೀಸ್ ಇನ್?ಸಪೆಕ್ಟರ್ ಸೇರಿದಂತೆ 2414 ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಅವರು ಹೇಳಿದರು.

**ಸಾರ್ವಜನಿಕರಿಗೆ ಸಲಹೆ-ಸೂಚನೆ :**
ಹೊಸ ವರ್ಷಾಚರಣೆಯನ್ನು ಶಾಂತಿಯುತವಾಗಿ ಆಚರಿಸಬೇಕು. ಕಾನೂನು ನಿಯಮಗಳನ್ನು ಪಾಲನೆ ಮಾಡಿ, ನಿಯಮಿತವಾಗಿ ವಾಹನ ಚಾಲನೆ ಮಾಡಿ ಮತ್ತು ಸಂಚಾರಿ ನಿಮಯಗಳನ್ನು ಕಡ್ಡಾಯವಾಗಿ ಪಾಲಿಸುವುದರ ಜೊತೆಗೆ ಸಾರ್ವಜನಿಕರು ಶಾಂತಿ ಮತ್ತು ಶಿಸ್ತನ್ನು ಕಾಪಾಡಲು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರ ಜೊತೆ ಸಹಕ-ರಿಸುವಂತೆ ಕೋರಲಾಗಿದೆ. ತುರ್ತು ಸಂದರ್ಭಗಳಲ್ಲಿ 112 ಅಥವಾ ಸಮೀಪದ ಪೊಲೀಸ್ ಠಾಣೆಯನ್ನು/ಪೊಲೀಸ್ ಕಿಂ-ಯೋಸ್ಕ್ ಸಂಪರ್ಕಿಸಿ, ಸಾರ್ವಜನಿಕರು ತಮ ಚಲನವಲನಗಳ ಬಗ್ಗೆ ಕುಟುಂಬಕ್ಕೆ ಮಾಹಿತಿಯನ್ನು ಆಗಿದ್ದಾಂಗ್ಗೆ ನೀಡುತ್ತಿರಿ, ಇತರೆ ಧರ್ಮದವರಿಗೆ ಘಾಸಿಯಾಗದಂತೆ ವರ್ಷಾಚರಣೆಯನ್ನು ಆಚರಿಸಿ, ಭದ್ರತಾ ಸಿಬ್ಬಂದಿಗಳಾದ ಪೊಲೀಸ್, ಹೋಂ ಗಾರ್ಡ್, ಜೊತೆ ಸಹಕರಿಸಿ, ಆಟೋ ಮತ್ತು ಕ್ಯಾಬ್ಗಳಲ್ಲಿ ಪ್ರಯಾಣಿಸುವಾಗ ಅಧಿಕೃತವೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ ಜೊತೆಗೆ ಪೊಲೀಸರು ಸೂಚಿಸಿರುವ ರಸ್ತೆಗಳಲ್ಲಿಯೇ ಸಂಚರಿಸಿ ಎಂದು ಸಲಹೆ ನೀಡಿದ್ದಾರೆ.

**ಮದ್ಯ ಸೇವಿಸಿ ಜೀವಕ್ಕೆ ಆಪತ್ತು ತಂದುಕೊಳ್ಳಬೇಡಿ :** ಮದ್ಯಪಾನ ಮತ್ತು ಮಾದಕ ವಸ್ತುಗಳನ್ನು ಸೇವಿಸಿ ವಾಹನ ಚಾಲನೆ ಮಾಡಬೇಡಿ, ಇದು ಕಾನೂನು ಬಾಹಿರವಾಗಿದ್ದು, ಜೀವಕ್ಕೆ ಹಾನಿ ತಂದುಕೊಳ್ಳಬೇಡಿ ಎಂದು ಆಯುಕ್ತರು ಕಿವಿಮಾತು ಹೇಳಿದ್ದಾರೆ.

**ಮಾಲೀಕರಿಗೆ ಸೂಚನೆ :**
ಕ್ಲಬ್ಗಳು, ಪಬ್ಗಳು ಮತ್ತು ರೆಸ್ಟೋರೆಂಟ್ಗಳು ಹೊಸ ವರ್ಷಾಚರಣೆ ನಿಮಿತ್ತ ಸದಸ್ಯರುಗಳು ಮತ್ತು ಅತಿಥಿಗಳಿಗೆ ಔತಣ ಕೂಟ, ಇವೆಂಟ್ಗಳಿಗೆ ಅನುಮತಿ ನೀಡುವಾಗ ನಿಗಧಿತ ಮಿತಿಯನ್ನು ಮೀರದಂತೆ ಪಾಸ್ಗಳನ್ನು ವಿತ-ರಿಸುವಂತೆ ಮಾಲೀಕರಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಆಯುಕ್ತರು ತಿಳಿಸಿದರು.

**73 ಮಂದಿ ಡ್ರಗ್ ಪೆಡ್ಲರ್ ಬಂಧನ :**
ನೂತನ ವರ್ಷಾಚರಣೆ ಸಂದರ್ಭದಲ್ಲಿ ಮಾದಕ ವಸ್ತು ರೇವ್ ಪಾರ್ಟಿಗಳು (ಡ್ರಗ್ಸ ಸರಬರಾಜು) ಆಗುವುದನ್ನು ನಿಯಂತ್ರಿಸಲು ನಗರದ ಎಲ್ಲಾ ಡಿ.ಸಿ.ಪಿ, ಸಿಸಿಬಿ ಅಧಿಕಾರಿಗಳು ವಿಶೇಷ ಕಾರ್ಯಾಚರಣೆ ಕೈಗೊಂಡಿದ್ದು, ಈ ತಿಂಗಳಲ್ಲಿ 3 ವಿದೇಶಿ ಡ್ರಗ್ಸ ಪೆಡ್ಲರ್ ಸೇರಿದಂತೆ 73 ಮಂದಿ ಆರೋಪಿಗಳನ್ನು ಬಂಧಿಸಿ 25,20,65,000 ರೂ. ಮೌಲ್ಯದ 220.501 ಕೆ.ಜಿ ಡ್ರಗ್ಸ ವಶಪಡಿಸಿಕೊಂಡು 54 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದರು.

## ಹೊಸ ವರ್ಷದ ಸಂಭ್ರಮಾಚರಣೆ: ಮೆಟ್ರೋ ಸೇವೆ ಅವಧಿ ವಿಸ್ತರಣೆ



ಬೆಂಗಳೂರು: ಹೊಸ ವರ್ಷದ ಪಾರ್ಟಿ ಮೂಡ್‌ನಲ್ಲಿರುವವರಿಗೆ 'ನಮ್ಮ ಮೆಟ್ರೋ' ಗುಡ್ ನ್ಯೂಸ್ ಕೊಟ್ಟಿದೆ. 2024 ಕಳೆದ 2025ರ ಹೊಸ ವರ್ಷಕ್ಕೆ ಕಾಲಿಡಲು ಇನ್ನೇನು ಕೆಲವೇ ದಿನಗಳು ಬಾಕಿ ಇವೆ. ಈ ವೇಳೆ ಬೆಂಗಳೂ-ರಿನ ಹಲವೆಡೆ ಸಂಭ್ರಮಾಚರಣೆಗಳು ನಡೆಯುತ್ತವೆ. ಅದರಲ್ಲೂ ಬ್ರಿಗೇಡ್ ರೋಡ್‌ನಲ್ಲಿ ಹೊಸ ವರ್ಷದ ಆಚರಣೆಗೆ ಜನಜಾತ್ರೆಯೇ ತುಂಬಿರುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಮೆಟ್ರೋ ರೈಲು ನಿಗಮ (ಬಿಎಂಆರ್‌ಸಿಎಲ್) ಪ್ರಯಾಣಿಕರ ಅನುಕೂಲಕ್ಕಾಗಿ ಡಿಸೆಂಬರ್ 31 ರ ಮಧ್ಯರಾತ್ರಿಯಿಂದ ಮಧ್ಯರಾತ್ರಿ 2:15 ರವರೆಗೆ ಮೆಟ್ರೋ ಸೇವೆ ಅವಧಿ ವಿಸ್ತರಿಸಲಾಗಿದೆ. ರಾತ್ರಿ ಇಡೀ ಪಾರ್ಟಿ ಮಾಡಿ ಮನೆ ಸೇರಿಕೊಳ್ಳಲು ಪ್ರಯಾಣಿಕರ ಅನುಕೂಲಕ್ಕಾಗಿ ಸೇವೆ ಅವಧಿ ವಿಸ್ತರಿಸಿ ಬೆಂಗಳೂರು ಮೆಟ್ರೋ ರೈಲು ನಿಗಮ ಪ್ರಕಟಣೆ ಹೊರಡಿಸಿದೆ. ಹೊಸ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಡಿಸೆಂಬರ್ 31ರ ರಾತ್ರಿ 11 ರಿಂದ 10 ನಿಮಿಷಕ್ಕೊಂದು ರೈಲು ಸೇವೆ ಇರಲಿದ್ದು, ಜನವರಿ 1ರಂದು ಮುಂಜಾನೆ 2 ಗಂಟೆಗೆ ಎಲ್ಲ ಮೆಟ್ರೋ ಟರ್ಮಿನಲ್‌ನಿಂದ ಕೊನೆ ರೈಲು ಹೊರಡಲಿದೆ. ಆದ್ರೆ, ಮೆಜೆಸ್ಟಿಕ್‌ನಿಂದ ಮುಂಜಾನೆ 2.40ಕ್ಕೆ ಕೊನೆ ರೈಲು ಸಂಚರಿಸಲಿದೆ ಎಂದು ಬಿಎಂಆರ್‌ಸಿಎಲ್ ಮಾಹಿತಿ ನೀಡಿದೆ.

**ಪೇಪರ್ ಟಿಕೆಟ್ ವ್ಯವಸ್ಥೆ** ಇನ್ನು ಬಿಗ್ರೇಡ್ ರೋಡ್‌ನಲ್ಲಿ ಹೊಸ ವರ್ಷ ಸಂಭ್ರಮಾಚರಣೆ ಮುಗಿಸಿಕೊಂಡು ಎಲ್ಲರೂ ಒಟ್ಟೊಟ್ಟಿಗೆ ತಮ್ಮ ತಮ್ಮ ವಾಸಸ್ಥಳಕ್ಕೆ ತೆರಳು ಎಂಜಿ ರಸ್ತೆಯ ಮೆಟ್ರೋ ನಿಲ್ದಾಣಕ್ಕೆ ಆಗಮಿಸುತ್ತಾರೆ. ಹೀಗಾಗಿ ಭಾರೀ ಜನಸಂದಣಿಯಾಗಲಿದೆ. ಹೀಗಾಗಿ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಮಹಾತ್ಮಗಾಂಧಿ ರಸ್ತೆ ಮೆಟ್ರೋ ನಿಲ್ದಾಣವನ್ನು ಡಿಸೆಂಬರ್ 31ರ ರಾತ್ರಿ 11 ಗಂಟೆಯ ನಂತರ ಪ್ರವೇಶ ಹಾಗೂ ನಿರ್ಗಮನ ದ್ವಾರ ಬಂದ್ ಆಗಲಿವೆ. ಹೀಗಾಗಿ ಪ್ರಯಾಣಿಕರಿಗೆ ಟ್ರಿನಿಟಿ ಅಥವಾ ಕಬ್ಬನ್ ಪಾರ್ಕ್ ಮೆಟ್ರೋ ನಿಲ್ದಾಣದಿಂದ ಮೆಟ್ರೋ ಸೇವೆ ಲಭ್ಯವಾಗಲಿದೆ.

ಬ್ರಿಗೇಡ್ ರಸ್ತೆಯಲ್ಲಿ ಹೊಸ ವರ್ಷ ಸಂಭ್ರಮಾಚರಣೆ ಮುಗಿಸಿಕೊಂಡು ಮೆಟ್ರೋ ಮೂಲಕ ಹೋಗಬೇಕಿರುವವರು ಟ್ರಿನಿಟಿ ಹಾಗೂ ಕಬ್ಬನ್ ಪಾರ್ಕ್ ಮೆಟ್ರೋ ನಿಲ್ದಾಣಕ್ಕೆ ಹೋಗಬೇಕು. ಬಳಿಕ ಮೆಜೆಸ್ಟಿಕ್‌ನಲ್ಲಿ ಮೆಟ್ರೋ ಬದಲಾವಣೆ ಮಾಡಿಕೊಳ್ಳಬಹುದಾಗಿದೆ. ಮುಂಗಡವಾಗಿ ಅಂದು ರಿಟರ್ನ್ ಹೋಗಲು ಐವತ್ತು ರುಪಾಯಿ ಪೇಪರ್ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ.

ಟಿಕೆಟ್ ಪಡೆದುಕೊಳ್ಳಲು ನೂಕುನುಗ್ಗಲು ಆಗುವುದರಿಂದ ಈ ಪೇಪರ್ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ. ಪೇಪರ್ ಟಿಕೆಟ್ ಬೇಗ ಬೇಗ ಹರಿದು ಕೊಡಬಹುದು. ಯಾವುದೇ ಸ್ಕ್ಯಾನ್ ಮಾಡುವ ತಾಪತ್ರಯ ಇರುವುದಿಲ್ಲ. ಇದ-ರಿಂದ ಜನಸಂದಣೆಯೂ ಆಗುವುದಿಲ್ಲ.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 273, Postal Reg No. PMG/KA/NK/BM/135/22-24 / POST AT Vantamury Colony Post Office